RNI.KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 83 ಪುಟ: 06 ಶನಿವಾರ 22-02-2025

Mail:mussanje2010@gmail.com www.mussanjenews.com

ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



ವಾಚ್ ಕೊಡುವುದಾಗಿ ಕರೆದು ಬಾಗಿಲು ಹಾಕಿದ...

50 ದಾಟಿದ್ರೂ ಬ್ಯಾಚುಲರ್ ಆಗಿರೋ ನಟ

ಸನ್ನಿ ಪಾಠ ಯಾಕೆ ಕಲೀಲಿಲ್ಲ..? ಪುಟ 6

# ಎಂಇಎಸ್ ಪುಂಡರ ಬಂಧನ

## ಬೆಳಗಾವಿಯಲ್ಲಿ ರಕ್ಷಣಾ ವೇದಿಕೆ ಪ್ರತಿಭಟನೆ, ಮಾತಿನ ಚಕಮಕಿ; ಆಕ್ರೋಶ

**ಬೆಳಗಾವಿ:** ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಮೇಲಿನ ಹಲ್ಲೆ ಆರೋಪ ಪ್ರಕರಣದಲ್ಲಿ ಒಂದೆಡೆ ಓರ್ವ ಅಪ್ರಾಪ್ತ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದರೆ, ಮತ್ತೊಂದೆಡೆ ಹಲ್ಲೆಗೊಳಗಾದ ಕಂಡಕ್ಟರ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿರುವುದು ಕನ್ನಡ ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ. ಬಸ್ ಕಂಡಕ್ಟರ್ ಮಹಾದೇವಪ್ಪ ಮಲ್ಲಪ್ಪ ಹುಕ್ಕೇರಿ ಅವರ ಮೇಲೆ ನಿನ್ನೆ ಸಣ್ಣ ಬಾಳೇಕುಂದ್ರಿ ಗ್ರಾಮದ ಬಳಿ ಮರಾಠಿ ಮಾತನಾಡದಿರುವುದಕ್ಕೆ 20ಕ್ಕೂ ಹೆಚ್ಚು ಜನರ ಗುಂಪು ಹಲ್ಲೆ ಮಾಡಿತ್ತು ಎಂಬ ಆರೋಪ ಕೇಳಿ ಬಂದಿತ್ತು.

ಈ ಸಂಬಂಧ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಹಲ್ಲೆಗೊಳಗಾದ ಕಂಡಕ್ಟರ್ ದೂರು ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ನಿನ್ನೆ ರಾತ್ರಿಯೇ ಓರ್ವ ಅಪ್ರಾಪ್ತ ಸೇರಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಸಣ್ಣ ಬಾಳೇಕುಂದ್ರಿ ಗ್ರಾಮದ ಮಾರುತಿ ತುರುಮುರಿ, ರಾಹುಲ್ ರಾಜು ನಾಯ್ಡು, ಬಾಳು ಗೋಜಗೇಕರ್ ಬಂಧಿತ ವಯಸ್ಕರರು. ಆರೋಪಿಗಳನ್ನು ಹಿಂಡಲಗಾ ಜೈಲಿಗೆ ಮಾರಿಹಾಳ ಪೊಲೀಸರು ರವಾನಿಸಿದ್ದಾರೆ.

ಬಸ್ ನಿರ್ವಾಹಕನ ಮೇಲೆ ಹಲ್ಲೆ ಪ್ರಕರಣಕ್ಕೆ ಮತ್ತೊಂದು ತಿರುವು ಪಡೆದುಕೊಂಡಿದ್ದು, ಕಂಡಕ್ಟರ್ ಮೇಲೆ ಹಲ್ಲೆ ಮಾಡಿದವರು ಹೊಸ ವರಸೆ ಶುರು ಮಾಡಿದ್ದಾರೆ. ಅಪ್ರಾಪ್ತ ಬಾಲಕಿಯಿಂದ ನಿರ್ವಾಹಕನ ಮೇಲೆ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕೇಸ್ ದಾಖಲಿಸಿದ್ದಾರೆ. ಹಿರಿಯ ಅಧಿಕಾರಿಗಳ ಗಮನಕ್ಕೆ ತರದೇ ಮಾರಿಹಾಳ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.



**ಕನ್ನಡ ಪರ ಹೋರಾಟಗಾರರ ಪ್ರತಿಭಟನೆ:** ಕಂಡಕ್ಟರ್ ಮೇಲೆ ಪೋಕ್ಸೋ ಕೇಸ್ ದಾಖಲಾಗಿರುವುದು ಕನ್ನಡ ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ. ಪೋಕ್ಸೋ ಕೇಸ್ ವಜಾ ಮಾಡುವಂತೆ ಒತ್ತಾಯಿಸಿ ಮಾರಿಹಾಳ ಪೊಲೀಸ್ ಠಾಣೆ ಮುಂದೆ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದಿಂದ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಠಾಣೆಗೆ ಮುತ್ತಿಗೆ ಹಾಕಲು ಕರವೇ ಕಾರ್ಯಕರ್ತರು ಯತ್ನಿಸಿದರು.

ಹಲ್ಲೆ ಪ್ರಕರಣವನ್ನು ಮುಚ್ಚಿ ಹಾಕಲು ಕಂಡಕ್ಟರ್ ಮೇಲೆ ಈ ರೀತಿ ಪೋಕ್ಸೋ ಕೇಸ್ ಹಾಕಲಾಗಿದೆ. ಕಂಡಕ್ಟರ್ ನೆರವಿಗೆ ಬರಬೇಕಿದ್ದ ಪೊಲೀಸರು ಈ ರೀತಿ ವರ್ತಿಸಿದ್ದು ಸರಿಯಲ್ಲ. ಇಡೀ ರಾಜ್ಯಾದ್ಯಂತ ಖಂಡನೆ ವ್ಯಕ್ತವಾಗುತ್ತಿದೆ. ಪ್ರಕರಣ ದಿಕ್ಕು ತಪ್ಪಿಸುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.


**ಏನಿದು ಪ್ರಕರಣ?:** ಬೆಳಗಾವಿ - ಸುಳೇಬಾವಿ ಮಾರ್ಗಮಧ್ಯೆ ಸಂಚರಿಸುವ ಬಸ್‌ನಲ್ಲಿ ಟಿಕೆಟ್ ತೆಗೆದುಕೊಳ್ಳುವ ವಿಚಾರಕ್ಕೆ ಗಲಾಟೆ ನಡೆದಿತ್ತು. ಪುಟ 2

## ಪಕ್ಷಾತೀತವಾಗಿ ಖಂಡಿಸಬೇಕು



ಬಸ್ ನಿರ್ವಾಹಕನ ಮೇಲೆ ಮಹಾರಾಷ್ಟ್ರದಲ್ಲಿ ಎಂಇಎಸ್ ಕಾರ್ಯಕರ್ತರುಹಲ್ಲೆ ನಡೆಸಿರುವ ಘಟನೆಯನ್ನು ಪಕ್ಷಾತೀತವಾಗಿ ಖಂಡಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬೆಳಗಾವಿ ಘಟನೆ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯದಲ್ಲಿದ್ದವರು ಕನ್ನಡದಲ್ಲಿ ಮಾತನಾಡಬೇಕು. ಮರಾಠಿ ಮಾತನಾಡಲ್ಲ. ಆದರೆ, ನಮ್ಮ ಭಾಷೆಯನ್ನು ಕಲಿಯಬೇಕು ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿ ನೂತನ ಮುಖ್ಯಮಂತ್ರಿ ರೇಖಾ ಗುಪ್ತ ಅವರು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.


## ಲೋಕಾಯುಕ್ತ ಎಸ್ಪಿ ವಿರುದ್ಧ ಕಿಡಿ

**ಮೈಸೂರು:** ಮುಡಾ ಕೇಸ್ ಗೆ ಸಂಬಂಧಿಸಿದಂತೆ ತನಿಖಾ ವರದಿ ಪ್ರತಿ ನೀಡಲು ಲೋಕಾಯುಕ್ತ ಎಸ್ ಪಿ ಸತಾಯಿಸು ತ್ತಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಆರೋಪ ಮಾಡಿದ್ದಾರೆ. ಈ ಕುರಿತು ಮಾತನಾಡಿದ ಸ್ನೇಹಮಯಿ ಕೃಷ್ಣ, ಲೋಕಾಯುಕ್ತ ಎಸ್ ಪಿ ವರದಿ ಪ್ರತಿ ನೀಡಲು ಸತಾಯಿಸುತ್ತಿದ್ದಾರೆ. ಆರೋಪಿಗಳ ಜತೆ ಶಾಮೀಲಾಗಿ ರಕ್ಷಣೆ ನೀಡುತ್ತಿದ್ದಾರೆ. ಕೋರ್ಟ್ ಗೆ ಅರ್ಜಿ ಸಲ್ಲಿಸಿ ಪ್ರತಿ ಪಡೆಯುವೆ. ಶೀಘ್ರದಲ್ಲೇ ತಕರಾರು ಅರ್ಜಿ ಸಲ್ಲಿಸುವೆ ಎಂದರು. ವಕೀಲರ ಸಹಾಯ ಪಡೆದು ನಾನೇ ವಾದ ಮಾಡುತ್ತೇನೆ. ಪುಟ 2



## ಕೇಜ್ರಿವಾಲ್ ಸಮಾಜದ ಎದುರು ಮಾದರಿಯಾಗಿರಬೇಕಿತ್ತು

**ಮುಂಬೈ,** ಮಹಾರಾಷ್ಟ್ರ: ಎಎಪಿ ನಾಯಕ ಅರವಿಂದ್ ಕೇಜ್ರಿವಾಲ್ ಒಳ್ಳೆಯ ಕೆಲಸಗಾರ. ಆದರೆ, ಅಬಕಾರಿ ನೀತಿಯಿಂದ ದೆಹಲಿ ಜನರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಇದು ಅವರ ಸೋಲಿಗೂ ಕಾರಣವಾಯಿತು ಎಂದು ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಹೇಳಿದರು.



ದೆಹಲಿಯ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ರೇಖಾ ಗುಪ್ತ ಅವರಿಗೆ ಶುಭಾಶಯ ತಿಳಿಸಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕೇಜ್ರಿವಾಲ್ ಉತ್ತಮ ಕೆಲಸಗಾರನಾದರೂ, ಅವರ ಕೆಲವು ತಪ್ಪು ನಿರ್ಧಾರಗಳಿಗೆ ಜನ ಅವರಿಗೆ ತಕ್ಕ ಪಾಠ ಕಲಿಸಬೇಕಾಯಿತು ಎಂದಿದ್ದಾರೆ.

ಮುಖ್ಯಮಂತ್ರಿಯಾಗಿ ಕೇಜ್ರಿವಾಲ್ ಸಮಾಜದ ಮುಂದೆ ಒಂದು ಮಾದರಿಯಾಗಿರಬೇಕಿತ್ತು. ಆದರೆ, ಕೆಲವು ಜನ ವಿರೋಧಿ ನಿರ್ಧಾರಗಳನ್ನು ಪ್ರಕಟಿಸುವ ಮೂಲಕ ದಾರಿ ತಪ್ಪಿದರು. ಅವರು (ಕೇಜ್ರಿವಾಲ್) ಉತ್ತಮ ಕೆಲಸ ಮಾಡುತ್ತಿದ್ದರಿಂದ ನಾನು ಅವರ ವಿರುದ್ಧ ಏನನ್ನೂ ಮಾತನಾಡಲಿಲ್ಲ.

ಆದರೆ, ನಂತರ ಅವರು ನಿಧಾನವಾಗಿ ಮದ್ಯದಂಗಡಿಗಳತ್ತ ಗಮನ ಕೊಡಲು ಶುರು ಮಾಡಿದರು. ಮದ್ಯದಂಗಡಿಗಳಿಗೆ ಪರವಾನಗಿಗಳನ್ನು ನೀಡಲು ಪ್ರಾರಂಭಿಸಿದರು. ಇದು ನನಗೂ ಬೇಸರ ತರಿಸಿತ್ತು. ಅಬಕಾರಿ ನೀತಿಯಿಂದ ಅಧಿಕಾರ ಕಳೆದುಕೊಳ್ಳಬೇಕಾಯಿತು ಎಂದು ಅಣ್ಣಾ ಹಜಾರೆ ಹೇಳಿದರು. ಪುಟ 2

## ನಾಳೆ ಭಾರತ - ಪಾಕ್ ಮಹಾಯುದ್ಧ

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025ರ ಭಾಗವಾಗಿ ಗುರುವಾರ ನಡೆದಿದ್ದ ಬಾಂಗ್ಲಾದೇಶ ವಿರುದ್ಧದ ಮೊದಲ ಪಂದ್ಯದಲ್ಲಿ ಭಾರತ ಜಯಭೇರಿ ಭಾರಿಸಿರುವುದು ಗೊತ್ತೇ ಇದೆ. ಇದೀಗ ಭಾನುವಾರ (ನಾಳೆ) ಪಾಕ್ ವಿರುದ್ಧ ಕಾಳಗಕ್ಕೆ ಇಳಿಯಲಿದೆ.

ಮೊದಲ ಪಂದ್ಯದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಉತ್ತಮ ಪ್ರದರ್ಶನ ನೀಡಿರುವ ರೋಹಿತ್ ಸೈನ್ಯ ಇದೀಗ ಪಾಕ್ ವಿರುದ್ಧದ ಪಂದ್ಯದಲ್ಲೂ ಅದೇ ಫಾರ್ಮ್ ಮುಂದುವರೆಸಿ ಗೆಲುವು ಸಾಧಿಸಲು ಯೋಜನೆ ರೂಪಿಸಿಕೊಂಡಿದೆ. ಆದರೆ, ಈ ಪಂದ್ಯದಲ್ಲಿ ಒಂದು ಬದಲಾವಣೆ ಮಾಡಲು ಭಾರತ ನಿರ್ಧರಿಸಿದೆ. ಈ ಹಿಂದೆ ಚಾಂಪಿಯನ್ಸ್ ಟ್ರೋಫಿ ಅಂತಿಮ ಪಂದ್ಯದಲ್ಲಿ ಪಾಕ್ ವಿರುದ್ಧ ಸೋಲು ಕಂಡಿದ್ದ ಭಾರತ ಈ ಪಂದ್ಯದಲ್ಲಿ ಗೆದ್ದು ಸೇಡು ತೀರಿಸಿಕೊಳ್ಳಲು ಯೋಜನೆ ರೂಪಿಸಿಕೊಂಡಿದೆ. ಅದಕ್ಕಾಗಿ ಬಲಿಷ್ಠ ತಂಡದೊಂದಿಗೆ ಕಣಕ್ಕಿಳಿಯಲು ಸಿದ್ಧತೆ ನಡೆಸಿದೆ. ಈ ಹಿನ್ನೆಲೆ ತಂಡದಲ್ಲಿ ಪ್ರಮುಖ ಬೌಲರ್ ಬದಲಾವಣೆ ಮಾಡುವ ಪ್ರಯೋಗಕ್ಕೆ ಮುಂದಾಗಿದೆ.

ಸ್ಟಾರ್ ಬೌಲರ್ ಕಳಪೆ ಫಾರ್ಮ್: ಹೌದು, ಸ್ಟಾರ್ ಸ್ಪಿನ್ ಬೌಲರ್ ಕುಲ್ದೀಪ್ ಯಾದವ್ ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದಾರೆ. ಇತ್ತೀಚೆಗೆ ತವರಿನಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯಲ್ಲಿ 2 ಪಂದ್ಯಗಳನ್ನು ಆಡಿದ್ದ ಕುಲ್ದೀಪ್ ಕೇವಲ 2 ವಿಕೆಟ್ ಪಡೆಯವಲ್ಲಿ ಮಾತ್ರ ಯಶಸ್ವಿ ಆಗಿದ್ದರು. ಅಲ್ಲದೇ ಬಾಂಗ್ಲಾ ವಿರುದ್ಧ ಮೊದಲ ಪಂದ್ಯದಲ್ಲಿ ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದರು. ಮಿಸ್ಟರಿ ಸ್ಪಿನ್ನರ್ ಕಣಕ್ಕೆ: ಇದೀಗ ಪಾಕ್ ವಿರುದ್ಧ ಪಂದ್ಯ ಗೆಲ್ಲಲೇಬೇಕು ಎಂಬ ಯೋಜನೆ ರೂಪಿಸಿರುವ ಭಾರತ ಕುಲ್ದೀಪ್ ಬದಲಿಗೆ ಅವರ ಸ್ಥಾನಕ್ಕೆ ಪುಟ 2

## ಹೋಳಿ ಹಬ್ಬದ ಬಗ್ಗೆ ಹೇಳಿಕೆ, ನಿರ್ದೇಶಕಿ ಫರ್ಹಾ ಖಾನ್ ವಿರುದ್ಧ ದೂರು

ಬಾಲಿವುಡ್‌ನ ಖ್ಯಾತ ಡ್ಯಾನ್ಸ್ ಕೊರಿಯೋಗ್ರಾಫರ್, ಸಿನಿಮಾ ನಿರ್ದೇಶಕಿ, ರಿಯಾಲಿಟಿ ಶೋ ಜಡ್ಜ್ ಈಗ ವ್ಲಾಗರ್ ಸಹ ಆಗಿರುವ ಫರ್ಹಾ ಖಾನ್ ವಿರುದ್ಧ ಯೂಟ್ಯೂಬರ್ ಹಿಂದೂಸ್ಥಾನಿ ಬಾವ್ ಅಲಿಯಾಸ್ ವಿಕಾಸ್ ಫಾಠಕ್ ದೂರು ದಾಖಲು ಮಾಡಿದ್ದಾರೆ. ಫರ್ಹಾ ಖಾನ್, ಹಿಂದೂಗಳ ಹಬ್ಬವಾದ ಹೋಲಿ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ, ಇದು ಹಿಂದೂಗಳ ಭಾವನೆಗೆ ಧಕ್ಕೆ ತಂದಿದೆ ಎಂದು ಯೂಟ್ಯೂಬರ್ ಹಿಂದೂಸ್ಥಾನಿ ಬಾವ್ ಆರೋಪ ಮಾಡಿದ್ದಾರೆ.

ಮಾಸ್ಟರ್ ಶೆಫ್ ರಿಯಾಲಿಟಿ ಶೋ ಜಡ್ಜ್ ಆಗಿರುವ ಫರ್ಹಾ ಖಾನ್, ಕಾರ್ಯಕ್ರಮದಲ್ಲಿ ಮಾತನಾಡುತ್ತಾ, 'ಎಲ್ಲ ಕಿಡಿಗೇಡಿಗಳ (ಚಪ್ರಿ) ಬಹಳ ಮೆಚ್ಚಿನ ಹಬ್ಬವೆಂದರೆ ಅದು ಹೋಳಿ ಹಬ್ಬ' ಎಂದಿದ್ದರು. ಹೋಳಿ ಹಬ್ಬದಲ್ಲಿ ತುಂಟರು ಯುವತಿಯರ ಮೇಲೆ ಬಣ್ಣ ಎಸೆಯುವುದು, ಅವರನ್ನು ಕಾಡಿಸುವುದು, ಹೋಲಿ ಹಬ್ಬದಂದು ಸಾರ್ವಜನಿಕವಾಗಿ ಮದ್ಯಪಾನ ಮಾಡುವುದು ಇತರೆಗಳನ್ನು ಮಾಡುವುದು ಹೆಚ್ಚು, ಇದನ್ನು ಗಮನದಲ್ಲಿಟ್ಟುಕೊಂಡು ಫರ್ಹಾ ಖಾನ್ ಹೀಗೆ ಹೇಳಿದ್ದರು.



ಆದರೆ ಯೂಟ್ಯೂಬರ್ ಹಿಂದೂಸ್ಥಾನಿ ಬಾವ್ ಫರ್ಹಾ ಖಾನ್ ಹೇಳಿಕೆ ಹಿಂದೂಗಳ ಭಾವನೆಗೆ ಧಕ್ಕೆ ತಂದಿದೆ. ಫರ್ಹಾ ಖಾನ್ ವಿರುದ್ಧ ಎಫ್‌ಐಆರ್ ದಾಖಲು ಮಾಡಿ ವಿಚಾರಣೆ ನಡೆಸಿ ಶಿಕ್ಷೆ ನೀಡಬೇಕು ಎಂದು ನ್ಯಾಯಾಲಯದಲ್ಲಿ ಮನವಿ ಮಾಡಿದ್ದಾರೆ. ಹಿಂದೂಸ್ಥಾನಿ ಬಾವ್ ಪರ ವಕೀಲ ಮಾತನಾಡಿ, ಫರಾ ಖಾನ್ ಅವರ ಹೇಳಿಕೆಯು ಹಿಂದೂಗಳ ಪುಟ 2

## ನಾನು ಆಕಾಂಕ್ಷಿ ಅಲ್ಲ, ಸಮಯ ಬಂದಾಗ ನೋಡೋಣ

**ಹುಬ್ಬಳ್ಳಿ:** ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಆಕಾಂಕ್ಷಿ ಅಲ್ಲ, ಆದರೆ ಸಮಯ ಬಂದಾಗ ನೋಡೋಣ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.



ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಮಯ ಬಂದಾಗ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಖರ್ಗೆ ಅವರು ಹೇಳಿದ ಮೇಲೆ ಸಮಯ ತೆಗೆದುಕೊಳ್ಳಬಹುದು. ತಕ್ಷಣ ಬದಲಾವಣೆ ಆಗುವುದಿಲ್ಲ ಸಮಯ ತೆಗೆದುಕೊಳ್ಳಬಹುದು ಎಂದರು.

ನಾನು ಆಕಾಂಕ್ಷಿ ಅಲ್ಲ ಸಮಯ ಬಂದಾಗ ನೋಡೋಣ. ಸ್ವಾಭಾವಿಕವಾಗಿ ಅಭಿಮಾನಿಗಳು ಆಸೆ ಪಡ್ತಾರೆ ಸಿಎಂ ಅಧ್ಯಕ್ಷರ ಬದಲಾವಣೆ ವಿಚಾರ ನಮ್ಮ ವ್ಯಾಪ್ತಿಗೆ ಬರಲ್ಲ ನಾವು ಪುಟ 2

## ಶಾಸಕರಿಂದ ಅಹೋರಾತ್ರಿ ಧರಣಿ

ರಾಜಸ್ಥಾನ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಕುರಿತ ಹೇಳಿಕೆಯು ರಾಜಸ್ಥಾನದ ವಿಧಾನಸಭೆಯಲ್ಲಿ ಜಟಾಪಟಿಗೆ ಕಾರಣವಾಗಿದ್ದು, ಕಾಂಗ್ರೆಸ್ ಶಾಸಕರು ಅಹೋರಾತ್ರಿ ಧರಣಿ ನಡೆಸಿದ್ದಾರೆ.

ಶುಕ್ರವಾರದ ಅಧಿವೇಶನದಲ್ಲಿ ಸಚಿವರ ಹೇಳಿಕೆ ಖಂಡಿಸಿ ಸದನದಲ್ಲಿ ಕೋಲಾಹಲ ನಿರ್ಮಾಣವಾಯಿತು. ಈ ವೇಳೆ ಆರು ಶಾಸಕರನ್ನು ಸದನದಿಂದ ಅಮಾನತು ಮಾಡಿತು. ಇದರಿಂದ ರೊಚ್ಚಿಗೆದ್ದ ಕಾಂಗ್ರೆಸ್ ಅಹೋರಾತ್ರಿ ಧರಣಿ ಮಾಡಲು ನಿರ್ಧರಿಸಿತು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಅವಿನಾಶ್ ಗೆಹ್ಲೋಟ್, ಬಜೆಟ್ ಅಧಿವೇಶನದಲ್ಲಿ ಇಂದಿರಾ ಗಾಂಧಿಯನ್ನು ಅಜ್ಜಿ ಎಂದು ಸಂಬೋಧಿಸಿದ ಹಿನ್ನೆಲೆಯಲ್ಲಿ ಈ ಕೋಲಾಹಲ ಆರಂಭವಾಯಿತು.

ಎಲ್ಲ ಯೋಜನೆಗಳಿಗೂ ಅಜ್ಜಿ ಇಂದಿರಾಗಾಂಧಿ ಹೆಸರಿಡುತ್ತೀರಾ?: ಪ್ರಶ್ನೋತ್ತರ ಅವಧಿಯಲ್ಲಿ ಗೆಹ್ಲೋಟ್ 2023 - 24ರ ಬಜೆಟ್‌ನತ್ತ ಕೂಡ ಬೊಟ್ಟು ಮಾಡಿದ್ದು, ನಿಮ್ಮ ಅಜ್ಜಿ ಇಂದಿರಾ ಗಾಂಧಿ ಹೆಸರನ್ನೇ ಎಲ್ಲಾ ಯೋಜನೆಗಳಿಗೆ ಇಡುತ್ತೀರಾ ಎಂದು ಪ್ರಶ್ನಿಸಿದ್ದರು . ಅವರ ಹೇಳಿಕೆ ವಿರುದ್ಧ ಕಾಂಗ್ರೆಸ್ ನಾಯಕರು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು. ಇದರಿಂದಾಗಿಯೇ ಕಲಾಪವನ್ನು ಮೂರು ಬಾರಿ ಮುಂದೂಡಬೇಕಾಯಿತು. ಪುಟ 2



## ಶೆಡ್ ಮೇಲೆ ಮರಳು ಸುರಿದ ಟಿಪ್ಪರ್: ಐವರು ಸಾವು

**ಜಲ್ನಾ (ಮಹಾರಾಷ್ಟ್ರ):** ಸೇತುವೆ ನಿರ್ಮಾಣ ಕಾಮಗಾರಿಗೆ ಬಂದಿದ್ದ ಕಾರ್ಮಿಕರು ಮಲಗಿದ್ದ ಶೆಡ್ ಮೇಲೆ ಟಿಪ್ಪರ್ ಲಾರಿಯೊಂದು ಮರಳು ಸುರಿದ ಪರಿಣಾಮ 17 ವರ್ಷದ ಬಾಲಕ ಸೇರಿದಂತೆ ಐವರು ಕಾರ್ಮಿಕರು ಮರಳಿನಡಿ ಸಿಲುಕಿ ಸಾವನ್ನಪ್ಪಿರುವ ಘಟನೆ ಜಲ್ನಾ ಜಿಲ್ಲೆಯ ಪಸೋಡಿ ಶಿವರಾತ್‌ನಲ್ಲಿ ನಡೆದಿದೆ. ಶನಿವಾರ ಬೆಳಗಿನ ಜಾವ 3.30ಕ್ಕೆ ಜಾಫ್ರಾಬಾದ್ ತಾಲೂಕಿನ ಪಸೋಡಿ–ಚಂದೋಲ್ ರಸ್ತೆಯಲ್ಲಿ ಈ ಘಟನೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಾಫ್ರಾಬಾದ್ ತಾಲೂಕಿನ ಪಸೋಡಿ ಪ್ರದೇಶದಲ್ಲಿ ಸೇತುವೆ ನಿರ್ಮಾಣಕ್ಕಾಗಿ ಕಾರ್ಮಿಕರು ಬಂದಿದ್ದರು. ಸೇತುವೆ ನಿರ್ಮಾಣ ಸ್ಥಳದ ಬಳಿಯ ಶೀಟ್ ಮೆಟಲ್ ಶೆಡ್‌ನಲ್ಲಿ ಕಾರ್ಮಿಕರು ಮಲಗಿದ್ದರು.



ಬೆಳಗಿನ ಜಾವ ಸುಮಾರು 3.30ರ ಸುಮಾರಿಗೆ ಮರಳು ಹೊತ್ತು ಬಂದ ಟಿಪ್ಪರ್ ಚಾಲಕ ಶೆಡ್ ಮೇಲೆ ಮರಳು ಸುರಿದಿದ್ದಾನೆ. ಪರಿಣಾಮ ಶೆಡ್‌ನಲ್ಲಿ ಮಲಗಿದ್ದ 6 ಮಂದಿ ಮರಳಿನೊಳಗೆ ಸಿಲುಕಿಕೊಂಡಿದ್ದಾರೆ. ಶೆಡ್‌ನ ಮುಂಭಾಗದಲ್ಲಿ ಮಲಗಿದ್ದ ಮಹಿಳೆಯೊಬ್ಬರು ಅದನ್ನು ಗಮನಿಸಿ ಕಿರುಚಿಕೊಂಡಿದ್ದಾರೆ. ಇದನ್ನು ಕಂಡ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ನಂತರ ಮಹಿಳೆ ಹತ್ತಿರದ ದನದ ಕೊಟ್ಟಿಗೆಗೆ ಹೋಗಿ ಪುಟ 2

## ಅತಿಥಿ ಶಿಕ್ಷಕರ ಸಂಬಳ ನಿಲ್ಲಿಸಿಲ್ಲ

**ಶಿವಮೊಗ್ಗ:** ರಾಜ್ಯದಲ್ಲಿ ಶಿಕ್ಷಕರ ನೇಮಕಾತಿಗೆ ಸರ್ಕಾರ ಸಿದ್ಧತೆ ನಡೆಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಸಚಿವ ಮಧು ಬಂಗಾರಪ್ಪ, ಶಿಕ್ಷಕರ ನೇಮಕಕ್ಕೆ ಸರ್ಕಾರ ಸಿದ್ಧತೆ ನಡೆಸಿದೆ. ಅತಿಥಿ ಶಿಕ್ಷಕರ ಸಂಬಳವನ್ನು ನಿಲ್ಲಿಸಿಲ್ಲ. ಕೆಲ ತಾಂತ್ರಿಕ ಸಮಸ್ಯೆಯಿಂದ ಅತಿಥಿ ಶಿಕ್ಷಕರ ವೇತನ ನಿಲ್ಲಿಸಲಾಗಿತ್ತು. ನಿನ್ನೆ ಸಚಿವ ಸಂಪುಟದಲ್ಲಿ ಚರ್ಚಿಸಿ ಬಿಡುಗಡೆ ಮಾಡಲಾಗಿದೆ ಎಂದರು. ಹಿಜಾಬ್ ಧರಿಸಿ ಬರುವವರಿಗೆ ದ್ವಿತೀಯ ಪಿಯು ಪರೀಕ್ಷೆಗೆ ಅನುಮತಿ ವಿಚಾರ ಕುರಿತು ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, ಸದ್ಯ ಹಿಜಾಬ್ ಪ್ರಕರಣ ಕೋರ್ಟ್ ನಲ್ಲಿದೆ ಹೀಗಾಗಿ ಹಿಜಾಬ್ ಬಗ್ಗೆ ಯಾವುದೇ ಚರ್ಚೆ ಮಾಡುವುದು ಬೇಡ. ಮೊದಲಿನಂತೆ ಎಸ್ ಎಸ್ ಎಲ್ ಸಿ ಪರೀಕ್ಷೆ ನಡೆಯುತ್ತದೆ. ಈ ಬಾರಿ ಎಸ್ ಎಸ್ ಎಲ್ ಪರಿಕ್ಷೆಯಲ್ಲಿ ಗ್ರೇಸ್ ಮಾರ್ಕ್ಸ್ ಇರಲ್ಲ ಎಂದು ತಿಳಿಸಿದರು.

## ಚುನಾವಣೆ ನಡೆಯಲಿ: ನಾವು ಹಿಂದೆ ಸರಿದಿಲ್ಲ

**ಬೆಂಗಳೂರು:** ಬಿಜೆಪಿ ರಾಜ್ಯಾಧ್ಯಕ್ಷರ ಚುನಾವಣೆ ವಿಚಾರ ಸಂಬಂಧ ನಾವ್ಯಾರು ವಿಚಲಿತರಾಗಿಲ್ಲ. ಚುನಾವಣೆ ಪ್ರಕ್ರಿಯೆ ನಡೆಯಲಿ. ನಾವು ತೆಗೆದುಕೊಂಡ ನಿರ್ಧಾರಿಂದ ಹಿಂದೆ ಸರಿದಿಲ್ಲ ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ತಿಳಿಸಿದರು. ಇಂದು ಮಾತನಾಡಿದ ಕುಮಾರ್ ಬಂಗಾರಪ್ಪ, ಬಸನಗೌಡ ಪಾಟೀಲ್ ಯತ್ನಾಳ್ ಉತ್ತರ ಕರ್ನಾಟಕ ಭಾಗದವರು. ಅವರ ಧ್ವನಿಯಲ್ಲಿ ಏರಿಳಿತ ಇರಬಹುದು. ರಾಜಕೀಯವಾಗಿ ನಮ್ಮ ಮಾತು ನಡವಳಿಕೆ ಪೂರಕವಾಗಿರಬೇಕು ದೇವೇಗೌಡರು ಕುಮಾರಸ್ವಾಮಿ ನಮ್ಮ ಪಕ್ಷದ ಜೊತೆಗಿದ್ದಾರೆ ಎಂದರು. ನಾವು ತೆಗೆದುಕೊಂಡ ನಿರ್ಧಾರದಿಂಧ ಹಿಂದೆ ಸರಿದಿಲ್ಲ. ಚುನಾವಣೆಯಿಂದ ಹಿಂದೆ ಸರಿದ್ದಿದ್ದೇವೆ ಅಂತಾ ಚರ್ಚೆಯಾಗುತ್ತಿದೆ ಕೇಂದ್ರ ನಾಯಕರಿಗೆ ವರದಿ ಸಲ್ಲಿಸಿದ್ದೇವೆ. ಶಿವರಾಜ್ ಸಿಂಗ್ ಚೌಹಾಣ್ ಬರುವ ದಿನಾಂಕ ನಿಗದಿಯಾಗಿಲ್ಲ. ಕೇಂದ್ರದ ವರಿಷ್ಠರು ಯಾವುದೇ ನಿರ್ಧಾರದ ಬಗ್ಗೆ ಚರ್ಚೆಮಾಡಿಲ್ಲ ನಾಮಪತ್ರ ಸಲ್ಲಿಕೆ ಮಾಡುತ್ತೇವೆ. ನಮ್ಮ ಹೇಳಿಕೆಗೆ ನಾವು ಬದ್ಧರಿದ್ದೇವೆ. ನೋಟಿಸ್ ಅನ್ನೋದು ರಾಜಕೀಯವಲ್ಲ. ಶಾಸಕ ಯತ್ನಾಳ್ ಉತ್ತರ ನೀಡಿದ್ದಾರೆ. ಯತ್ನಾಳ್ ಹಿಂದೆ ನಾವೆಲ್ಲಾ ಇದ್ದೇವೆ ಎಂದು ಕುಮಾರ್ ಬಂಗಾರಪ್ಪ ತಿಳಿಸಿದರು.

# ಬನಶಂಕರಿ ದೇವಾಲಯದಲ್ಲಿ ನಾಳೆ ಉಚಿತ ಸಾಮೂಹಿಕ ವಿವಾಹ

**ಬೆಂಗಳೂರು:** ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ ವತಿಯಿಂದ 26 ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಾಲಯದ ಆವರಣದಲ್ಲಿ ನಾಳೆ ನಡೆಯಲಿರುವ ಈ ವಿವಾಹ ಕಾರ್ಯಕ್ರಮದಲ್ಲಿ 69 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ ಎಂದು ವೇದಿಕೆ ವ್ಯವಸ್ಥಾಪಕ ಹಾಗೂ ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಎ.ಎಚ್.ಬಸವರಾಜ್ ತಿಳಿಸಿದ್ದಾರೆ.

ವೃಕ್ಷ ಮಾತೆ ಸಾಲು ಮರದ ತಿಮಕ್ಕ, ಮುರಾರಿ ಸ್ವಾಮಿಗಳ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಕುಮಾರಸ್ವಾಮಿ ಶ್ರೀಗಳು ನವ ವಧು-ವರರಿಗೆ ಆರ್ಶಿವಚನ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರತಿ ಪಕ್ಷದ ನಾಯಕ ಹಾಗೂ ಮಾಜಿ ಡಿಸಿಎಂ ಆರ್.ಅಶೋಕ್ ವಹಿಸಲಿದ್ದು, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಜ್ಯೋತಿ ಬೆಳಗಿಸಲಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಅವರು ಪ್ರಮಾಣ ಪತ್ರ ವಿತರಣೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಪಿ.ಸಿ.ಮೋಹನ್, ಡಾ.ಸಿ.ಎನ್. ಮಂಜುನಾಥ್, ಶಾಸಕರಾದ ರವಿ ಸುಬ್ರಮಣ್ಯ, ಸಿ.ಕೆ.ರಾಮಮೂರ್ತಿ, ಜಿ.ಡಿ.ಹರೀಶ್‌ಗೌಡ, ರಮೇಶ್ ರೆಡ್ಡಿ,






ಮಾಜಿ ಸಚಿವರಾದ ಪಿ.ಜಿ.ಆರ್.ಸಿಂಧ್ಯಾ, ಕಟ್ಟಾ ಸುಬ್ರಮಣ್ಯ ನಾಯ್ಡು, ವಿಧಾನ ಪರಿಷತ್‌ನ ಮಾಜಿ ಸದಸ್ಯ ಟಿ.ಎ.ಶರವಣ, ಮಾಜಿ ಮೇಯರ್ ಡಿ.ವೆಂಕಟೇಶ್ ಮೂರ್ತಿ, ಜೆಡಿಎಸ್ ಮುಖಂಡ ರಮೇಶ್‌ಗೌಡ, ಚಿತ್ರ ನಟಿ ತಾರಾ ಅನುರಾಧ, ಚಿತ್ರನಟ ಶ್ರೀನಗರ ಕಿಟ್ಟಿ, ಬನಶಂಕರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್.ಕೃಷ್ಣಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಇದೇ ಸಂದರ್ಭದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಸೂರಿ ಮೀರಾಣಿ ಜೀ, ಸಮಾಜ ಸೇವಕ ಬಾಗೇಗೌಡ, ಕೆ. ಕುಮಾರ್, ರಾಜೇಂದ್ರ, ಕೆ.ವೆಂಕಟೇಶ್, ಸತೀಶ್, ಕೆ.ಎಲ್ ಚಾವಣ್, ಬಂಜಾರ ಜನಸೇವಾ ಸಂಘದ ಅಧ್ಯಕ್ಷ ಎ.ಆರ್. ಹನುಮಂತ ನಾಯ್ಕೆ ಅವರುಗಳನ್ನು ಸನಾನಿಸಲಾಗುವುದು.ನಾಳಿನ ಸಾಮೂಹಿಕ ವಿವಾಹದಲ್ಲಿ ಸತಿ-ಪತಿಗಳಾಗಲಿರುವ ನವ ಜೋಡಿಗಳಿಗೆ ಉಚಿತ ತಾಳಿ, ಸೀರೆ, ಪಂಚೆ, ಬಾಗೀನ ಮತ್ತಿತರ ವಸ್ತುಗಳನ್ನು ಉಚಿತವಾಗಿ ನೀಡಲಾಗುವುದು. ಜೋಡಿಗಳ ಜೊತೆ ಆಗಮಿಸುವ ಕುಟುಂಬಸ್ತರಿಗೆ ಉಚಿತ ಊಟದ ವ್ಯವಸ್ಥೆ ಮಾಡಲಾಗಿದೆ.

# 'ಛಾವಾ ದೇಶಾದ್ಯಂತ ಸದ್ದು ಮಾಡಿದೆ': ಮೋದಿ

**ನವದೆಹಲಿ:** ಚಿತ್ರಮಂದಿರಗಳಲ್ಲಿ ಉತ್ತಮ ಪ್ರದರ್ಶನ ಮುಂದುವರಿಸಿರುವ ಛಾವಾ ಚಿತ್ರವನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಅಖಿಲ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದ ಮೋದಿ, ಈ ಪೀರಿಯಾಡಿಕಲ್ ಡ್ರಾಮಾ ರಾಷ್ಟ್ರವ್ಯಾಪಿ ಸಂಚಲನ ಸೃಷ್ಟಿಸಿದೆ. "ಇನ್ ದಿನೋ ತೊ ಛಾವಾ ಕಿ ಧೂಮ್ ಮಚಿ ಹುಯಿ ಹೈ" (ಛಾವಾ ದೇಶಾದ್ಯಂತ ಧೂಳೆಬ್ಬಿಸಿದೆ) ಎಂದು ಪ್ರಶಂಶಿಸಿದರು. ಮರಾಠಿ ಚಲನಚಿತ್ರಗಳ ಜೊತೆಗೆ ಹಿಂದಿ ಸಿನಿಮಾವನ್ನು ಉನ್ನತೀಕರಿಸುವಲ್ಲಿ ಮಹಾರಾಷ್ಟ್ರದ ಕೊಡುಗೆಯನ್ನು ಅವರು ಒತ್ತಿ ಹೇಳಿದರು.



ಲಕ್ಷ್ಮಣ್ ಉಟೇಕರ್ ನಿರ್ದೇಶನದ 'ಛಾವಾ' ತನ್ನ ಮೊದಲ ವಾರ ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ಕಲೆಕ್ಷನ್ ಮಾಡಿದ್ದು, ಒಟ್ಟು 219.25 ಕೋಟಿ ರೂ. ಗಳಿಸಿದೆ. ಕಲೆಕ್ಷನ್ ವಿಚಾರದಲ್ಲಿ ಎರಡನೇ ಶುಕ್ರವಾರದವರೆಗೂ ವೇಗ ಕಾಯ್ದುಕೊಂಡಿದ್ದು, ಹಿಂದಿನ ದಿನಕ್ಕಿಂತ ಶೇ.6ರಷ್ಟು ಏರಿಕೆ ಕಂಡಿದೆ.

# ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಬೆಂಗಳೂರು ವಿವಿಯಿಂದ ಹೊಸ ಕ್ರಮ

**ಬೆಂಗಳೂರು:** ಬಿ.ಇಡ್ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯುವ ನಿಟ್ಟಿನಲ್ಲಿ ಬೆಂಗಳೂರು ವಿವಿ ಕ್ರಮಕ್ಕೆ ಮುಂದಾಗಿದೆ. ಇದಕ್ಕಾಗಿ ಆನ್‌ಲೈನ್‌ನಲ್ಲಿ ಪತ್ರಿಕೆಗಳನ್ನು ವಿತರಿಸಲಿದೆ. ಹೊಸ ವ್ಯವಸ್ಥೆ ಅಡಿ ಕಾಲೇಜುಗಳಿಗೆ ಪರೀಕ್ಷೆ ಆರಂಭಕ್ಕೆ ಕೇವಲ 30 ನಿಮಿಷಕ್ಕೆ ಮುನ್ನ ಎನ್‌ಕ್ರಿಪ್ಟ್ ಮಾಡಿದ ಪ್ರತಿಗಳನ್ನು ನೀಡಲಾಗುವುದು ಈ ಮೂಲಕ ಪರೀಕ್ಷೆ ಪತ್ರಿಕೆಯ ಮುದ್ರಣ ಮತ್ತು ವಿತರಣೆಯನ್ನು ಭದ್ರಪಡಿಸಲು ಕ್ರಮವಹಿಸಲಾಗಿದೆ.

ವಿಶೇಷವಾಗಿ ಬಿಇಡಿ ಪರೀಕ್ಷೆಗಳಲ್ಲಿ ಅಕ್ರಮವನ್ನು ತಡೆಯುವ ನಿಟ್ಟಿನಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಸದ್ಯ ಬೆಂಗಳೂರು ವಿವಿ ಅಡಿ 30 ಬಿಎಡ್ ಕಾಲೇಜುಗಳಿದ್ದು, 6,000 ವಿದ್ಯಾರ್ಥಿಗಳು ಸೆಮಿಸ್ಟರ್ ಪರೀಕ್ಷೆ ಎದುರಿಸಲಿದ್ದಾರೆ. ಬೆಂಗಳೂರು ವಿವಿ ಅನುಸಾರ, ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ (ಎನ್‌ಸಿಟಿಇ) ನಾಲ್ಕು ವರ್ಷದ ಬಿಎಡ್ ಕಾರ್ಯಕ್ರಮವನ್ನು ಅಧಿಕೃತಗೊಳಿಸಿದೆ. ಆದರೆ, ಬಹುತೇಕ ಸಂಸ್ಥೆಗಳು ಎರಡು ವರ್ಷದ ಕೋರ್ಸ್ ನೀಡುವುದನ್ನು ಮುಂದುವರೆಸಿದೆ. ಪ್ರತಿ ಸೆಮಿಸ್ಟರ್‌ನಲ್ಲಿ ಪ್ರಶ್ನೆ ಪತ್ರಿಕೆ ಮುದ್ರಿಸಿ ಮತ್ತು ವಿತರಣೆ ಮಾಡಲಾಗುತ್ತಿತ್ತು. ಇದೀಗ ಆನ್‌ಲೈನ್ ಮೂಲಕ ಯಾವುದೇ ಅಕ್ರಮ ಇಲ್ಲದೇ ವ್ಯವಸ್ಥಿತವಾಗಿ ನಿರ್ವಹಣೆ ಮಾಡಲು ಮುಂದಾಗಿದೆ.

ಬಿಎಡ್ ಕಾಲೇಜಿನ ಪರೀಕ್ಷ ಅಕ್ರಮದ ಆರೋಪವನ್ನು ಸದ್ಯ ವಿವಿ ಮೇಲ್ವಿಚಾರಣೆ ಮಾಡುತ್ತಿದೆ. ಅದರಲ್ಲೂ ತರಗತಿಗೆ ಹಾಜರಾಗದೇ ಪರೀಕ್ಷೆಗೆ ಮಾತ್ರ ಹಾಜರಾಗುವ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ. ಕೆಲವು ಸಂಸ್ಥೆಗಳು ಪ್ರಶ್ನೆ ಪತ್ರಿಕೆ ಸೋರಿಕೆಗೆ ಅವಕಾಶ ಮಾಡಿಕೊಡುತ್ತಿದೆ ಎಂಬ ಆರೋಪ ಕೂಡ ಕೇಳಿ ಬಂದಿದೆ. ಈ ಹಿನ್ನೆಲೆ ಡಿಜಿಟಲ್ ವಿತರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.





ಈ ಡಿಜಿಟಲ್ ವಿತರಣೆ ಆರಂಭದಲ್ಲಿ ಕಡಿಮೆ ವಿದ್ಯಾರ್ಥಿಗಳಿರುವ ಬಿಇಡಿ ಕಾಲೇಜುಗಳಿಗೆ ಸೀಮಿತವಾಗಿದೆ. ಈ ವ್ಯವಸ್ಥೆ ಇಲ್ಲಿ ಯಶಸ್ವಿಯಾದರೆ, ಇದನ್ನೂ ಪದವಿ ಕೋರ್ಸ್‌ಗಳಿಗೂ ಅಳವಡಿಸಲು ವಿವಿ ಚಿಂತನೆ ನಡೆಸಿದೆ.

ಹೇಗೆ ನಿರ್ವಹಣೆ?: ಹೊಸ ಪ್ರಕ್ರಿಯೆಯಲ್ಲಿ ಪ್ರಶ್ನೆ ಪತ್ರಿಕೆ ಪಡೆಯಲು ಕಾಲೇಜು ಪ್ರಾಂಶುಪಾಲರಿಗೆ ಲಾಗಿನ್ ಐಡಿ ನೀಡಲಾಗುವುದು. ಪ್ರಾಂಶುಪಾಲರು ಒನ್ ಟೈಮ್ ಪಾಸ್ವರ್ಡ್ ಮೂಲಕ ಅದನ್ನು ನಮೂದಿಸಬೇಕು. ಪರೀಕ್ಷೆಗೆ 30 ನಿಮಿಷ ಮುನ್ನ ಪತ್ರಿಕೆಯನ್ನು ಕಳುಹಿಸಲಾಗುವುದು ಅದರ ಪ್ರಿಂಟ್ ಅನ್ನು ಅಲ್ಲಿಯೇ ಪಡೆದು ವಿದ್ಯಾರ್ಥಿಗಳಿಗೆ ನೀಡಲಾಗುವುದು. ಇಲ್ಲಿ ಅಕ್ರಮ ತಡೆಯುವ ಉದ್ದೇಶದ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲಾಗಿದೆ.

ಪ್ರಾಂಶುಪಾಲರು ಹೇಳಿದ್ದಿಷ್ಟು: ಈ ಕುರಿತು ಮಾತನಾಡಿರುವ ಬಿಎಡ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರಭಾವತಿ, ಇದು ಅಕ್ರಮ ತಡೆಯುವಲ್ಲಿ ಪ್ರಮುಖ ಸಕಾರಾತ್ಮಕ ಹೆಜ್ಜೆಯಾಗಿದೆ. ಹೊಸ ವ್ಯವಸ್ಥೆಯು ಸೋರಿಕೆ ಅಪಾಯವನ್ನು ಕಡಿಮೆ ಮಾಡುತ್ತದೆ. ಈ ವ್ಯವಸ್ಥೆಯಲ್ಲಿ ಎನ್‌ಕ್ರಿಪ್ಶನ್ ಮತ್ತು ಪಾಸ್‌ವರ್ಡ್ ನವೀಕರಣ ಹೊಂದಿರುವುದು ಬಹಳ ಮುಖ್ಯ ಎಂದರು.

ಬೆಂಗಳೂರು ವಿವಿ ಈ ಹಿಂದೆ ಪಿಯು ಪೂರಕ ಪರೀಕ್ಷೆಯಲ್ಲಿ ಇದೆ ವಿಧಾನ ಅನುಸರಿಸಿದರೂ, ಬಳಿಕ ಇದನ್ನು ನಿಲ್ಲಿಸಿತ್ತು. ಇದೀಗ ಮತ್ತೆ ಡಿಜಿಟಲ್ ತಂತ್ರಜ್ಞಾನದ ಮೊರೆ ಹೋಗಿದೆ. ಈ ಮೂಲಕ ಪರೀಕ್ಷೆ ಪ್ರಕ್ರಿಯೆ ಮತ್ತು ಅಕ್ರಮ ಚಟುವಟಿಕೆ ತಡೆಯುವ ಗುರಿ ಹೊಂದಲಾಗಿದೆ.

## ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್

**ಮೈಸೂರು:** ಉದಯಗಿರಿ ಪೊಲೀಸ್ ಠಾಣೆಯಲ್ಲಿ ದಾಂಧಲೆ ಸಂಬಂಧ ಮುಸ್ಲಿಮರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಗರದ ಯುವ ಕಾಂಗ್ರೆಸ್ ಮುಖಂಡ ಸೈಯದ್ ಅಬ್ರರ್ ನೀಡಿದ ದೂರಿನ ಅನ್ವಯ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಳೆದ ಫೆ.10ರಂದು ಮುಸ್ಲಿಂ ಯುವಕರ ಗುಂಪು ದಾಂಧಲೆ ನಡೆಸಿತ್ತು. ಈ ಪ್ರಕರಣದ ಕುರಿತು ಮಾಧ್ಯಮಗಳೊಂದಿಗೆ ಮಾತನಾಡುವಾಗ ಪ್ರತಾಪ್ ಸಿಂಹ ಅವರು ಮುಸ್ಲಿಮರ ಬಗ್ಗೆ ಅವಹೇಳಕಾರಿ ಹೇಳಿಕೆ ನೀಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖವಾಗಿದೆ.

# ಅಬಕಾರಿ ವಸತಿ ಸಮುಚ್ಚಯದ ಒಂದೇ ಮನೆಯಲ್ಲಿ ಮೂವರ ಶವಗಳು ಪತ್ತೆ

**ಕೊಚ್ಚಿ:** ಕೇರಳದ ಕೊಚ್ಚಿಯಲ್ಲಿರುವ ಕೇಂದ್ರ ಅಬಕಾರಿ ಅಧಿಕಾರಿಗಳ ವಸತಿ ಸಮುಚ್ಚಯದಲ್ಲಿ ಮೂರು ಕೊಳೆತ ಶವಗಳು ಪತ್ತೆಯಾಗಿವೆ. ಕೊಚ್ಚಿಯ ಕಾಕಿನಾಡದಲ್ಲಿರುವ ಸಮುಚ್ಚಯದಲ್ಲಿ ಶವಗಳು ಪತ್ತೆಯಾಗಿದ್ದು, ಮೃತರನ್ನು ಹಿರಿಯ ಕಸ್ಟಮ್ಸ್ ಅಧಿಕಾರಿ. ಅವರ ಸಹೋದರಿ ಮತ್ತು ತಾಯಿ ಎಂದು ಗುರುತಿಸಲಾಗಿದೆ.

ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಭಾವಿಸಲಾಗಿದೆ. ಶವಗಳ ಕೊಳೆತ ಸ್ಥಿತಿಯಿಂದಾಗಿ ಮೃತಪಟ್ಟವರನ್ನು ಗುರುತಿಸುವುದು ಕಷ್ಟಕರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮುಚ್ಚಯ ಲಾಕ್ ಆಗಿತ್ತು, ಗಂಟೆಗಳ ಪ್ರಯತ್ನದ ನಂತರ ಅಧಿಕಾರಿಗಳು ಕಟ್ಟಡದ ಸುತ್ತಮುತ್ತಲು ಪರಿಶೀಲಿಸಿದರು. ಅಲ್ಲಿ ವಾಸಿಸುವ ಅಧಿಕಾರಿ ಕೆಲವು ದಿನಗಳಿಂದ ರಜೆಯಲ್ಲಿದ್ದರು. ಆದರೆ ಅವರು ಕೆಲಸಕ್ಕೆ ಮರಳದಿದ್ದಾಗ ಸಹೋದ್ಯೋಗಿಗಳು ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ.

ಕೆಟ್ಟ ವಾಸನೆ ಬರುತ್ತಿರುವುದನ್ನು ಗಮನಿಸಿದ ಅವರು ಕಿಟಕಿಯ ಮೂಲಕ ನೋಡಿದಾಗ ಶವ ನೇತಾಡುತ್ತಿರುವುದು ಕಂಡುಬಂದಿದೆ. ಪೊಲೀಸರಿಗೆ ತಕ್ಷಣ ಮಾಹಿತಿ ನೀಡಲಾಯಿತು. ಅವರು ಮನೆಗೆ ಬಂದಾಗ ಮತ್ತೊಂದು ಕೋಣೆಯಲ್ಲಿ ಇನ್ನೊಂದು ಶವ ಇರುವುದು ಕಂಡುಬಂದಿದೆ. ನಂತರದ ಹುಡುಕಾಟಗಳಲ್ಲಿ ಮತ್ತೊಂದು ಕೋಣೆಯಲ್ಲಿ ಹಾಸಿಗೆಯ ಮೇಲೆ ಮಲಗಿದ್ದ ಅಧಿಕಾರಿಯ ತಾಯಿ ಶವ ಇರಬಹುದು ಎಂದು ಶಂಕಿಸಲಾಗಿದೆ. ಒಟ್ಟು ಮೂರು ಶವಗಳು ಪತ್ತೆಯಾಗಿವೆ.

ಅಧಿಕಾರಿ ಕುಟುಂಬವೂ ಕಳೆದ ಒಂದೂವರೆ ವರ್ಷದಿಂದ ಸಮುಚ್ಚಯದಲ್ಲಿ ವಾಸಿಸುತ್ತಿತ್ತು, ಆದರೆ ನೆರೆಹೊರೆಯವರೊಂದಿಗೆ ಅಷ್ಟಾಗಿ ಮಾತನಾಡುತ್ತಿರಲಿಲ್ಲ. ಕೊಳೆತ ದೇಹಗಳು ಪ್ರದೇಶದಲ್ಲಿ ತೀವ್ರ ದುರ್ವಾಸನೆ ಬೀರುತ್ತಿದ್ದು, ಅನುಮಾನಗಳನ್ನು ಹುಟ್ಟುಹಾಕಿದೆ. ಎಲ್ಲರ ಸಾವು ಆತ್ಮಹತ್ಯೆಯೇ ಎಂಬುದನ್ನು ತಿಳಿಯಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ



ನಗರದ ನಾರಾಯಣ ಇ-ಟೆಕ್ನೋ ಶಾಲೆಯಲ್ಲಿ ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನ ಹಾಗೂ ವೇಷಭೂಷಣ ಸ್ಪರ್ಧೆಯಲ್ಲಿ ಮಕ್ಕಳು ವಿವಿಧ ರೀತಿಯ ವೇಷಗಳನ್ನು ಧರಿಸಿದ್ದರು.

## ಮೊದಲ ಪುಟದಿಂದ

### ಎಂಇಎಸ್ ಪುಂಡಾಟಿಕೆ ಆಕ್ರೋಶ

ಬಾಳೇಕುಂದ್ರಿಗೆ ಸಿಬಿಟಿಯಿಂದ ಹುಡುಗ ಮತ್ತು ಹುಡುಗಿ ಬಸ್ ಹತ್ತಿದ್ದರು. ಹುಡುಗಿಯು ಹುಡುಗನದ್ದೂ ಸೇರಿ ಎರಡು ಟಿಕೆಟ್ ಕೇಳಿ ಪಡೆದಿದ್ದಳು. ಮಹಿಳೆಯರಿಗೆ ಉಚಿತ ಟಿಕೆಟ್ ಇದ್ದುದರಿಂದ ನಿರ್ವಾಹಕ ಮಹಾದೇವ್ ಎರಡೂ ಉಚಿತ ಟಿಕೆಟ್ ನೀಡಿಬಿಟ್ಟಿದ್ದರು. ಬಳಿಕ ಇನ್ನೊಬ್ಬರು ಯಾರು ಅಂತ ಆ ಹುಡುಗಿಯನ್ನು ಕೇಳಿದಾಗ ಪಕ್ಕದಲ್ಲಿದ್ದ ಹುಡುಗನನ್ನು ತೋರಿಸಿದ್ದಳು. ಇದರಿಂದ ನಿರ್ವಾಹಕ ಮಹಾದೇವ್, ಹುಡುಗರಿಗೆ ಉಚಿತ ಟಿಕೆಟ್ ನೀಡಿದರೆ ನನ್ನನ್ನು ಸಸ್ಪೆಂಡ್ ಮಾಡುತ್ತಾರೆ, ಉಚಿತ ಟಿಕೆಟ್ ಹೆಣ್ಣು ಮಕ್ಕಳಿಗೆ ಮಾತ್ರ, ನೀವು ಟಿಕೆಟ್ ಪಡೆಯುವಾಗ ಸರಿಯಾಗಿ ಹೇಳಿ ತೆಗೆದುಕೊಳ್ಳಬೇಕು ಅಂತ ಹುಡುಗಿಗೆ ತಿಳಿ ಹೇಳಿದ್ದರು. ಅದಕ್ಕೆ ಆ ಯುವತಿ ಮರಾಠಿಯಲ್ಲಿ ಮಾತಾಡು, ಮರಾಠಿ ಕಲಿತುಕೊಳ್ಳಬೇಕು ಎಂದಿದ್ದಳು. ಮುಂದೆ ಬಾಳೇಕುಂದ್ರಿ ಕೆಎಚ್ ಬರುತ್ತಿದ್ದಂತೆ ಹುಡುಗಿಯ ಕಡೆಯ 20 ಜನರು ನಿರ್ವಾಹಕ ಮಹಾದೇವ್ ಮೇಲೆ ಹಲ್ಲೆ ಮಾಡಿದ್ದರು ಎಂದು ಆರೋಪಿಸಲಾಗಿತ್ತು.

ಜಿಲ್ಲಾ ಉಸ್ತುವಾರಿ ಸಚಿವರ ಪ್ರತಿಕ್ರಿಯೆ: ಬಸ್ ನಿರ್ವಾಹಕನ ಮೇಲೆ ಮರಾಠಿಗರ ಹಲ್ಲೆ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೊಳಿ ಘಟನೆ ಬಗ್ಗೆ ಈಗಾಗಲೇ ತನಿಖೆ ನಡೀತಾ ಇದೆ. ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಅದು ಏನಾಗುತ್ತೆ ಕಾದು ನೋಡೋಣ ಎಂದು ಹೇಳಿದ್ದಾರೆ.

ಪೊಲೀಸ್ ಆಯುಕ್ತರ ಮಾಹಿತಿ: ಬಾಳೇಕುಂದ್ರಿ ಗ್ರಾಮದಲ್ಲಿ ಪ್ರಯಾಣಿಕ ಮತ್ತು ಕಂಡಕ್ಟರ್ ನಡುವೆ ಜಗಳ ಆಗಿದೆ. ಇದೇ ವಿಚಾರಕ್ಕೆ ಬಸ್ ಕಂಡಕ್ಟರ್ ಮೇಲೆ ಹಲ್ಲೆಯಾಗಿದೆ. ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲು ಮಾಡಿದ್ದೇವೆ. ನಾಲ್ಕು ಜನ ಆರೋಪಿಗಳನ್ನ ಬಂಧಿಸಿದ್ದೇವೆ. ಮೂರು ತಂಡಗಳನ್ನ ರಚನೆ ಮಾಡಿ ಓಡಿ ಹೋದವರಿಗೆ ಶೋಧ ನಡೆಸಿದ್ದೇವೆ. ಭಾಷಾ ವಿಚಾರಕ್ಕೆ ಗಲಾಟೆಯಾಗಿದೆ ಅನ್ನೋ ಮಾಹಿತಿ ಇದೆ. ಸದ್ಯ ಬಸ್ ಕಂಡಕ್ಟರ್ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾಹಿತಿ ನೀಡಿದ್ದಾರೆ.

ಪೋಕ್ಸೋ ಕೇಸ್ ದಾಖಲು ವಿಚಾರಕ್ಕೆ ಪ್ರತಿಕ್ರಿಯೆ: ಬಸ್ ಕಂಡಕ್ಟರ್ ಮೇಲೆ ಪೋಕ್ಸೋ ಕೇಸ್ ದಾಖಲು ವಿಚಾರಕ್ಕೆ ಪ್ರತಿಕ್ರಿಯಿಸಿದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಘಟನೆಗೆ ಸಂಬಂಧಿಸಿದಂತೆ ಒಂದು ಕೌಂಟರ್ ಕೇಸ್ ಕೂಡ ದಾಖಲಾಗಿದೆ. ಬಸ್ ಕಂಡಕ್ಟರ್ ಅಸಭ್ಯವಾಗಿ ವರ್ತನೆ ಮಾಡಿದ್ದಾರೆ ಅಂತಾ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸತ್ಯಾಂಶ ಏನಿದೆ ಎನ್ನುವುದನ್ನು ನಾವು ತನಿಖೆ ಮಾಡುತ್ತಿದ್ದೇವೆ. ಸೆಕ್ಷನ್ 12 ಪ್ರಕಾರ ಕೇಸ್ ಕೊಟ್ಟಿದ್ದಾರೆ. ತನಿಖೆಯಲ್ಲಿ ಸರಿಯಾದ ಮಾಹಿತಿ ಸಿಗುತ್ತದೆ. ಈ ಸಮಯದಲ್ಲಿದ್ದ ಬಸ್ ನಲ್ಲಿ ಬೇರೆ ಪ್ರಯಾಣಿಕರ ಹೇಳಿಕೆ ಪಡೆಯುತ್ತೇವೆ. ಸುಳ್ಳು ಆರೋಪಗಳ ಕುರಿತು ಕೂಡ ತನಿಖೆ ಮಾಡುತ್ತೇವೆ. ನಾವು ಕೇಸ್ ತೆಗೆದುಕೊಳ್ಳದಿದ್ದರೆ ಅವರು ಬೇರೆ ಬೇರೆ ಕಡೆ ಹೋಗುತ್ತಿದ್ದರು. ಹೀಗಾಗಿ ನಾವು ಕೇಸ್ ಪಡೆದು ತನಿಖೆ ಮಾಡುತ್ತೇವೆ. ಸತ್ಯಾಂಶ ಹೊರ ಬರುತ್ತದೆ ಎಂದು ಸ್ಪಷ್ಟಪಡಿಸಿದರು. ಇನ್ನು ಮಹಾರಾಷ್ಟ್ರದಲ್ಲಿ ಕರ್ನಾಟಕ ಬಸ್ ಮೇಲೆ ದಾಳಿ ವಿಚಾರಕ್ಕೆ ಮಹಾರಾಷ್ಟ್ರ ಗಡಿ ಭಾಗದ ಎಸ್‌ಪಿಗಳ ಜೊತೆಗೆ ನಾನು ಮಾತಾಡಿದ್ದೇನೆ ಎಂದು ಇದೇ ವೇಳೆ ಅವರು ಸ್ಪಷ್ಟಪಡಿಸಿದರು.

### ಮಾದರಿಯಾಗಿರಬೇಕಿತ್ತು

ಇತ್ತೀಚೆಗಷ್ಟೇ ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡಿದ್ದು, ಬಿಜೆಪಿ ಅಧಿಕ ಸ್ಥಾನ ಗಳಿಸುವ ಮೂಲಕ 27 ವರ್ಷಗಳ ಬಳಿಕ ದೆಹಲಿಯ ಅಧಿಕಾರದ ಗದ್ದುಗೆ ಹಿಡಿದಿದೆ. ಫಲಿತಾಂಶದ ದಿನವೂ ಆಪ್ ಪಕ್ಷದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದ ಅಣ್ಣಾ ಹಜಾರೆ, ಎಎಪಿಯ ಕಳಪೆ ಪ್ರದರ್ಶನಕ್ಕೆ ಅದರ ನಾಯಕತ್ವ ಮತ್ತು ಭ್ರಷ್ಟಾಚಾರ ಹಗರಣಗಳಲ್ಲಿ ಭಾಗಿಯಾಗಿದ್ದೇ ಕಾರಣ ಎಂದು ಹೇಳಿದ್ದರು.

ಎಎಪಿಯ ನಾಯಕ ಕೇಜ್ರಿವಾಲ್, ಭ್ರಷ್ಟಾಚಾರ ವಿರೋಧಿ ಚಳವಳಿಯಲ್ಲಿ ಅಣ್ಣಾ ಹಜಾರೆ ಅವರ ಸಹವರ್ತಿಯಾಗಿದ್ದರು. ಆಗಿನ ಯುಪಿಎ ಸರ್ಕಾರದ ವಿರುದ್ಧದ ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಹಜಾರೆ ಅವರ ಮೌತ್ ಪೀಸ್ ಆಗಿದ್ದ ಕೇಜ್ರಿವಾಲ್, ಬಳಿಕ ತಮ್ಮದೇ ಸ್ವಂತ ಪಕ್ಷ ಕಟ್ಟಿ ಮುನ್ನೆಲೆಗೆ ಬಂದವರು.

ಭ್ರಷ್ಟಾಚಾರ ವಿರೋಧಿ ಹೋರಾಟದ ಮೂಲಕ ಖ್ಯಾತಿ ಗಳಿಸಿ, ಸತತ ಮೂರು ಅವಧಿಯಿಂದ ಅಧಿಕಾರದಲ್ಲಿ ಶೀಲಾ ದೀಕ್ಷಿತ್ ಆಡಳಿತವನ್ನು ಕೊನೆಗೊಳಿಸಿದ ಹೆಗ್ಗಳಿಕೆ ಕೇಜ್ರಿವಾಲ್ ಅವರದ್ದು, ಮೊದಲ ಬಾರಿಯ ಎಲೆಕ್ಷನ್ ನಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ವಿಫಲರಾದರೂ ಎರಡನೇ ಚುನಾವಣೆಯಲ್ಲಿ 70 ಸ್ಥಾನಗಳಲ್ಲಿ 67 ಸ್ಥಾನಗಳನ್ನು ಗೆಲ್ಲುವ ಮೂಲಕ ಕೇಜ್ರಿವಾಲ್ ನೇತೃತ್ವದ ಆಪ್ ಇತಿಹಾಸ ಬರೆದಿತ್ತು.

### ಎಸ್ಪಿ ವಿರುದ್ಧ ಕಿಡಿ

ನನ್ನ ಆತ್ಮಸ್ಥೈರ್ಯ ಕುಗ್ಗಿಸಲು ಯಾರಿಂದಲೂ ಸಾಧ್ಯವಿಲ್ಲ. ಫೋನ್ ಮಾಡಿದರೂ ಎಸ್ ಪಿ ಉತ್ತರ ಕೊಡುತ್ತಿಲ್ಲ. ದೂರುದಾರರಿಗೆ ಕಿರುಕುಳ ಕೊಡುವುದೇ ಅವರ ಉದ್ದೇಶ ಎಂದು ಸ್ನೇಹಮಯಿ ಕೃಷ್ಣ ಕಿಡಿಕಾರಿದರು.

### ಫರ್ಹಾ ವಿರುದ್ಧ ದೂರು

ಧಾರ್ಮಿಕ ಭಾವನೆಗಳನ್ನು ಅವಮಾನಿಸಿದೆ ಎಂದು ನನ್ನ ಕಕ್ಷಿದಾರರು ನಂಬುತ್ತಾರೆ. ಪವಿತ್ರ ಹಬ್ಬವನ್ನು ವಿವರಿಸಲು 'ಚಪ್ರಿ' (ಕಿಡಿಗೇಡಿಗಳು) ಎಂಬ ಪದವನ್ನು ಬಳಸುವುದು ಅತ್ಯಂತ ಅನುಚಿತವಾಗಿದೆ ಮತ್ತು ಕೋಮು ಅಶಾಂತಿಗೆ ಕಾರಣವಾಗಬಹುದು' ಎಂದಿದ್ದಾರೆ.

ಇದೇ ಹಿಂದೂಸ್ಥಾನಿ ಬಾವ್, ನಿರ್ಮಾಪಕಿ ಏಕ್ತಾ ಕಪೂರ್ ವಿರುದ್ಧ ದೂರು ದಾಖಲು ಮಾಡಿದ್ದರು. ಏಕ್ತಾ ಕಪೂರ್ ಸಹ ಒಡೆತನದ ಆಲ್ಟ್ ಬಾಲಾಜಿ ಒಟಿಟಿಯಲ್ಲಿನ ವೆಬ್ ಸರಣಿ ಒಂದರಲ್ಲಿ ಸೈನಿಕರನ್ನು ಅವಹೇಳನೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ವೆಬ್ ಸರಣಿಯಲ್ಲಿ ಸೈನಿಕನ ಪಾತ್ರಧಾರಿಯೋರ್ವ ಸಮವಸ್ತ್ರ ಧರಿಸಿ ಲೈಂಗಿಕತೆಗೆ ಇಳಿಯುತ್ತಾನೆ ಆ ದೃಶ್ಯದ ಬಗ್ಗೆ ಹಿಂದೂಸ್ಥಾನಿ ಬಾವ್ ಅಸಮಾಧಾನ ವ್ಯಕ್ತಪಡಿಸಿ, ದೂರು ದಾಖಲಿಸಿದ್ದರು.

### ನಾನು ಆಕಾಂಕ್ಷಿ ಅಲ್ಲ,

ಕೇವಲ ಮಂತ್ರಿ ಅಷ್ಟೆ ಏನಿದ್ರೂ ಹೈಕಮಾಂಡ್ ನಿರ್ಧಾರ ಎಂದರು. ಡಿಕೆ ಶಿವಕುಮಾರ್ ಈಗಲ್ಲ ಮೊದಲನಿಂದಲೂ ರೇಸ್ ನಲ್ಲಿದ್ದಾರೆ. ಸಮಯಕ್ಕಾಗಿ ಕಾಯಬೇಕು ಕಾದು ನೋಡೋಣ ಎಂದು ಸತೀಶ್ ಜಾರಕಿಹೊಳಿ ತಿಳಿಸಿದರು.

### ಮಹಾಯುದ್ಧ

ವರುಣ್ ಚಕ್ರವರ್ತಿ ಅವರನ್ನು ಕರೆತರಲು ಪ್ಲಾನ್ ರೂಪಿಸಿದೆ. ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ವರುಣ್ 5 ಪಂದ್ಯಗಳಿಂದ 14 ವಿಕೆಟ್ ಪಡೆದಿದ್ದರು. ನಂತರ ಎರಡನೇ ಏಕದಿನ ಪಂದ್ಯದಲ್ಲೂ ಬೌಲಿಂಗ್ ಮಾಡಿ 1 ವಿಕೆಟ್ ಉರುಳಿಸಿದ್ದರು. ಈ ಹಿನ್ನೆಲೆ ಪಾಕ್ ವಿರುದ್ಧದ ಪಂದ್ಯಕ್ಕೆ ಕಣಕ್ಕಿಳಿಸುವ ಸಾಧ್ಯತೆ ದಟ್ಟವಾಗಿದೆ.

### ಅಹೋರಾತ್ರಿ ಧರಣಿ

ಗದ್ದಲ ನಿಲ್ಲದೇ ಇರುವುದರಿಂದ ಹಾಗೂ ಸದನದ ಕಲಾಪ ಅಸ್ತವ್ಯಸ್ಥಗೊಳಿಸಿದ್ದಾರೆ ಎಂದು ಸ್ಪೀಕರ್ ಕಾಂಗ್ರೆಸ್‌ನ ಆರು ಜನ ಶಾಸಕರನ್ನು ಅಮಾನತಿನಲ್ಲಿಟ್ಟಿರುವುದಾಗಿ ಘೋಷಿಸಿದರು. ಹೀಗಾಗಿ ವಿಪಕ್ಷ ಕಾಂಗ್ರೆಸ್ ಅಹೋರಾತ್ರಿ ಧರಣಿ ನಡೆಸುವ ನಿರ್ಧಾರ ಕೈಗೊಂಡಿತು. ಸರ್ಕಾರದ ಮುಖ್ಯ ವಿಪ್ ಜೋಗೇಶ್ವರ್ ಗಾರ್ಗ್ ಕಾಂಗ್ರೆಸ್ ಶಾಸಕರಾದ ಗೋವಿಂದ್ ಸಿಂಗ್, ದೊತಸರ, ರಾಮ್ಕೇಶ್ ಮೀನಾ, ಅಮಿನ್ ಕಾಜ್ಜಿ, ಜಾಕಿರ್ ಹುಸೇನ್, ಹಕಂ ಅಲಿ ಮತ್ತು ಸಂಜಯ್ ಕುಮಾರ್ ಅವರನ್ನು ಧ್ವನಿ ಮತದ ಮೂಲಕ, ಅಶಿಸ್ತಿನ ಕಾರಣ ನೀಡಿ ಅಮಾನತು ಮಾಡಲಾಗಿದೆ.

ಆರು ಶಾಸಕರ ಅಮಾನತಿನ ಬಳಿಕ ರಾಜಸ್ಥಾನ ವಿಧಾನಸಭೆ ಸ್ಪೀಕರ್ 11 ಗಂಟೆಗೆ ಸಭೆಯನ್ನು ಮುಂದೂಡಿದ್ದರು. ಸ್ಪೀಕರ್ ಅವರ ನಿರ್ಧಾರ ಹಾಗೂ ಸಚಿವರ ಹೇಳಿಕೆ ಹಿಂಪಡೆಯಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ರಾತ್ರಿ ಇಡೀ ಸದನದಲ್ಲಿ ಕಳೆದರು.

ಪ್ರತಿಭಟನಾಕಾರರಿಗೆ ಊಟ, ಹಾಸಿಗೆ ವ್ಯವಸ್ಥೆ ಮಾಡಿದ ಸ್ಪೀಕರ್: ಇನ್ನು ಸ್ಪೀಕರ್, ಪ್ರತಿಭಟನಾ ನಿರತ ಕಾಂಗ್ರೆಸ್ ಸದಸ್ಯರಿಗೆ ಊಟ, ಹಾಸಿಗೆ ಸೇರಿದಂತೆ ವಿವಿಧ ಸವಲತ್ತನ್ನು ನೀಡುವಂತೆ ವಿಧಾನಸಭೆಯ ಅಧಿಕಾರಿಗಳಿಗೆ ಸೂಚಿಸಿದ್ದರು. ಅವರ ನಿರ್ದೇಶನದಂತೆ ಅಧಿಕಾರಿಗಳು ಅಗತ್ಯ ವ್ಯವಸ್ಥೆ ಮಾಡಿದ್ದರು. ಮತ್ತೊಂದು ಕಡೆ ಈ ಘಟನೆ ಖಂಡಿಸಿ ಫೆ 22ರಂದು ಕಾಂಗ್ರೆಸ್ ಎಲ್ಲಾ ಜಿಲ್ಲಾ ಮುಖ್ಯ ಕಚೇರಿಯಲ್ಲಿ ಪ್ರತಿಭಟನೆ ಆಯೋಜಿಸಲು ನಿರ್ಧರಿಸಿದೆ.

ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಗರಂ: ವಿಪಕ್ಷ ನಾಯಕ ಟಿಕರಾಮ್ ಜುಲ್ಲೆ ಮಾತನಾಡಿ, ಮೂವರು ಸಚಿವರು ಹಿರಿಯ ಕಾಂಗ್ರೆಸ್ ಶಾಸಕರೊಂದಿಗೆ ನಿನ್ನೆ ರಾತ್ರಿ ಮಾತನಾಡಿದ್ದಾರೆ. ಆದರೆ ಆ ಮಾತುಕತೆ ಫಲಪ್ರದವಾಗದೇ ಇರುವುದರಿಂದ ನಮ್ಮ ಧರಣಿಯನ್ನು ಮುಂದುವರೆಸಿದ್ದೇವೆ ಎಂದರು.

ಸಚಿವ ಗೆಹ್ಲೋಟ್ ತಮ್ಮ ಹೇಳಿಕೆಯನ್ನು ಹಿಂಪಡೆಯುವಂತೆ ನಾವು ಬೇಡಿಕೆ ಇಟ್ಟಿದ್ದೇವೆ. ಈ ಪದಗಳನ್ನು ತೆಗೆದು ಹಾಕಲಾಗಿದೆ. ಆದರೂ ಸರ್ಕಾರವೇ ಸದನವನ್ನು ನಡೆಸಲು ಮುಂದಾಗುತ್ತಿಲ್ಲ ಎಂದು ವಿಪಕ್ಷ ನಾಯಕರು ಆರೋಪಿಸಿದರು.

ಮಾಜಿ ಸಿಎಂ ಮತ್ತು ಹಿರಿಯ ಕಾಂಗ್ರೆಸ್ ನಾಯಕ ಅಶೋಕ್ ಗೆಹ್ಲೋಟ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಆಡಳಿತರೂಢ ಸರ್ಕಾರದ ನಾಯಕರು ಸುಖಾಸುಮ್ಮನೇ ವಿಪಕ್ಷಗಳನ್ನು ಪ್ರಚೋದಿಸಿದ್ದು ಇಷ್ಟಕ್ಕೆಲ್ಲ ಕಾರಣವಾಗಿದೆ. ಅನಗತ್ಯವಾಗಿ ಇಂದಿರಾ ಗಾಂಧಿ ಹೆಸರನ್ನು ಎಳೆದು ತರಲಾಗಿದೆ. ಇದಾದ ಬಳಿಕವೂ ಪರಿಸ್ಥಿತಿಯನ್ನು ಹತೋಟಿಗೆ ತರುವ ಎಲ್ಲ ಅವಕಾಶಗಳು ಸರ್ಕಾರಕ್ಕೆ ಇತ್ತು. ಆದರೂ ಅವರು ಏನನ್ನೂ ಮಾಡಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಟೋಂಕ್ ಶಾಸಕ ಸಚಿನ್ ಪೈಲಟ್ ಕೂಡ ಈ ವಿಷಯದ ಬಗ್ಗೆ ಪ್ರತಿಕ್ರಿಯಿಸಿದ್ದು, ಶಾಸಕರ ಅಮಾನತು ರದ್ದುಗೊಳಿಸುವಂತೆ ಸ್ಪೀಕರ್‌ಗೆ ಆಗ್ರಹಿಸಿದ್ದಾರೆ.

### ಟಿಪ್ಪರ್: ಐವರು ಸಾವು

ರೈತರನ್ನು ಕರೆದು, ಅವರು ಮರಳನ್ನು ತೆಗೆದಿದ್ದಾರೆ. ಆದರೆ ಅಷ್ಟೊತ್ತಿಗಾಗಲೇ 6 ಮಂದಿಯಲ್ಲಿ 5 ಮಂದಿ ಜೀವಂತ ಸಮಾಧಿಯಾಗಿದ್ದು, 12 ವರ್ಷದ ಬಾಲಕಿಯೊಬ್ಬಳನ್ನು ಮಾತ್ರ ರಕ್ಷಿಸಲು ಸಾಧ್ಯವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಶೆಡ್‌ನಲ್ಲಿ ಕಾರ್ಮಿಕರು ಮಲಗಿರುವ ಬಗ್ಗೆ ಟಿಪ್ಪರ್ ಚಾಲಕನಿಗೆ ತಿಳಿದಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮೃತರನ್ನು ಸಿಲ್ಲೋಡ್ ತೆಹಸಿಲ್‌ನ ಗೋಲೆಗಾಂವ್ ನಿವಾಸಿಗಳಾದ ಗಣೇಶ್ ಕಾಶಿನಾಥ್ ಧನ್ವಾಯಿ (50), ಅವರ ಮಗ ಭೂಷಣ್ ಧನ್ವಾಯಿ (17), ಬುಲ್ಢಾನ ದಾಹಿದ್ ನಿವಾಸಿ ರಾಜೇಂದ್ರ ದಗ್ಗುಬಾ ವಾಘ್ (40), ಭೋಕರ್ದನ್ ತೆಹ್ಸಿಲ್‌ನ ಪದ್ಮಾವತಿ ಗ್ರಾಮದ ನಿವಾಸಿ ಸುನಿಲ್ ಸಮಧಾನ್ ಸಪ್ಕಲ್ (20), ಜಮ್ನೇರ್‌ನ ತೊಂಡಾಪುರದ ನಿವಾಸಿ ಸುಪ್ಪು ಅಹೆರ್ (38) ಎಂದು ಗುರುತಿಸಲಾಗಿದೆ. ಮೃತರೆಲ್ಲರೂ ಪರಸ್ಪರ ಹತ್ತಿರದ ಸಂಬಂಧಿಕರಾಗಿದ್ದಾರೆ

ಗುತ್ತಿಗೆದಾರ ಕಾಮಗಾರಿಗೆ ಅಗ್ಗದ ಮರಳು ಪಡೆಯಲು ರಾತ್ರಿ ವೇಳೆ ಅಕ್ರಮವಾಗಿ ಮರಳು ತಂದು ಇಲ್ಲಿ ಸಂಗ್ರಹಿಸುತ್ತಿದ್ದ ಎನ್ನಲಾಗಿದೆ. ಗುತ್ತಿಗೆದಾರನ ನಿರ್ಲಕ್ಷ್ಯದಿಂದ ಐದು ಜನರು ಜೀವ ಕಳೆದುಕೊಳ್ಳುವಂತಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಘಟನೆ ನಡೆದ ಬೆನ್ನಲ್ಲೇ ಜಾಫ್ರಾಬಾದ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಇಂಗಲ್ ಸ್ಥಳಕ್ಕೆ ಧಾವಿಸಿದರು. ಪೊಲೀಸರು ಮೃತದೇಹಗಳನ್ನು ವಶಕ್ಕೆ ಪಡೆಯಲು ಪ್ರಯತ್ನಿಸಿದಾಗ, ಸ್ಥಳೀಯ ಗ್ರಾಮಸ್ಥರು ಪಂಚನಾಮೆ ನಡೆಸದೇ ಶವಗಳನ್ನು ವಶಕ್ಕೆ ಪಡೆಯಲು ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು. ಗ್ರಾಮಸ್ಥರು ವಿರೋಧದ ನಂತರ, ಜಾಫ್ರಾಬಾದ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ವಿ. ಇಂಗಲ್ ತಮ್ಮ ತಂಡಕ್ಕೆ ಪಂಚನಾಮೆಯನ್ನು ನಡೆಸಲು ಸೂಚಿಸಿದರು. ಮತ್ತು ಮರಳು ಅಕ್ರಮವಾಗಿ ಸಾಗಿಸಲಾಗಿದೆ ಎಂದು ಆರೋಪಿಸಿದ ಕಾರಣ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

# ವಿಎಸ್‌ಎಸ್‌ಎನ್ ಅಧ್ಯಕ್ಷರ ಅವಿರೋಧವಾಗಿ ಆಯ್ಕೆ

ಕೊರಟಗೆರೆ: ಕೊರಟಗೆರೆ ತಾಲ್ಲೂಕಿನ ಕಸಬಾ ವಿ.ಎಸ್.ಎಸ್.ಎನ್ ನೂತನ ಅಧ್ಯಕ್ಷರಾಗಿ ಕೆ.ಎಸ್.ವಿನಯ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
ಕೊರಟಗೆರೆ ಪಟ್ಟಣದಲ್ಲಿರುವ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ನಿರ್ದೇಶಕರಿದ್ದು ಹಿಂದಿನ ಅಧ್ಯಕ್ಷ ಹೆಚ್.ಸಿ.ರಾಜಣ್ಣ ರವರರಾಜಿನಾಮೆಯಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ವಿ.ಎಸ್.ಎಸ್.ಎನ್ ಕಛೇರಿಯಲ್ಲಿ ನಡೆದಅಧ್ಯಕ್ಷರಚುನಾವಣೆಯಲ್ಲಿ ನಿರ್ದೇಶಕ ಕೆ.ಎಸ್.ವಿನಯ್‌ಕುಮಾರ್ ಅರ್ಜಿ ಸಲ್ಲಿಸಿದ್ದರು. ಅಧ್ಯಕ್ಷ ಸ್ಥಾನಕ್ಕೆ ಒಂದೇಅರ್ಜಿ ಸಲ್ಲಿಕೆ ಆಗಿದ್ದರಿಂದ ಕೆ.ಎಸ್.ವಿನಯ್‌ಕುಮಾರ್‌ರವರನ್ನು ಅವಿರೋಧವಾಗಿ ಅಧ್ಯಕ್ಷರನ್ನಾಗಿ ಚುನಾವಣಾಧಿಕಾರಿಗುರುರಾಜ್ ಘೋಷಿಸಿದ್ದಾರೆ.
ನೂತನಅಧ್ಯಕ್ಷ ವಿನಯ್‌ಕುಮಾರ್ ಮಾತನಾಡಿ, ಸಂಘದಎಲ್ಲಾ ನಿರ್ದೇಶಕರ ಸಹಕಾರದಿಂದಅವಿರೋಧವಾಗಿಅಧ್ಯಕ್ಷನಾಗಿಆಯ್ಕೆಯಾಗಿದ್ದೇನೆ, ಕ್ಷೇತ್ರದ ಶಾಸಕರು ಹಾಗೂ ಗೃಹಸಚಿವರಾದ ಡಾ.ಜಿ.ಪರಮೇಶ್ವರ್ ಹಾಗೂ ಸಹಕಾರ ಸಚಿವರಾದಕೆ.ಎನ್. ರಾಜಣ್ಣರವರ ಆಶೀರ್ವಾದದಿಂದ ಎಲ್ಲಾ ನಿರ್ದೇಶಕರನ್ನು ಒಟ್ಟುಗೂಡಿಸಿಕೊಂಡು ಈ ನಮ್ಮ ಸಹಕಾರ ಸಂಘವನ್ನು ಮತ್ತಷ್ಟು ಶಕ್ತಿಯುತವನ್ನಾಗಿ ಮಾಡುತ್ತೇವೆಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸುವುದಾಗಿ ಹೇಳಿದರು.




ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ಹನುಮಾನ್ ಮಾತನಾಡಿ ಈ ಸಹಕಾರ ಸಂಘಕ್ಕೆ ಇಲ್ಲಿಯವರೆಗೂ 4 ಕೋಟಿ ಕೆ.ಸಿ.ಸಿ.ಸಾಲವನ್ನು 700 ಕ್ಕೂ ಹೆಚ್ಚು ರೈತರಿಗೆ ನೀಡಲಾಗಿದೆ, ಮುಂದಿನ ದಿನಗಳಲ್ಲಿ ಗೃಹ ಸಚಿವರು ಹಾಗೂ ಸಹಕಾರ ಸಚಿವರ ಮಾರ್ಗದರ್ಶನದಲ್ಲಿ ನೂತನಅಧ್ಯಕ್ಷರಾದ ವಿನಯ್‌ಕುಮಾರ್ ಉಳಿದ ರೈತರಿಗೆ ಸಾಲ ನೀಡುವ ಕೆಲಸವನ್ನು ಮಾಡಲಿದ್ದಾರೆಎಂದರು.
ನಿರ್ದೇಶಕ ಕೆ.ವಿ.ಪುರುಷೋತ್ತಮ್ ಮಾತನಾಡಿ ತಾಲ್ಲೂಕಿನಲ್ಲಿಯೇ ಕಸಬಾ ವಿ.ಎಸ್.ಎಸ್.ಎನ್‌ಅತಿದೊಡ್ಡ ಸಹಕಾರ ಸಂಘವಾಗಿದೆ, ಕೊರಟಗೆರೆ ಪಟ್ಟಣ, ಹುಲಿಕುಂಟೆ, ಹಂಚಿಹಳ್ಳಿ ಗ್ರಾಮ ಪಂಚಾಯ್ತಿಗಳು ಹಾಗೂ ನೀಲಗೊಂಡನಹಳ್ಳಿಯ ಗ್ರಾಮ ಪಂಚಾಯ್ತಿಯ ಕೆಲವು ಗ್ರಾಮಗಳನ್ನು ಸಹಕಾರ ಸಂಘವು ವ್ಯಾಪ್ತಿಯನ್ನು ಹೊಂದಿದೆ, ಕೆಲವು ವರ್ಷಗಳ ಹಿಂದೆ ಸಂಪೂರ್ಣವಾಗಿ ಮುಚ್ಚಿಹೋಗಿದ್ದ ಈ ಸಂಘವನ್ನು ಸಹಕಾರ ಸಚಿವರಾದಕೆ. ಎನ್‌ರಾಜಣ್ಣನವರು ಮತ್ತೆ ಮುನ್ನೆಲೆಗೆತಂದು ಈ ಭಾಗದರೈತರಿಗೆ ನೆರವಾದರು, ಕ್ಷೇತ್ರದಜನಪ್ರಿಯ ಶಾಸಕರು ಹಾಗೂ ಗೃಹ ಸಚಿವರಾದ ಡಾ.ಜಿ.ಪರಮೇಶ್ವರರವರಅನುದಾನ ನೇತೃತ್ವದಿಂದ ಹಾಗೂ ಸಹಕಾರ ಸಚಿವರರಾದಕೆ.ಎನ್. ರಾಜಣ್ಣನವರ ಮಾರ್ಗದರ್ಶನದಿಂದ ನೂತನಅಧ್ಯಕ್ಷರು ಈ ಸಹಕಾರ ಸಂಘವನ್ನು ಮತ್ತುಷ್ಟು ಸದೃಡಪಡಿಸಲ್ಲಿದ್ದಾರೆಎಂದರು.
ಈ ಸಂದರ್ಭದಲ್ಲಿ ಸಂಘದಉಪಾಧ್ಯಕ್ಷೆ ಸುಂದರಮ್ಮ, ನಿರ್ದೇಶಕರುಗಳಾದ ಹೆಚ್.ಸಿ.ರಾಜಣ್ಣ, ಕೃಷ್ಣಮೂರ್ತಿ, ಪುಟ್ಟನರಸಯ್ಯ, ಸುರೇಶ್, ರಮೇಶ್, ನೇತ್ರಾವತಿ, ತಿಮ್ಮಪ್ಪ, ದಿವಾಕರ, ಮೇಲ್ವಿಚಾರಕತಿಮ್ಮರಾಜು, ಮುಖ್ಯಕಾರ್ಯನಿರ್ವಾಹಕಾಧಿಕಾರಿ ಬಿ.ಓ.ಕೃಷ್ಣಮೂರ್ತಿ, ದಿವಾಕರ್, ಮಾರುತಿ ಹಾಜರಿದ್ದರು ನೂತನಅಧ್ಯಕ್ಷರನ್ನು ಬ್ಲಾಕ್‌ಕಾಂಗ್ರೆಸ್‌ಅಧ್ಯಕ್ಷಅಶ್ವಥನಾರಾಯಣ್, ಜೆಡಿಎಸ್ ನೂತನತಾಲ್ಲೂಕುಅಧ್ಯಕ್ಷಕಾವರಾಜು, ಪ.ಪಂ ಸದಸ್ಯ ಓಬಳರಾಜು, ಮಾಜಿಉಪಾಧ್ಯಕ್ಷ ಮಂಜುನಾಥ್, ಮಾಜಿ ಸದಸ್ಯ ಲಾರಿ ಸಿದ್ದಪ್ಪ,ತುಂಗಾಮಂಜುನಾಥ್, ಸಿದ್ದಲಿಂಗಪ್ಪ. ಗಂಗಾಧರಪ್ಪ, ಕಾರ್‌ಮಹೇಶ್, ಶಿವಾನಂದ್, ನಟರಾಜು, ಕಾಕಿಮಲ್ಲಯ್ಯ ಸೇರಿದಂತೆಇತರರು ಹಾಜರಿದ್ದರು.

# ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಜನತೆಗೆ ಕರೆ

**ಮಾಲೂರು:** ರೈತರು ಹಲಸಿನ ಗಿಡ ಬೆಳೆದು ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಗಳಿಸಬಹುದು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ವತಿಯಿಂದ ತೋಟಗಾರಿಕೆ ಬೆಳೆಗಳಿಗೆ 1 ಲಕ್ಷದಿಂದ 3 ಲಕ್ಷ ವರೆಗೆ ಸಾಲ ಪಡೆದು ಸದಸ್ಯರು ಅನುಷ್ಠಾನ ಮಾಡಿದರೆ ಸಹಾಯಧನವಾಗಿ 5000 ರೂ ನೀಡಲಾಗುವುದು ಎಂದು ಕೃಷಿ ಅಧಿಕಾರಿ ಮಧುರಾಜ್ ಹೇಳಿದ್ದಾರೆ.
ತಾಲ್ಲೂಕಿನ ತೋರ್ನಹಳ್ಳಿ, ಹುಂಗೇನಹಳ್ಳಿ ಹಾಗೂ ರಾಮೇನಹಳ್ಳಿ ಗ್ರಾಮದ ಸದಸ್ಯರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ವತಿಯಿಂದ ಒಂದು ದಿನದ ಕೃಷಿ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲಾಯಿತು.
ಕೋಲಾರ ತಾಲೂಕಿನ ಗ್ರಾಮದ ಹರಟಿ ಮಲ್ಲಾಂಡಹಳ್ಳಿ ರೈತರಾದ ಶಂಕರಪ್ಪ ರವರು ಥಾಯಿ ತಳಿ ಹಲಸು ಬೆಳದಿರುವ ಪ್ರಾತ್ಯಕ್ಷತೆ ಮೂಲಕ ಗಿಡದಿಂದ ಗಿಡಕ್ಕೆ 10 ಅಡಿ ಸಾಲಿನಿಂದ ಸಾಲಿಗೆ 15 ಅಡಿ ಅಂತರದಲ್ಲಿ ಹಲಸಿನ ಗಿಡ ನಾಟಿ ಮಾಡಿ ಅದರ ಮಧ್ಯ ವಿವಿಧ ರೀತಿಯ ತರಕಾರಿ



ಬೆಳೆ ಕಲ್ಲಂಗಡಿ ಬೆಳದಿದ್ದು. ಹಲಸು ಮೂರು ವರ್ಷದ ಬೆಳಯಾಗಿದ್ದು. ಮೂರು ವರ್ಷದ ನಂತರ ಒಂದು ಗಿಡದಲ್ಲಿ ಕನಿಷ್ಠ 30 ಕಾಯಿ ಬಿಡುತ್ತದೆ ಮತ್ತು ಒಂದು ಕೆಜಿಗೆ 30 ರೂಪಾಯಿಯಂತೆ 300 ಗಿಡದಿಂದ 4500 ಕಾಯಿ ಬೆಳೆಯಬಹುದು ಇದರಿಂದ ಕನಿಷ್ಠ ಒಂದು ಎಕರೆಗೆ 10 ಲಕ್ಷದಿಂದ 15 ಲಕ್ಷದವರೆಗೂ ಹಲಸಿನ ಕಾಯಿಯಿಂದ ಆದಾಯ ಬರುತ್ತದೆ ಮತ್ತು ಕಂಪನಿಯಿಂದ 30 ವರ್ಷದವರೆಗೂ ಅಗ್ರಿಮೆಂಟ್ ಮಾಡಿಕೊಂಡು ಹಾಗೂ ಐದು ವರ್ಷಕ್ಕೊಮ್ಮೆ ರಿನಿವಲ್ ಮಾಡುತ್ತಾರೆ. ಯಾಕಂದರೆ ಹೆಚ್ಚುವರಿ ಇಳುವರಿ ಬಂದಾಗ ಅದಕ್ಕೆ ಕೆಜಿಗೆ ಹೆಚ್ಚುವರಿ ಬೆಲೆ ನೀಡಲು ಐದು ವರ್ಷಕ್ಕೊಮ್ಮೆ ರಿನಿವಲ್ ಮಾಡುತ್ತಾರೆ. ಹಲಸಿನ ಪೌಡರ್ ಅನ್ನೋದು ಒಂದು ಆರೋಗ್ಯಕಾರಿ ಆಹಾರ ಪದಾರ್ಥವಾಗಿದ್ದು ಬಿಪಿ ಶುಗರ್ ಲೆವೆಲ್ ಅನ್ನು ಕಂಟ್ರೋಲ್ ಮಾಡಲು.ಸಹಾಯಕವಾಗುತ್ತದೆ.ಇದನ್ನು ಬೆಳಗಿನ ತಿಂಡಿ ಊಟದ ಜೊತೆ ತೆಗೆದುಕೊಳ್ಳಬಹುದು ಅಥವಾ ಮೊಸರು ಜ್ಯೂಸ್ ನೊಂದಿಗೆ ಬೆರೆಸಿ ಊಟದ ನಂತರ ಕುಡಿಯಬಹುದು.ಮತ್ತು ಇಡ್ಲಿ ಚಪಾತಿ ಹಿಟ್ಟಿನೊಂದಿಗೆ ಕಲಸಿ ದೋಸೆ ಇಡ್ಲಿ ಚಪಾತಿ ತಯಾರಿಸಿ ತಿನ್ನಬಹುದು ಇದರಲ್ಲಿ ವಿಟಮಿನ್ ಎ,ಕ್ಯಾಲ್ಸಿಯಂ ನಂತಹ ಉಪಯುಕ್ತ ಅಂಶಗಳಿದ್ದು ಬಿಪಿ ಶುಗರ್ ಅನ್ನು ಕಂಟ್ರೋಲ್ ನಲ್ಲಿ ಇಡುತ್ತದೆ ಆದ್ದರಿಂದ ರೈತರು ಹಲಸಿನ ಗಿಡ ಹಾಕಿ ಬೆಳೆದು ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಗಳಿಸಬಹುದು ಹಾಗೂ ನಮ್ಮ ಧರ್ಮಸ್ಥಳ ಸಂಸ್ಥೆ ವತಿಯಿಂದ ತೋಟಗಾರಿಕೆ ಬೆಳೆಗಳಿಗೆ ಒಂದು ಲಕ್ಷದಿಂದ ಮೂರು ಲಕ್ಷ ವರೆಗೆ ಸಾಲ ಪಡೆದು ಸದಸ್ಯರು ಅನುಷ್ಠಾನ ಮಾಡಿದರೆ ಸಹಾಯಧನವಾಗಿ 5000 ರೂಗಳನ್ನು ನೀಡುತ್ತೇವೆ ಎಂದರು.
ಈ ಸಂದರ್ಭದಲ್ಲಿ ಕೋಲಾರ ತಾಲೂಕಿನ ಕೃಷಿ ಅಧಿಕಾರಿ ವಿಜಯ್ ಕುಮಾರ್, ರೈತ ಶಂಕರಪ್ಪ ಸೇವಾ ಪ್ರತಿನಿಧಿ ರೂಪ, ಪದ್ಮ ಸಂಘದ ಸದಸ್ಯರು ಹಾಜರಿದ್ದರು.

# ಕೋಚಿಮುಲ್‌ನಲ್ಲಿ ಯಾವುದೇ ಹಗರಣ ಅಗಿಲ್ಲ ಯಾವುದೇ ತನಿಖೆ ಮಾಡಿದರೂ ಅಭ್ಯಂತರವಿಲ್ಲ



**ಮಾಲೂರು:** ಬಂಗಾರಪೇಟೆ ಶಾಸಕ ಎಸ್. ಎನ್ ನಾರಾಯಣಸ್ವಾಮಿ ಅವರಿಗೆ ಮಾಹಿತಿ ಹೇಗೆ ಲಭ್ಯವಾಯಿತೋ ಗೊತ್ತಿಲ್ಲ ಯಾವುದೇ ತನಿಖೆ ಮಾಡಿದರೂ ನನ್ನ ಅಭ್ಯಂತರವಿಲ್ಲ ವೈಯಕ್ತಿಕವಾಗಿ ಟೀಕೆ ಟಿಪ್ಪಣಿ ಮಾಡಲ್ಲ ಎಂದು ಶಾಸಕ ಕೆ ವೈ ನಂಜೇಗೌಡ ಹೇಳಿದರು.
ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.
ಬಂಗಾರ ಬಂಗಾರಪೇಟೆ ಶಾಸಕ ಎಸ್‌ನ್ ನಾರಾಯಣಸ್ವಾಮಿ ಅವರು ಸುದ್ದಿಗೋಷ್ಠಿ ನಡೆಸಿ ಕೋಚಿಮುಲ್ ನಲ್ಲಿ ಬಾರಿ ಹಗರಣ ವಾಗಿರುವುದಾಗಿ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಆರೋಪಗಳು ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಮಾತಾಗಿದೆ. ಎಸ್ ಎನ್ ನಾರಾಯಣಸ್ವಾಮಿ ಅವರು ಯಸವ ತನಿಖೆಗೆ ನೀಡಿದರು ಸ್ವಾಗತ ಬಯಸುತ್ತೇನೆ ಇಂತಹ ತನಿಖೆಗಳು ಮಾಡಿಸದೋರು ಎಷ್ಟೇ ತುಂಬಾ ಜನ ಇದ್ದಾರೆ. ಎಸ್ ಎನ್ ನಾರಾಯಣಸ್ವಾಮಿ ಸ್ನೇಹಿತರು ಹೆಚ್ಚಾಗಿ ಬ್ರದರ್ ಜಿಲ್ಲೆಯಲ್ಲಿ ಯಾರಾದರೂ ಮೂರು ಬಾರಿ ಶಾಸಕರು ಆಗಿದ್ದಾರೆ ಎಂದರೆ ಎಸ್.ಎನ್. ಮಾತ್ರ ಯಾವುದೇ ತನಿಖೆ ಮಾಡಿದರೂ ನನ್ನ ಅಭ್ಯಂತರವಿಲ್ಲ ಯಾರ ವಿರುದ್ಧವೂ ದೂರು ನೀಡುವುದು ಇಲ್ಲ ವೈಯುಕ್ತಿಕವಾಗಿ ಟೀಕೆ ಟಿಪ್ಪಣಿ ಮಾಡಲ್ಲ ನನ್ನ ಬಗ್ಗೆ ಯಾರು ಆರೋಪ ಮಾಡುತ್ತಿದ್ದಾರೋ ಅವರ ಬಳಿಯಲ್ಲೇ ಉತ್ತರವಿದೆ ಅವರನ್ನೇ ಕೇಳಿ , ಎಸ್ ಎನ್ ಬಗ್ಗೆ ಮಾತನಾಡಲು ಹೋಗುವುದಿಲ್ಲ ನನ್ನ ಬಗ್ಗೆ ಮಾತನಾಡಿ ಮಾತನಾಡಿ ಇದು ನನಗೆ ಹೊಸದೇನಲ್ಲ ಯಾವುದೇ ತಪ್ಪು ಮಾಡಿಲ್ಲ ಮಾಡಿದರೆ ನಾನು ಭಯ ಬೀಳಬೇಕು. ನಾನು ಹೋರಾಟಗಳ ಮೂಲಕ ಬಂದವನು ಎಸ್ ಎನ್ ಅವರು ಹೋರಾಟಗಳ ಮೂಲಕ ಬಂದವರು ಭಯ ಬೀಳುವ ಅವಶ್ಯಕತೆ ಇಲ್ಲ ರಾಜ್ಯದಲ್ಲಿ ಕೋಲಾರ ಯೂನಿಯನ್ ಮೊದಲ ಸ್ಥಾನವಿದೆ ಎರಡು ಜಿಲ್ಲೆಯ ನಾಯಕರು ನಿರ್ದೇಶಕರು ಸಹಕಾರದಿಂದ ಮೊದಲ ಸ್ಥಾನವಿದೆ ಒಳ್ಳೆಯ ಆಡಳಿತ ಮಾಡಿದ್ದೇನೆ ಎನ್ನುವುದು ಮುಖ್ಯಮಂತ್ರಿಗಳಿಂದ ಪ್ರಶಂಸೆ ಪಡಿದಿದ್ದೇನೆ. ಎಸ್ ಎನ್ ಅವರು ಏಕೆ ಆರೋಪ ಮಾಡುತ್ತಿದ್ದಾರೋ ಅವರಿಗೆ ಮಾಹಿತಿ ಹೇಗೆ ಸಿಕ್ಕಿದಿಯೋ ಅದು ನನಗೆ ತಿಳಿದಿಲ್ಲ ಅದರಿಂದ ತುಂಬಾ ನೋವಾಗಿದೆ ಬೇಸರವಾಗಿದೆ ದೇವರು ಒಳ್ಳೆಯದನ್ನ ಮಾಡಲಿ ಎಂದರು.
ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ.ಮಧುಸೂದನ್, ಕೆ.ಪಿಸಿಸಿ ಸದಸ್ಯ ಅಂಜನಿ ಸೋಮಣ್ಣ, ಪುರಸಭಾ ಅಧ್ಯಕ್ಷೆ ಕೋಮಲ, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮುಹಮ್ಮದ್ ನಯೀಂ,ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಿಆರ್.ಶ್ರೀನಿವಾಸ್, ದರಖಾಸ್ತು ಸಮಿತಿ ಅಧ್ಯಕ್ಷ ಹನುಮಂತಪ್ಪ, ಪುರಸಭಾ ಸದಸ್ಯ ಎನ್.ವಿ.ಮುರಳೀಧರ್, ಆರ್.ವೆಂಕಟೇಶ್, ಕಸಾಪ ಅಧ್ಯಕ್ಷ ಎಂ.ವಿ.ಹನುಮಂತಯ್ಯ, ಪುರಸಭಾ ಮಾಜಿ ಸದಸ್ಯಹನುಮಂತರೆಡ್ಡಿ, ಎಚ್.ವಿ.ಲಿಂಗೇಶ್ವಯ್ಯ, ಯುವಕಾಂಗ್ರೆಸ್ ಉಪಾಧ್ಯಕ್ಷ ಮಣಿಶಟ್ಟಹಳ್ಳಿ ನವೀನ್, ಮುಖಂಡ ತಿಮ್ಮೇಗೌಡ, ಶಾಸಕರ ಆಪ್ತ ಕಾರ್ಯದರ್ಶಿ ದೊಡ್ಡಮಲ್ಲೆ ಹರೀಶ್ ಗೌಡ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

# ನಾಗರೀಕರಿಗೆ ಬಿ ಖಾತಾ ಅಭಿಯಾನದಲ್ಲಿ ಸಹಕರಿಸುತ್ತಿರುವುದು ಬಹಳಷ್ಟು ಖುಷಿ ನೀಡಿದೆ



ಚಿಕ್ಕಬಳ್ಳಾಪುರ: ಅನಧಿಕೃತ ನಿವೇಶನ ಕಟ್ಟಡಕ್ಕೆ ಬಿ ಖಾತಾ ಮಾಡಿಸಿಕೊಳ್ಳಲು ಅಭಿಯಾನ ಇಂದಿನಂದ ಶುರುವಾಗಿದ್ದು ನಗರದ 22ನೇವಾರ್ಡಿನ ಸರ್ಕಾರಿಶಾಲೆಗಳಲ್ಲಿ ಅರ್ಜಿ ಸ್ವೀಕರಿಸುತ್ತಿದ್ದು ನಗರಸಭೆ ಸದಸ್ಯೆ ಸ್ವಾತಿ ಮಂಜುನಾಥ್ ಬೆಳಿಗ್ಗೆಯಿಂದಲೇ ವಾರ್ಡಿನ ಅರ್ಜಿದಾರರಿಗೆ ಸೂಕ್ತ ಸಲಹೆ, ಬಿ ಖಾತಾ ಮಾಡಿಸಿಕೊಳ್ಳಲು ಬೇಕಾದ ದಾಖಲೆ ಬಗ್ಗೆ ಮಾಹಿತಿಯನ್ನು ನೀಡಿದರು.
22ನೇ ವಾರ್ಡಿನ ಸರ್ಕಾರಿ ಶಾಲೆಯಲ್ಲಿ ನಡೆಯುತ್ತಿರುವ ಬಿ ಖಾತಾ ಅಭಿಯಾನದಲ್ಲಿ ವಾರ್ಡಿನ ಜನರು ತಮ್ಮ ತಮ್ಮ ನಿವೇಶನ ಕಟ್ಟಡಗಳಿಗೆ ಬಿ ಖಾತಾ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಲು ಆಗಮಿಸಿದ್ದು.
ನಗರಸಭೆ ಸದಸ್ಯೆ ಸ್ವಾತಿ ಮಂಜುನಾಥ್ ಅರ್ಜಿದಾರರಿಗೆ ಬಿ ಖಾತಾ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಲ್ಲದೇ ಬೇಕಾದ ದಾಖಲೆ ಪತ್ರಗಳ ಬಗ್ಗೆ ತಿಳಿಸಿ ಜನರಿಗೆ ಅನುಕೂಲ ಮಾಡಿಕೊಟು ಇನ್ನು ವಾರ್ಡಿನ ನಿವಾಸಿಗಳು ನಗರಸಭೆ ಸದಸ್ಯೆಯ ಕಾರ್ಯವೈಖರಿಯನ್ನು ಮೆಚ್ಚಿ ಪ್ರತಿಕ್ರಿಯಿಸಿ ಬಹುತೇಕರಿಗೆ ಬಿ ಖಾತಾ ಬಗ್ಗೆ ಸರಿಯಾದ ಮಾಹಿತಿ ಇಲ್ಲ ನಗರಸಭೆ ಸದಸ್ಯೆ ಸ್ವಾತಿ,ಮಂಜುನಾಥ್ ಇದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತಿದ್ದಾರೆ.ಇದರಿಂದ ನಮಗೆ ಅರ್ಜಿ ಜೊತೆ ಯಾವುದೆಲ್ಲ ದಾಖಲೆಗಳು ನೀಡಬೇಕೆಂದು ಗೊತ್ತಾಗಿದೆ ಸ್ವಾತಿ ಮಂಜುನಾಥ್ ವಾರ್ಡಿನ ನಾಗರಿಕರಿಗೆ ಬಿ ಖಾತಾ ಅಭಿಯಾನದಲ್ಲಿ ಸಹಕರಿಸುತ್ತಿರುವುದು ಬಹಳಷ್ಟು ಖುಷಿ ನೀಡಿದೆ ಎಂದು ನುಡಿದರು.
ಈ ವೇಳೆ ಮಾತನಾಡಿದ ನಗರಸಭೆ ಸದಸ್ಯೆ ಸ್ವಾತಿ ಮಂಜುನಾಥ್ 22ನೇ ವಾರ್ಡ್ ಪಟೇರೇನಹಳ್ಳಿ ಪಂಚಾಯಿತಿಯಿಂದ ಬೇರೆ,ಯಾಗಿ 25 ವರ್ಷಕ್ಕಿಂತ ಹೆಚ್ಚು ಕಾಲ ಆಗಿದೆ ಇಲ್ಲಿಯವರೆಗೆ ಖಾತೆಗಳಾಗಿಲ್ಲ,ಈಗ ಬಿ ಖಾತಾ ಅಭಿಯಾನ ಯೋಜನೆಯಡಿ ಖಾತೆಗೆ ಅವಕಾಶ ಕೊಡಿಬಂದಿದೆ. ವಾರ್ಡಿನ ಶಾಲೆಯಲ್ಲಿ ಮೂರು ದಿನಗಳ ಕಾಲ ಅಭಿಯಾನ ನಡೆಯಲಿದೆ,ಹಾಗೂ ಮೂರು ತಿಂಗಳ ಅವಧಿಯಲ್ಲಿ ನಿರ್ಲಕ್ಷಿಸದೆ,ತಮ್ಮ ತಮ್ಮ ನಿವೇಶನ ಕಟ್ಟಡಗಳಿಗೆ ಬಿ ಖಾತಾ ಮಾಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.
ಈ ಸಂದರ್ಭದಲ್ಲಿ ವಾರ್ಡಿನ ಮುಖಂಡರಾದ ಮಂಜುನಾಥ್,ಡೈರಿ ಗೋಪಿ ಮತ್ತು ಇತರರು ಇದ್ದರು.

# ಕೇಬಲ್ ಕಳ್ಳತನ:ಆರೋಪಿ ವಶಕ್ಕೆ



**ಮುಳಬಾಗಿಲು:** ಕೊಳವೆಬಾವಿಗಳ ಬಳಿ ವಿದ್ಯುತ್ ಕೇಬಲ್‌ಗಳನ್ನು ಕಳ್ಳತನ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.
ನಂಗಲಿ ಪೋಲೀಸ್ ಠಾಣೆ ವ್ಯಾಪ್ತಿಯ ಪದ್ಮಘಟ್ಟ ಗ್ರಾಮದ ನಾಗೇಂದ್ರಬಾಬು ನೀಡಿದ ದೂರಿನ ಮೇರೆಗೆ ನಂಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಒಬ್ಬ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಪದ್ಮಘಟ್ಟ ಎನ್. ವಡ್ಡಹಳ್ಳಿ, ಕೊತ್ತೂರು ಪ್ರಕರಣದಲ್ಲಿ ಕಳ್ಳತನದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ.
ಆರೋಪಿ ಪುಂಗನೂರು ತಾಲೂಕಿನ ಚಿತ್ತೂರು ಜಿಲ್ಲಾ ಕುರಪ್ಪಲ್ಲಿ ಗ್ರಾಮದ ಲೋಕೇಶ್ ಎಂದು ಗುರುತಿಸಿ ನಂಗಲಿ ಪೊಲೀಸರು ಬಂಧಿಸಿದ್ದಾರೆ. ನಂಗಲಿ ಪ್ರಭಾರ ಪಿಎಸ್‌ಐ ಎಲ್.ಮಮತ, ಠಾಣೆಯ ಸಿಬ್ಬಂದಿಗಳಾದ ಎಎಸ್‌ಐ ಶ್ರೀರಾಮಪ್ಪ, ಸಂತೋಷ್‌ಕುಮಾರ್, ಪವನ್ ಕುಮಾರ್, ಚಾಲಕ ರಾದ ನಾರಾಯಣಸ್ವಾಮಿ ತಂಡದವರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

# ಪ್ರತ್ಯೇಕ ದಾರಿಗಳನ್ನು ಸೇತುವೆ ಒಂದುಗೂಡಿಸುತ್ತವೆ

**ಕೆ.ಆರ್.ಪೇಟೆ:** ಸೇತುವೆಗಳು ಎರಡು ಪ್ರತ್ಯೇಕ ದಾರಿಗಳನ್ನು ಒಂದುಗೂಡಿಸುವ ಕೆಲಸವನ್ನು ಮಾಡುತ್ತವೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.
ಅವರು ತಾಲ್ಲೂಕಿನ ಕಿಕ್ಕೇರಿ ಹೋಬಳಿ ಮಾದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೂಡೇಹೊಸಹಳ್ಳಿ ಗ್ರಾಮದಲ್ಲಿರುವ ನಾಲೆಯ ಅಡ್ಡಲಾಗಿ 43 ಲಕ್ಷ ವೆಚ್ಚದ ಸೇತುವೆ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.
ಸರ್ಕಾರದಲ್ಲಿ ಅನುದಾನ ಬಿಡುಗಡೆಯ ಕೊರತೆಯ ನಡುವೆಯೂ ಸಂಬಂಧಿಸಿದ ಸಚಿವರ ಕಛೇರಿಗಳಿಗೆ ಸುತ್ತಿ ಅವರಿಗೆ ಮನವರಿಕೆ ಮಾಡಿ ಅತೀ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿಗೆ ಡಿಪಿಎಆರ್ ಸಿದ್ದಪಡಿಸಲಾಗುತ್ತಿದೆ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ಅಪಾರವಾದ ಕಾಳಜಿಯಿದೆ. ಆದರೆ ಅನುದಾನದ ಕೊರತೆ ಎಲ್ಲರಿಗೂ ಕಾಡುತ್ತಿದೆ. ಆದರೂ ಜನಗಳ ಮದ್ಯೆ ಇದ್ದು ಅವರ ಕಷ್ಟಸುಖ, ನೋವುನಲಿವುಗಳಲ್ಲಿ ಪಾಲುದಾರರಾಗುತ್ತಿದ್ದೇನೆ ಎಂದರು.
ಈ ಸಂಧರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿರ್ದೇಶಕರಾದ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಜೆಡಿಎಸ್ ಹಿರಿಯ ಮುಖಂಡರಾದ ಮಂಜುನಾಥ್, ಐನೋರಹಳ್ಳಿಮಲ್ಲೇಶ್, ಮಾದಾಪುರ ಗ್ರಾಮ ಪಂಚಾಯತಿ ಅಧ್ಯಕ್ಷ ಕೃಷ್ಣೇಗೌಡ , ಗ್ರಾಮ ಪಂಚಾಯತಿ ಮಾಜಿ ಸದಸ್ಯರಾದ ಕುಮಾರ್, ಹಾಲು ಉತ್ಪಾದಕ ಸಹಕಾರಿ ಸಂಘದ ಸದಸ್ಯರಾದ ರಾಜೇಗೌಡ, ರಾಮದಾಸೇಗೌಡ, ಯುವ ಮುಖಂಡರುಗಳಾದ ಅಣ್ಣೇಗೌಡ, ಸಣ್ಣಪ್ಪ, ವೆಂಕಟೇಶ್, ಪ್ರಸನ್ನ, ಯೋಗೇಶ್, ಜಯರಾಂ, ಗಣೇಶ ಸೇರಿದಂತೆ ಹಲವು ಜನರು ಭಾಗವಹಿಸಿದ್ದರು.



# ಅಸಂಘಟಿತ ಕಾರ್ಮಿಕರ ನೋಂದಣಿ ಕಾರ್ಯಕ್ರಮ



**ಶಿಡ್ಲಘಟ್ಟ:** ಜಿಲ್ಲಾ ಕಾರ್ಮಿಕ ಇಲಾಖೆ ಚಿಕ್ಕಬಳ್ಳಾಪುರ ಹಾಗೂ ಶ್ರಮಿಕ ಕರ್ನಾಟಕ ರಾಜ್ಯ ಅಸಂಘಟಿತ ಕಟ್ಟಡ ಕಾರ್ಮಿಕರ ಸಂಘ (ರಿ)ಶಿಡ್ಲಘಟ್ಟ ವತಿಯಿಂದ ಅಂಬೇಡ್ಕರ್ ಸಹಾಯ ಅಸ್ತ ಅಸಂಘಟಿತ ಕಾರ್ಮಿಕರ ನೋಂದಣಿ ಕಾರ್ಯಕ್ರಮವು ನಗರದ ಹಳೇ ಕೆನರಾ ಬ್ಯಾಂಕ್ ಬಳಿಯಿರುವ ಶ್ರಮಿಕ ಕಚೇರಿಯಲ್ಲಿ ರಾಜ್ಯ ಖಜಾಂಚಿ ಮೊಹಮ್ಮದ್ ಅಮಾನುಲ್ಲಾ ಅವರ ನೇತೃತ್ವದಲ್ಲಿ ನೆಡೆಯಿತು.
ಈ ಸಂದರ್ಭದಲ್ಲಿ ರಾಜ್ಯ ಅಧ್ಯಕ್ಷರಾದ ನರೇಶ್ ಕುಮಾರ್. ರಾಜ್ಯ ಸಲಹೆ ಸಮಿತಿ ಸದಸ್ಯ ಸೀಕಲ್ ಆನಂದಗೌಡ,
ನೇಕಾರರ ಕಾರ್ಮಿಕ ಜಿಲ್ಲಾ ಅಧ್ಯಕ್ಷೆ ರಾಧಾ, ಎಸ್. ಮಂಜುಳಾ, ಮಹಿಳಾ ಟೈಲರ್ ಸಂಘದ ಜಿಲ್ಲಾ ಅಧ್ಯಕ್ಷೆ ಜಿ.ವಿ.ಗಾಯಿತ್ರಿ,ಜಿಲ್ಲಾ ಕಾರ್ಯದರ್ಶಿ ಲಕ್ಷ್ಮೀದೇವಿ, ಶಾರದಮ್ಮ,ಜಿಲ್ಲಾ ಕಾರ್ಮಿಕ ಇಲಾಖೆ ಜಯಮಾಲ ಮುಂತಾದವರು ಪಾಲ್ಗೊಂಡಿದ್ದರು.

# ನೂತನ ಪ್ರಭಾರ ಅಧ್ಯಕ್ಷರಾಗಿ ಜಯಮ್ಮ ನಾಗರಾಜ್ ಆಯ್ಕೆ

**ಮಾಗಡಿ:** ತಾಲೂಕಿನ ತಿಪ್ಪಸಂದ್ರ ಗ್ರಾಮ ಪಂಚಾಯಿತಿಗೆ ನೂತನ ಪ್ರಭಾರ ಅಧ್ಯಕ್ಷರಾಗಿ ಜಯಮ್ಮ ನಾಗರಾಜ್ ಆಯ್ಕೆಯಾಗಿದ್ದಾರೆ.
ತಾಲೂಕಿನ ತಿಪ್ಪಸಂದ್ರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ವೀಣಾ ಕುಮಾರಸ್ವಾಮಿ ಅವರ ಅವಿಶ್ವಾಸ ಮಂಡಿಸಿದ ಕಾರಣ ತೆರೆವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ಪ್ರಬಲ ಅಧ್ಯಕ್ಷನಾಗಿ ಇವರನ್ನು ಆಯ್ಕೆ ಮಾಡಲಾಯಿತು.
ಶಾಸಕ ಹೆಚ್.ಸಿ. ಬಾಲಕೃಷ್ಣ. ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್. ಎನ್. ಅಶೋಕ್ ಮಾಜಿ ಸಂಸದ ಡಿಕೆ ಸುರೇಶ್, ಜಿ.ಪಂ. ಮಾಜಿ ಅಧ್ಯಕ್ಷ ಎಂ.ಕೆ. ಧನಂಜಯ ಮಾರ್ಗದರ್ಶನದಲ್ಲಿ ಪ್ರಭಾರ ಅಧ್ಯಕ್ಷರನ್ನಾಗಿ ಜಯಮ್ಮ ನಾಗರಾಜು ಅವರನ್ನು ಆಯ್ಕೆ ಮಾಡಲಾಯಿತು.
ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಕೆ. ಧನಂಜಯ ಮಾತನಾಡಿ, ಎಲ್ಲ ಸದಸ್ಯರ ಸಹಕಾರದಿಂದ ಶಾಸಕರ ಮಾರ್ಗದರ್ಶನದಲ್ಲಿ ಪಂಚಾಯಿತಿಯ



ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಈಗಾಗಲೇ ಉತ್ತಮವಾಗಿ ಪಂಚಾಯಿತಿ ಅಭಿವೃದ್ಧಿ ಹೊಂದುತ್ತಿದ್ದು ಬೇಸಿಗೆಕಾಲ ಆಗಿರುವುದರಿಂದ ಅಧ್ಯಕ್ಷರು ಮತ್ತು ಸದಸ್ಯರು. ಅಧಿಕಾರಿಗಳು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ಈ ಪಂಚಾಯಿತಿಯಲ್ಲಿ ಪಕ್ಷಾತೀತವಾಗಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಹಲವು ವರ್ಷಗಳಿಂದಲೂ ನಡೆದುಕೊಂಡು ಬಂದಿದೆ ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ನಮಗೆ ಪಂಚಾಯಿತಿ ಅಭಿವೃದ್ಧಿ ಅತಿ ಮುಖ್ಯವಾಗಿದೆ ಎಂದು ತಿಳಿಸಿದರು. ನೂತನ ಪ್ರಭಾರಿ ಅಧ್ಯಕ್ಷೆ ಜಯಮ್ಮ ನಾಗರಾಜು ಮಾತನಾಡಿ, ಶಾಸಕ ಎಚ್.ಸಿ.ಬಾಲಕೃಷ್ಣ, ಮಾಜಿ ಸಂಸದ ಡಿ.ಕೆ.ಸುರೇಶ್, ಜಿ.ಪಂ. ಮಾಜಿ ಅಧ್ಯಕ್ಷ ಎಂಕೆ ಧನಂಜಯ, ತಾ.ಪಂ. ಮಾಜಿ ಅಧ್ಯಕ್ಷ ಕೆ. ಹೆಚ್.ಶಿವರಾಜು ಇವರ ಶ್ರಮದಿಂದ ನಾನು ಪ್ರಭಾರ ಅಧ್ಯಕ್ಷೆಯಾಗಿದ್ದೇನೆ ಸದಸ್ಯರ ಸಹಕಾರ ಪಡೆದು ಪಂಚಾಯಿತಿಯಲ್ಲಿನ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುತ್ತೇನೆ ಎಂದು ತಿಳಿಸಿದರು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಹೆಚ್. ಶಿವರಾಜ್ ಮಾತನಾಡಿ, ತಿಪ್ಪಸಂದ್ರ ಪಂಚಾಯಿತಿ ಗ್ರಾಮೀಣ ಜನರ ಬದುಕಿಗೆ ಸರ್ಕಾರದ ಸವಲತ್ತುಗಳನ್ನು ಸಮರ್ಪಕವಾಗಿ ಒದಗಿಸುತ್ತಿದೆ ನೂತನ ಪ್ರಭಾರ ಅಧ್ಯಕ್ಷೆ ಜಯಮ್ಮ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಂಚಾಯಿತಿಯ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.
ಸದಸ್ಯರಾದ ರಘು, ಗಂಗಮ್ಮ, ಗೀತಾ, ಗಂಗಾಧರ್,ಪ್ರಕಾಶ್,ರತ್ನಮ್ಮ, ರಮೇಶ್, ರಾಜು, ರಾಜೇಶ್,ವೆಂಕಟಲಕ್ಷ್ಮಮ್ಮ,ಸರಸ್ವತಮ್ಮ, ಹುಚ್ಚೇಗೌಡ, ತಾ.ಪಂ. ಮಾಜಿ ಸದಸ್ಯ ಟಿ.ಜಿ.ವೆಂಕಟೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ರವಿಕುಮಾರು, ಪುಟ್ಟರಾಜು, ರಮೇಶ್, ತಾಳೇಕೆರೆ ಗಂಗಾಧರ್, ಹರೀಶ್, ವೆಂಕಟೇಶ್, ಟಿಎಪಿಸಿಎಂಎಸ್ ನಿರ್ದೇಶಕ ರಮೇಶ್ ಇತರರು ಇದ್ದರು.

# ನಕಲಿ ಕ್ಲಿನಿಕ್ ಹಾವಳಿ ವಿರುದ್ಧ ಕಾನೂನು ಕ್ರಮಕೈಗೊಳ್ಳಿ

**ಮುಳಬಾಗಿಲು:** ಕೋಮಾ ಸ್ಥಿತಿಯಲ್ಲಿರುವ ನಗರದ ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆಯನ್ನು ಸರಿಪಡಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಆಸ್ಪತ್ರೆಯಲ್ಲಿ ಹೆಜ್ಜೆಹೆಜ್ಜೆಗೂ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ನಕಲಿ ಕ್ಲಿನಿಕ್ ಹಾವಳಿ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ರೈತಸಂಘದಿಂದ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸುರೇಂದ್ರ ಅವರಿಗೆ ಮನವಿ ನೀಡಿ ಆಗ್ರಹಿಸಲಾಯಿತು.

ಕಾಣೆಯಾಗಿರುವ ಸರ್ಕಾರಿ 108 ಆಂಬ್ಯೂಲೆನ್ಸ್ ಹುಡುಕಿಕೊಟ್ಟು ಖಾಸಗಿ ಆಂಬ್ಯೂಲೆನ್ಸ್ ಹಾವಳಿಗೆ ಕಡಿವಾಣ ಹಾಕಿ ಕೋಮ ಸ್ಥಿತಿಯಲ್ಲಿರುವ ವೈದ್ಯರಿಗೆ ತುರ್ತು ಚಿಕಿತ್ಸೆ ನೀಡಿ ಬಡವರ ಆರೋಗ್ಯವನ್ನು ರಕ್ಷಣೆ ಮಾಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ವೈದ್ಯಾಧಿಕಾರಿಗಳನ್ನು ಒತ್ತಾಯಿಸಿದರು.

ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆ ವೈದ್ಯರ ನಿರ್ಲಕ್ಷ್ಯವನ್ನೇ ಬಂಡವಾಳವಾಗಿಸಿಕೊಂಡಿರುವ ಖಾಸಗಿ ಆಸ್ಪತ್ರೆ, ಕ್ಲಿನಿಕ್ ವೈದ್ಯರು ಅಮಾಯಕ ಬಡ ರೋಗಿಗಳನ್ನು ಗುಣಮಟ್ಟದ ಚಿಕಿತ್ಸೆ ಹೆಸರಿನಲ್ಲಿ ಲಕ್ಷಲಕ್ಷ ಲೂಟಿ ಮಾಡಲು ಸರ್ಕಾರಿ ವೈದ್ಯರ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಆಸ್ಪತ್ರೆ ಅವ್ಯವಸ್ಥೆ ವಿರುದ್ಧ ಅಸಮಧಾನ ವ್ಯಕ್ತಪಡಿಸಿದರು.

ಸರ್ಕಾರಿ ಆಸ್ಪತ್ರೆ ಅಭಿವೃದ್ಧಿಗೆ ಕೋಟ್ಯಾಂತರ ರೂಪಾಯಿ ಅನುದಾನ ಬಿಡುಗಡೆಯಾಗುತ್ತಿದ್ದರೂ ಆಸ್ಪತ್ರೆಯಲ್ಲಿ ಮಾತ್ರ ಮೂಲಭೂತ ಸೌಕರ್ಯಗಳ ಕೊರತೆ ಹೆಚ್ಚಾಗುತ್ತಿದೆ ಹೊರತು ಸಮಸ್ಯೆ ಬಗೆಹರಿಯುತ್ತಿಲ್ಲ. ವರ್ಷಗಳಿಂದ ಮೂಲೆ ಗುಂಪಾಗಿರುವ ಸ್ಕ್ಯಾನಿಂಗ್ ಸೆಂಟರ್, ಆಂಬ್ಯುಲೆನ್ಸ್ ವ್ಯವಸ್ಥೆ, ಪಾರ್ಕಿಂಗ್, ಸ್ಕ್ಯಾನಿಂಗ್, ಶುದ್ಧ ನೀರಿನ ಘಟಕದ ಯಂತ್ರೋಪಕರಣಗಳು ತುಕ್ಕು ಹಿಡಿಯುವ ಮೂಲಕ ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆ ಕಣ್ಣ ಮುಂದೆ ಇದ್ದರೂ ಜಿಲ್ಲಾ ಆರೋಗ್ಯಾಧಿಕಾರಿಗಳು ಆಸ್ಪತ್ರೆ ಅವ್ಯವಸ್ಥೆ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ನಾಚಿಕೆಯ ವಿಚಾರವಾಗಿದೆ ಎಂದು ಆರೋಪಿಸಿದರು. ಜನನ ಪ್ರಮಾಣ ಪತ್ರ ಪಡೆಯಲು ತಂದೆ ಲಂಚ ನೀಡಿದರೆ ಅದೇ ತಂದೆ ಮರಣ ಹೊಂದಿದಾಗ ಮರಣ ಪ್ರಮಾಣ ಪತ್ರ ಪಡೆಯಲು ಮಗ ಹಣ ನೀಡಿ ಪ್ರಮಾಣ ಪತ್ರ ಪಡೆಯುವ ಮಟ್ಟಕ್ಕೆ ಆಸ್ಪತ್ರೆ ಹದಗೆಟ್ಟಿದೆ. ಹೆಜ್ಜೆ ಹೆಜ್ಜೆಗೂ ಬಡರೋಗಿಗಳನ್ನು ಒಂದಲ್ಲಾ ಒಂದು ಸಮಸ್ಯೆಯಡಿ ಹಣ ಸುಲಿಗೆ ಮಾಡುವ ಬ್ರೋಕರ್ ಆಸ್ಪತ್ರೆಯಾಗಿ ಮಾರ್ಪಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಳಿ ಚೀಟಿ ದಂಧೆ:

ರಾಜ್ಯ ಕಾರ್ಯಾಧ್ಯಕ್ಷ ಬಂಗಾರಿ ಮಂಜು ಮಾತನಾಡಿ, ಸರ್ಕಾರಿ ಆಸ್ಪತ್ರೆಯಲ್ಲಿ ಬಡವರಿಗೆ ಅನುಕೂಲವಾಗುವ ರಕ್ತ ಪರೀಕ್ಷೆ, ಕ್ಯಾಲ್ಸಿಯಂ ಔಷಧಿಗಳ ಲಭ್ಯತೆಯಿದ್ದರೂ ಇಲ್ಲಿನ ವೈದ್ಯರು ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್ ಮತ್ತು ಮೆಡಿಕಲ್ ಸ್ಟೋರ್ ಗಳ ಜೊತೆ ಶಾಮೀಲಾಗಿ ಪ್ರತಿಯೊಂದಕ್ಕೂ ಹೊರಗಡೆ ಚೀಟಿ ಬರೆದುಕೊಡುವ



ಮೂಲಕ ವ್ಯಾಪಾರದ ವಹಿವಾಟಿನಲ್ಲಿ 100ಕ್ಕೆ 40% ಕಮೀಷನ್ ಪಡೆಯುವ ಮಟ್ಟಕ್ಕೆ ಆಸ್ಪತ್ರೆ ಹದಗೆಟ್ಟಿದೆ ಎಂದು ಕಿಡಿಕಾರಿದರು.

ತುರ್ತು ಪರಿಸ್ಥಿತಿಯಲ್ಲಿ ಅಪಘಾತ ಹೆರಿಗೆಗೆ ಆಸ್ಪತ್ರೆಗೆ ಬಂದರೆ ಕನಿಷ್ಠ ಗಾಯಾಳುಗಳಿಗೆ ಚಿಕಿತ್ಸೆ ನೀಡಲು ವೈದ್ಯರು ಇರುವುದಿಲ್ಲ ಇರುವ ಸಿಬ್ಬಂದಿ ತುರ್ತು ನಿಗಾ ಘಟಕ ಕೆಲಸ ನಿರ್ವಹಿಸುತ್ತಿಲ್ಲ. ಜೀವ ಉಳಿಯಬೇಕಾದರೆ ಮೇಡಿಕಲ್ ಕಾಲೇಜ್ ಗೆ ಹೋಗಿ ಎಂದು ರೋಗಿ ಕಡೆಯವರಿಗೆ ಭಯ ಹುಟ್ಟಿಸುವ ಮೂಲಕ ಬಡವರ ಆರೋಗ್ಯ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆಂದು ಕಿಡಿ ಕಾರಿದರು.

ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆ, ಖಾಸಗಿ ಆಸ್ಪತ್ರೆಗಳ ದುಬಾರಿ ವೆಚ್ಚ ಇವುಗಳನ್ನೇ ಬಂಡವಾಳವಾಗಿಸಿಕೊಂಡಿರುವ ಮರಣ ಹೊಂದಿರುವವರ ಹೆಸರಿನಲ್ಲಿ ನಕಲಿ ವೈದ್ಯರ ಪ್ರಮಾಣ ಪತ್ರಗಳನ್ನು ಪಡೆದು ಆಂಧ್ರ ತಮಿಳುನಾಡು ಮೂಲದ ವೈದ್ಯರು ಗಡಿಭಾಗಗಳಲ್ಲಿ ಕ್ಲಿನಿಕ್‌ಗಳನ್ನು ತೆರೆದು ಗುಣಮಟ್ಟದ ಚಿಕಿತ್ಸೆ ಹೆಸರಿನಲ್ಲಿ ಬಡ ರೋಗಿಗಳ ಜೊತೆ ಚೆಲ್ಲಾಟವಾಡುತ್ತಿದ್ದರೂ ತಡೆಯಬೇಕಾದ ಆರೋಗ್ಯಾಧಿಕಾರಿಗಳು ತಿಂಗಳ ಮಾಮೂಲಿ ವಸೂಲಿ ಮಾಡಿ ಅವರ ವಿರುದ್ಧ ಕ್ರಮಕೈಗೊಳ್ಳಲು ಕೇಳಿದರೆ ರಾಜಕೀಯ ಒತ್ತಡದ ನೆಪ ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

24 ಗಂಟೆಯಲ್ಲಿ ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆಯನ್ನು ಸರಿಪಡಿಸಿ ನಕಲಿ ಕ್ಲಿನಿಕ್‌ಗಳಿಗೆ ಕಡಿವಾಣ ಹಾಕಬೇಕು. ಇಲ್ಲವಾದರೆ ಆಸ್ಪತ್ರೆ ಮುಂದೆ ಅಹೋರಾತ್ರಿ ಧರಣಿ ಹಮ್ಮಿಕೊಳ್ಳುವ ಎಚ್ಚರಿಕೆಯನ್ನು ನೀಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಡಾ.ಸುರೇಂದ್ರ ಅವರು, ಆಸ್ಪತ್ರೆಯಲ್ಲಿ ಅವ್ಯವಸ್ಥೆ ಇರುವುದು ನಿಜ. ಸರ್ಕಾರದ ಅನುದಾನದಲ್ಲಿ ಖರೀದಿ ಮಾಡಿರುವ ಯಂತ್ರೋಪಕರಣಗಳ ನಿರ್ವಹಣೆಗೆ ಸಿಬ್ಬಂದಿ ನೀಡುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಪತ್ರ ಬರೆದಿದ್ದೇವೆ. ಒಂದು ವಾರದೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಮನವಿ ನೀಡುವಾಗ ರಾ.ಪ್ರ. ಪಾರೂಕ್‌ಪಾಷ, ತಾಲೂಕು ಅಧ್ಯಕ್ಷ ಯಲುವಳ್ಳಿ ಪ್ರಭಾಕರ್, ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ್, ಜಿಲ್ಲಾ ಕಾರ್ಯಾಧ್ಯಕ್ಷ ಹೆಬ್ಬಣಿ ಆನಂದರೆಡ್ಡಿ, ತಾಲೂಕು ಪ್ರ.ಕಾ. ರಾಜೇಶ್, ಭಾಸ್ಕರ್, ಸುನೀಲ್‌ಕುಮಾರ್, ಮೇಲಗಾಣಿ ವಿಜಯ್‌ಪಾಲ್, ಅಂಬ್ಲಿಕಲ್ ಮಂಜುನಾಥ್, ಜುಬೇರ್ ಪಾಷ, ಶ್ರೀನಿವಾಸ್, ಸುಪ್ರೀಂಚಲ, ಪದ್ಮಘಟ್ಟ ಧರ್ಮ, ನಂಗಲಿ ನಾಗೇಶ್, ವಿಶ್ವ, ಮುಂತಾದವರಿದ್ದರು.

# ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹೆಚ್ಚಿನ ಒತ್ತು ನೀಡಬೇಕು

**ಕೆ.ಆರ್.ಪೇಟೆ:** ಕೇವಲ ಅಂಕಗಳಿಕೆ ಮಾತ್ರ ಶಿಕ್ಷಣವಲ್ಲ, ಕೌಶಲ್ಯಾಧಾರಿತ ಹಾಗೂ ತಾಂತ್ರಿಕತೆಯನ್ನು ಒಳಗೊಂಡ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹೆಚ್ಚಿನ ಒತ್ತು ನೀಡಬೇಕು ಎಂದು ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಲೋಕೇಶ್ ಹೇಳಿದರು.



ಅವರು ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಭರವಸಾ ಕೋಶದ ಸಂಯೋಜನೆಯಲ್ಲಿ ಅರ್ಥಶಾಸ್ತ್ರ ವಿಭಾಗ ಆಯೋಜಿಸಿದ್ದ ಅಣಬೆ ಬೇಸಾಯ ಕುರಿತು ಒಂದು ದಿನದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಕೇವಲ ಪಠ್ಯಧಾರಿತ ಶಿಕ್ಷಣವನ್ನು ನೀಡುವುದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗುವುದಿಲ್ಲ ಎಂಬ ಸತ್ಯವನ್ನು ಮನಗಂಡಿತು ಅದಕ್ಕಾಗಿ ಕೌಶಲ್ಯ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ. ವಿದ್ಯಾರ್ಥಿಗಳು ತಾವು ಕಲಿಯುವ ವಿದ್ಯೆ ಜೊತೆಗೆ ಕೌಶಲ್ಯವನ್ನು ಕಲಿತುಕೊಳ್ಳುವುದರ ಮೂಲಕ ತಮ್ಮ ಭವಿಷ್ಯದ ಬದುಕನ್ನು ಹಸನು ಮಾಡಿಕೊಳ್ಳಬಹುದಾಗಿದೆ. ಅಣಬೆ ಬೇಸಾಯವು ಬಹಳ ಸುಲಭದ ಕಾರ್ಯವಾಗಿದ್ದು ವಿದ್ಯಾರ್ಥಿಗಳು ತಮ್ಮ ವ್ಯಾಪ್ತಿಯಲ್ಲಿ ಇರುವಷ್ಟೇ ಜಾಗ ಮತ್ತು ಹಣದಲ್ಲಿ ಅಣಬೆ ಬೇಸಾಯವನ್ನು ಮಾಡಬಹುದಾಗಿದೆ. ಅಣಬೆಗೆ ಮಾರುಕಟ್ಟೆಯು ಕೂಡ ಚೆನ್ನಾಗಿದ್ದು ಸ್ಥಳೀಯವಾಗಿ ತಾವೇ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳಬಹುದಾಗಿದೆ. ತರಬೇತಿಯನ್ನು ವಿದ್ಯಾರ್ಥಿಗಳು ನಿರ್ಲಕ್ಷಿಸದೆ ಉತ್ತಮ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಿ ಎಂದು ಎಂ.ಡಿ.ಲೋಕೇಶ್ ಮನವಿ ಮಾಡಿದರು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ವಿ.ವಿ.ಜಗದೀಶ್ ಮಾತನಾಡಿ ಪದವಿ ಹಂತದಲ್ಲಿ ವಿದ್ಯಾರ್ಥಿಗಳಿಗೆ ಇಂಟರ್ನ್ಶಿಪ್ ಅಡಿಯಲ್ಲಿ ಕೌಶಲ್ಯ ಆಧಾರಿತ ಶಿಕ್ಷಣವನ್ನು ನೀಡಬೇಕಾಗಿದೆ. ಅದಕ್ಕಾಗಿ ಕಾಲೇಜಿನಿಂದ ನಾವು ವಿದ್ಯಾರ್ಥಿಗಳಿಗೆ ಅಣಬೆ ಬೇಸಾಯದ ಬಗ್ಗೆ ತರಬೇತಿಯನ್ನು ಕೊಡಿಸುತ್ತಿದ್ದು ಕಾಲೇಜಿನಲ್ಲಿ ಹಣಬೆ ಬೆಳೆಯಲು ಸ್ಥಳಾವಕಾಶವನ್ನು ಮಾಡಿಕೊಟ್ಟು ಆದಾಯದ ಮೂಲವನ್ನು ನಾವೇ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕೆಂದಿದ್ದೇವೆ. ಉತ್ಪಾದನೆಯಾದ ಅಣಬೆಯನ್ನು ಉತ್ತಮ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಖರ್ಚಿಗೆ ಹಣ ಸಂಪಾದನೆಯನ್ನು ಸ್ವಂತವಾಗಿ ಮಾಡಲು ಅವಕಾಶ ಮಾಡಿಕೊಡುತ್ತಿದ್ದೇವೆ. ಇದನ್ನು ವಿದ್ಯಾರ್ಥಿಗಳು ಸವಾಲಾಗಿ ಸ್ವೀಕರಿಸಿ ನಮ್ಮ ಕಾಲೇಜಿನ ಜೊತೆ ಕೈಜೋಡಿಸಬೇಕೆಂದು ತಿಳಿಸಿದರು.

ಅಣಬೆ ಬೇಸಾಯವನ್ನು ಕುರಿತು ನುರಿತ ಬೇಸಾಯ ತಜ್ಞ ಅಭಿಷೇಕ್ ಅವರು ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳಿಗೆ ಬೇಸಾಯದ ವಿವಿಧ ಹಂತಗಳು ಮತ್ತು ಪಾಲನೆ ಪೋಷಣೆಗಳ ಬಗ್ಗೆ ವಿವರವಾಗಿ ಮಾಹಿತಿಯನ್ನು ಒದಗಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳೊಡನೆ ಸಂವಾದವನ್ನು ಕೂಡ ಆಯೋಜಿಸಲಾಗಿತ್ತು. ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಬಿ.ಎ.ಮಂಜುನಾಥ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಧ್ಯಾಪಕರುಗಳಾದ ಡಾ.ಸಿ.ರಮೇಶ್, ಡಾ. ಮಹೇಶ್, ಐಕ್ಯೂಎಸಿ ಸಹ ಸಂಚಾಲಕರಾದ ಉಮೇಶ್, ಗ್ರಂಥಪಾಲಕ ಅರುಣ್‌ಕುಮಾರ್, ಪತ್ರಾಂಕಿತ ವ್ಯವಸ್ಥಾಪಕಿ ಜೆ.ಭುವನೇಶ್ವರಿ, ಕಾರ್ಯಕ್ರಮದ ಸಂಚಾಲಕರಾದ ಅರ್ಥಶಾಸ್ತ್ರ ಉಪನ್ಯಾಸಕ ಎಲ್.ಆನಂದ್ ಮತ್ತಿತರರು ಇದ್ದರು.

# ರೈತರು ಭೂ ದಲ್ಲಾಳಿಗಳಾಗಿದ್ದಾರೆ: ಹೀರೆಬಲ್ಲ ಕೃಷ್ಣಪ್ಪ

**ಶಿಡ್ಲಘಟ್ಟ:** ಈ ಭಾಗದ ಕೆಲ ಏಜೆಂಟರು, ದಲ್ಲಾಳಿಗಳು ಕೆಐಎಡಿಬಿ ಆಯುಕ್ತರು ಹಾಗೂ ಭೂ ಸ್ವಾಧೀನ ವಿಶೇಷ ಜಿಲ್ಲಾಧಿಕಾರಿಯನ್ನು ಇತ್ತೀಚೆಗೆ ಭೇಟಿ ಮಾಡಿ, ನಾವು ಜಮೀನು ನೀಡಲು ಸಿದ್ಧರಿದ್ದೇವೆ ಎಂದು ಮನವಿ ಮಾಡಿದ್ದಾರೆ. ಇದು ರೈತರಲ್ಲಿ ಗೊಂದಲ ಮೂಡಿಸುವ, ರೈತರ ಹೋರಾಟವನ್ನು ದಿಕ್ಕು ತಪ್ಪಿಸುವ ಹುನ್ನಾರವಾಗಿದ್ದು, ಆಯುಕ್ತರನ್ನು ಮತ್ತು ವಿಶೇಷ ಭೂಸ್ವಾಧೀನ ಅಧಿಕಾರಿಯನ್ನು ಭೇಟಿ ಮಾಡಿರುವವರಲ್ಲಿ ಬೆರಳೆಣಿಕೆಯಷ್ಟು ರೈತರಿಲ್ಲ, ಒಂದಿಬ್ಬರು ರೈತರು ಬಿಟ್ಟು ಮಿಕ್ಕವರು ಭೂ ದಲ್ಲಾಳಿಗಳಾಗಿದ್ದಾರೆ ಎಂದು ಕೆಐಎಡಿಬಿ ಭೂ ಹೋರಾಟ ಸಮಿತಿ ಅಧ್ಯಕ್ಷರಾದ ಹೀರೆಬಲ್ಲ ಕೃಷ್ಣಪ್ಪ ದೂರಿದರು.



ತಾಲ್ಲೂಕಿನ ಜಂಗಮಕೋಟೆ ಕ್ರಾಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಭಾಗದ 90% ರೈತರು ಕೆಐಎಡಿಬಿಗೆ ಭೂಮಿ ಬಿಟ್ಟು ಕೊಡಲ್ಲ ಎಂದು ಬರಹ ರೂಪದಲ್ಲಿ ಸರಕಾರಕ್ಕೆ ಪತ್ರ ಬರೆದುಕೊಟ್ಟಿದ್ದೇವೆ,ಆದರೆ ನಿನ್ನೆ ಅಧಿಕಾರಿಗಳನ್ನು ಭೇಟಿ ಮಾಡಿದ ತಂಡವು 90% ಮಂದಿ ಭೂಮಿಕೃಷಿಗೆ ಯೋಗ್ಯವಲ್ಲದ ಭೂಮಿ ಸ್ವಾಧೀನಪಡಿಸಿಕೊಂಡು ಅಲ್ಲಿ ಕೈಗಾರಿಕೆಗಳನ್ನು ಆರಂಭಿಸಲಿ ಎಂದರು.

ಜಂಗಮಕೋಟೆ ಹೋಬಳಿ 13 ಹಳ್ಳಿಗಳ ವ್ಯಾಪ್ತಿಯಲ್ಲಿ ಕೈಗಾರಿಕೆ ಸ್ಥಾಪನೆ ಉದ್ದೇಶಕ್ಕಾಗಿ ಕೆಐಎಡಿಬಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದು, ಯಾವುದೇ ಕಾರಣಕ್ಕೂ ಜಮೀನು ಬಿಟ್ಟುಕೊಡುವ ಪ್ರಶ್ನೆಯೆ ಇಲ್ಲ, ಜೀವ ಕೊಡುತ್ತೇವೆ ಹೊರತು ಜಮೀನು ಮಾತ್ರ ಬಿಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಂಗಮಕೋಟೆ ಹಾಗೂ ಕಸಬಾ ಹೋಬಳಿಯಲ್ಲಿ ಸಂಪೂರ್ಣವಾಗಿ ಫಲವತ್ತಾದ ಭೂಮಿಯಿದೆ, ಇಲ್ಲಿ ಕೈಗಾರಿಕೆಗಳ ಸ್ಥಾಪನೆ ಬೇಡ ,ಸರ್ಕಾರ ಈ ಬಗ್ಗೆ ಮರುಚಿಂತನೆ ಮಾಡಲಿ, ಶಾಸಕರು ಹಾಗೂ ಸಚಿವರು ಈ ಕುರಿತು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ತಾದೂರು ಮಂಜುನಾಥ್ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಅವರನ್ನು ನಾವು ಕಳೆದ 3 ತಿಂಗಳ ಹಿಂದೆ ಭೇಟಿ ಮಾಡಿದಾಗ ಜಂಗಮಕೋಟೆ ಕ್ರಾಸ್‌ನಲ್ಲಿ ಎಲ್ಲಾ ರೈತರನ್ನು ಸಭೆ ಸೇರಿಸಿ ಚರ್ಚಿಸಿ ಬಹುಪಾಲು ರೈತರು ಜಮೀನು ಕೊಡಲು ಒಪ್ಪಿದರೆ ಮಾತ್ರವೇ ಕೆಐಎಡಿಬಿಗೆ ಭೂ ಸ್ವಾಧೀನ ಪ್ರಕ್ರಿಯೆ ಮುಂದುವರೆಸುತ್ತೇವೆ, ರೈತರು ಒಪ್ಪದಿದ್ದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಕೈಬಿಡುತ್ತೇವೆ ಎಂದು ಭರವಸೆ ನೀಡಿದ್ದರು.

ಆದರೆ ಇದುವರೆಗೂ ರೈತರ ಸಭೆ ಕರೆದು ಚರ್ಚಿಸಿ ಅಭಿಪ್ರಾಯ ಸಂಗ್ರಹಿಸುವ ಕೆಲಸ ಆಗಲಿಲ್ಲ,ಆದರೆ ಕೆಲವರನ್ನು ಕರೆಸಿಕೊಂಡು ಒಪ್ಪಿಗೆ ಪತ್ರ ಪಡೆಯುವ ಕೆಲಸ ಒಳಗೊಳಗೆ ನಡೆಯುತ್ತಿದೆ,ರೈತರ ಒಗ್ಗಟ್ಟು ಒಡೆದು ಆಳುವ ನೀತಿಯನ್ನು ಅಧಿಕಾರಿಗಳು, ಜನಪ್ರತಿನಿಧಿಗಳು ಮಾಡುತ್ತಿದ್ದಾರೆ ಎಂದು ದೂರಿದರು.

ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದಂತೆ ಜಂಗಮ ಕೋಟೆ ಕ್ರಾಸ್‌ನಲ್ಲೇ ರೈತರೆಲ್ಲರನ್ನೂ ಸೇರಿಸಿ ಚರ್ಚಿಸಿ ಅಭಿಪ್ರಾಯ ಸಂಗ್ರಹಿಸಬೇಕು, ಹೆಚ್ಚಿನ ರೈತರು ಜಮೀನು ನೀಡಲು ಒಪ್ಪುವುದಾದರೆ ಸ್ವಾಧೀನ ಪ್ರಕ್ರಿಯೆಗೆ ನಮ್ಮದೇನು ತಕರಾರಿಲ್ಲ ಒಪ್ಪದಿದ್ದರೆ ಸ್ವಾಧೀನ ಪ್ರಕ್ರಿಯೆ ಕೈಬಿಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಡಿಪಿನಾಯಕನಹಳ್ಳಿ ಅಜಿತ್ ಕುಮಾರ್,ಶಾಂತಕುಮಾರ್ ದೇವರಾಜ್, ಹೆಣ್ಣಂಗೂರು ಅಶ್ವತ್ ನಾರಾಯಣಗೌಡ, ಹೊಂಬೇಗೌಡ, ಮಂಜುನಾಥ್, ದೊಡ್ಡಗುಮ್ಮಣ್ಣ, ಬಸವಾಪಟ್ಟಣ ನಂಜುಂಡಪ್ಪ,ಲೋಕೇಶ್, ರಾಘವೇಂದ್ರ, ತಾದೂರು ಮೋಹನ್, ಹೀರೆಬಲ್ಲ ಕೃಷ್ಣಮೂರ್ತಿ ಮುಂತಾದವರು ಭಾಗವಹಿಸಿದ್ದರು.

# ವಿಜಯಪುರ ಮಿನಿ ತಾರಾಲಯ, ವಸತಿ ಶಾಲೆಗಳಿಗೆ ಅಸ್ತು: ಎಂ.ಬಿ.ಪಾಟೀಲ್

**ಬೆಂಗಳೂರು:** ವಿಜಯಪುರದಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಕಿರು ತಾರಾಲಯ (ಮಿನಿ ಪ್ಲಾನೆಟೇರಿಯಂ) ಹಾಗೂ ಬಬಲೇಶ್ವರ ಮತ್ತು ವಿಜಯಪುರದಲ್ಲಿ ಎರಡು ಹಾಸ್ಟೆಲ್‌ಗಳ ನಿರ್ಮಾಣಕ್ಕೆ ಒಟ್ಟು 56.88 ಕೋಟಿ ವ್ಯಯಿಸಲು ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಅವರು, '2015-16ನೇ ಸಾಲಿನ ಬಜೆಟ್ಟಿನಲ್ಲೇ ವಿಜಯಪುರವೂ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಕಿರು ತಾರಾಲಯ ಸ್ಥಾಪಿಸುವ ಘೋಷಣೆ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಇದು ಅನುಷ್ಠಾನಕ್ಕೆ ಬರಲಿಲ್ಲ. ಈಗ 12.88 ಕೋಟಿಗೆ ಪರಿಷ್ಕೃತ ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಇದಕ್ಕೆ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ಕೊಡಲಾಗಿದೆ. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಮೂಲಕ ಈ ಯೋಜನೆ ಕಾರ್ಯಗತಗೊಳ್ಳಲಿದೆ' ಎಂದಿದ್ದಾರೆ.

ವಿಜಯಪುರದಲ್ಲಿ ಈ ಯೋಜನೆಯ ಕಾಮಗಾರಿಗೆ ಇದುವರೆಗೆ 1.44 ಕೋಟಿ ರೂ. ವೆಚ್ಚವಾಗಿದೆ. ತಾರಾಲಯದಲ್ಲಿ ಡೋಮ್, ಪ್ರೊಜೆಕ್ಷನ್ ಸಿಸ್ಟಂ, ಒಳಾಂಗಣ, ಹೊರಾಂಗಣ ವಿಜ್ಞಾನ ಪ್ರದರ್ಶಿಕೆಗಳು, ಆಡಿಯೋ ವ್ಯವಸ್ಥೆ, ಹವಾ ನಿಯಂತ್ರಣ ವ್ಯವಸ್ಥೆ ಎಲ್ಲವೂ ಇರಲಿದೆ. ಇದರ ಮೂಲಕ ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ತಿಳಿವಳಿಕೆಯನ್ನು ಹೆಚ್ಚಿಸಲಾಗುವುದು. ನನೆಗುದಿಗೆ ಬಿದ್ದಿದ್ದ ಈ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆದಿದ್ದಾಗಿ ಅವರು ತಿಳಿಸಿದ್ದಾರೆ.

**2 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ**

ಬಬಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಮದಾಪುರದಲ್ಲಿರುವ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಡಾ.ಬಿ ಆರ್ ಅಂಬೇಡ್ಕರ್ ವಸತಿ ಶಾಲೆ ಮತ್ತು ವಿಜಯಪುರದಲ್ಲಿರುವ ವಸತಿಸಹಿತ ಪದವಿಪೂರ್ವ ಕಾಲೇಜಿಗೆ ಸ್ವಂತ ಕಟ್ಟಡಕ್ಕಾಗಿ ತಲಾ 22 ಕೋಟಿ ರೂ.ಗಳಂತೆ ಒಟ್ಟು 44 ಕೋಟಿ ರೂ. ಒದಗಿಸಲು ಕೂಡ ಸಂಪುಟ ಸಭೆಯಲ್ಲಿ ಹಸಿರು ನಿಶಾನೆ ಸಿಕ್ಕಿದೆ ಎಂದು ಪಾಟೀಲ ತಿಳಿಸಿದ್ದಾರೆ.

ಈ ಎರಡೂ ವಸತಿ ಶಾಲೆಗಳು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೀಸಲಾಗಿದ್ದು, ಇಲ್ಲಿ ತಲಾ 250ರಂತೆ ಒಟ್ಟು 500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈಗ ಇವು ಬಾಡಿಗೆ ಕಟ್ಟಡದಲ್ಲಿ ಇರುವುದರಿಂದ ಮೂಲಸೌಕರ್ಯ ಒದಗಿಸಲು ಸಾಧ್ಯವಾಗಿಲ್ಲ. ಹೊಸ ಕಟ್ಟಡಗಳಲ್ಲಿ ಶಾಲಾ ಕಟ್ಟಡ, ಬಾಲಕರ ಮತ್ತು ಬಾಲಕಿಯರ ಹಾಸ್ಟೆಲ್, ಭೋಜನಾಲಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವಸತಿ ಗೃಹಗಳು, ರಂಗಮಂದಿರ, ಕಾಂಪೌಂಡ್, ಸೋಲಾರ್ ವಾಟರ್ ಹೀಟರ್, ಒಳಚರಂಡಿ ವ್ಯವಸ್ಥೆ ಮುಂತಾದವು ಇರಲಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿರುವ 61 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಕ್ಕಾಗಿ ಒಟ್ಟು 1292.50 ಕೋಟಿ ರೂ. ಒದಗಿಸಲು ಸರಕಾರ ತೀರ್ಮಾನಿಸಿದೆ. ಇದರಲ್ಲಿ ಜಿಲ್ಲೆಯ ಈ ಎರಡು ಶಾಲೆಗಳೂ ಸೇರಿವೆ ಎಂದು ಅವರು ಹೇಳಿದ್ದಾರೆ.

# ಮಲೆಮಹದೇಶ್ವರ: ಹುಂಡಿಯಲ್ಲಿ 1,94,49,000 ರೂ ಸಂಗ್ರಹ



**ಹನೂರು:** ತಾಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಲಕ್ಷಾಂತರ ಭಕ್ತಾದಿಗಳ ಆರಾಧ್ಯ ದೈವ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಂಡಿ ಹಣ ಎಣಿಕೆ ಕಾರ್ಯ ನಡೆದಿದ್ದು 28 ದಿನಗಳಲ್ಲಿ ಸುಮಾರು 1 ಕೋಟಿ. 94 ಲಕ್ಷ. 49 ಸಾವಿರ ರೂ ಸಂಗ್ರಹವಾಗಿದೆ.

ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ದಿನ ಗುರುವಾರ ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಸಾಲೂರು ಬೃಹನ್ಮಠಾಧ್ಯಕ್ಷರು ಡಾ. ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ರವರ ದಿವ್ಯಸಾನಿದ್ಯದಲ್ಲಿ ಹಾಗೂ ಪ್ರಾಧಿಕಾರ ಕಾರ್ಯದರ್ಶಿ ರವರ ನೇತೃತ್ವದಲ್ಲಿ ಹುಂಡಿ ಎಣಿಕೆ ಕಾರ್ಯ ಪ್ರಾರಂಭಿಸಿ ಸಂಜೆ ವೇಳೆಗೆ ಹುಂಡಿ ಹಣ ಎಣಿಕೆ ಮುಕ್ತಾಯವಾಯಿತು.

ದಿನಾಂಕ: 23/1/2025 ರಿಂದ 19/2/2025ರ ವರೆಗಿನ 28 ದಿನಗಳಲ್ಲಿ ಒಟ್ಟು 1,94,49,243.00ಗಳು (ಹುಂಡಿ ಮತ್ತು ಇ-ಹುಂಡಿ ಸೇರಿ) ಹಾಗೂ ಚಿನ್ನ 63 ಗ್ರಾಂ 06 ಮಿ, ಬೆಳ್ಳಿ 01 ಕೆ.ಜಿ 510 ಗ್ರಾಂ ಹುಂಡಿಯಲ್ಲಿ ದೊರೆತಿದೆ. ಹಾಗೂ ವಿದೇಶಿ ನೋಟಗಳು 11, ಚಲಾವಣೆಗೆಯಾಗದ 2000 ಮುಖಬೆಲೆಯ 6 ನೋಟುಗಳು ಹುಂಡಿಯಲ್ಲಿ ದೊರೆತಿದೆ.

ಎಣಿಕೆ ಕಾರ್ಯದಲ್ಲಿ ಪ್ರಾಧಿಕಾರದ ಉಪ ಕಾರ್ಯದರ್ಶಿ ಚಂದ್ರಶೇಖರ.ಜಿ.ಎಲ್, ಲೆಕ್ಕಾಧೀಕ್ಷಕ ಗುರುಮಲ್ಲಯ್ಯ, ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರುಗಳಾದ ಗಂಗನ ತಿಮ್ಮಯ್ಯ, ಭಾಗ್ಯಮ್ಮ, ಮಹದೇವಪ್ಪ ಬಿ, ಮರಿಸ್ವಾಮಿ ಹಾಗು ಚಾಮರಾಜನಗರ ಜಿಲ್ಲಾಡಳಿತ ಕಛೇರಿಯ ಮಧುಕರ್, ಹಾಗೂ ಪ್ರಾಧಿಕಾರದ ಸಿಬ್ಬಂದಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ಕೊಳ್ಳೇಗಾಲದ ಬ್ಯಾಂಕ್ ಆಫ್ ಬರೋಡ ಮುಖ್ಯ ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಜರಿದ್ದರು.

# ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



**ಮಾಗಡಿ:** ತಾಲೂಕಿನ ಬಗಿನಗೆರೆ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಹೇಮಾವತಿ ಸಿ.ಎನ್. ರಾಜಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಗಿನಗೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗಂಗುಡ್ಡಯ್ಯ ನಿಧನದಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹೇಮಾವತಿ ಸಿ.ಎನ್.ರಾಜಣ್ಣ ಒರತು ಪಡಿಸಿ ಯಾರು ನಾಮಪತ್ರಸಲ್ಲಿಸದ ಕಾರಣ ಚುನಾವಣಾಧಿಕಾರಿ ವೆಂಕಟೇಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು ಈ ವೇಳೆ ನಿರ್ದೇಶಕರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ಅಧ್ಯಕ್ಷೆ ಹೇಮಾವತಿ ಸಿ.ಎನ್. ರಾಜಣ್ಣ ಮಾತನಾಡಿ, ತಾಲೂಕಿನಲ್ಲೆ ಪ್ರಪ್ರಥಮ ಬಾರಿಗೆ ಮಹಿಳೆಗೆ ಅಧ್ಯಕ್ಷ ಸ್ಥಾನ ನೀಡಿರುವುದು ನಿಜಕ್ಕೂ ಮಹಿಳೆಯರಿಗೆ ಕೊಟ್ಟ ಗೌರವ ಆ ಗೌರವಕ್ಕೆ ಚ್ಯುತಿ ಬಾರದಂತೆ ಪ್ರಾಮಾಣಿಕವಾಗಿ ರೈತರಿಗೆ ಸಿಗಬೇಕಾದ ಸೌಲತ್ತುಗಳನ್ನು ಕಾಲಕಾಲಕ್ಕೆ ಒದಗಿಸುತ್ತೇನೆ ಈಗಾಗಲೇ ರಸಗೊಬ್ಬರ ವಿತರಣೆ, ಪಡಿತರ ವಿತರಣೆಗೆ ನಮ್ಮ ಸಂಘದಿಂದ ಹೆಚ್ಚಿನ ಕಾಳಜಿವಹಿಸಲಾಗಿದೆ. ಅದೇ ರೀತಿ ರೈತರಿಗೆ ಬೆಳೆ ಸಾಲ, ಚಿನ್ನಾಭರಣ ಸಾಲ ಇತರೆ ಕೈಸಾಲಗಳನ್ನು ಕೊಡುವ ಮೂಲಕ ರೈತರ ಸ್ವಾವಲಂಬನೆಗೆ ಪ್ರಮಾಣಿಕವಾಗಿ ದುಡಿಯುತ್ತೇನೆ. ಅವಿರೋಧವಾಗಿ ಅಧ್ಯಕ್ಷೆಯಾಗಲು ಸಹಕಾರ ನೀಡಿದ ಶಾಸಕ ಎಚ್.ಸಿ.ಬಾಲಕೃಷ್ಣ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಎಚ್.ಎನ್.ಅಶೋಕ್, ಎ.ಕೆ.ಧನಂಜಯ ಅವರಿಗೆ ಅಭಿನಂದಿಸುವುದಾಗಿ ತಿಳಿಸಿದರು.

ಬಿಡಿಸಿಸಿ ಬ್ಯಾಂಕ್ ಜಿಲ್ಲಾ ಪ್ರತಿನಿಧಿ ಎಂ. ಕೆ. ಧನಂಜಯ ಮಾತನಾಡಿ. ಶಾಸಕ ಹೆಚ್.ಸಿ. ಬಾಲಕೃಷ್ಣ ಮಾಜಿ ಸಂಸದ ಡಿಕೆ. ಸುರೇಶ್ ಹಾಗೂ ಬಿಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಎಚ್. ಎನ್. ಅಶೋಕ್ ಅವರ ಪರಿಶ್ರಮದಿಂದ ಮಹಿಳೆಗೆ ಅಧ್ಯಕ್ಷ ಸ್ಥಾನದ ಸ್ಥಾನಮಾನ ನೀಡಿದ್ದು ಇದು ತಾಲೂಕಿನ ಮಹಿಳೆಯರಿಗೆ ಕೊಟ್ಟ ಗೌರವ. ಇಂಥಹ ಕೆಲಸ ಯಾರು ಮಾಡಿರಲಿಲ್ಲ. ಸಂಘ ಉತ್ತಮವಾಗಿ ನಡೆಯುತ್ತಿದ್ದು ನೂತನವಾಗಿ ಸಂಘದ ಕಟ್ಟಡ ನಿರ್ಮಾಣಮಾಡಲಾಗಿದ್ದು ಶೀಘ್ರವೇ ಲೋಕಾರ್ಪಣೆಮಾಡಲು ಸಕಲ ಸಿದ್ದತೆ ನಡೆದಿದೆ. ಅಧ್ಯಕ್ಷರು ವಿದ್ಯಾವಂತರು, ಬುದ್ದಿವಂತವರಾಗಿರುವುದರಿಂದ ಸಂಘವನ್ನು ಮತಷ್ಟು ಅಬಿವೃದ್ದಿಗೊಳಿಸಿ ಜಿಲ್ಲೆಗೆ ಮಾದರಿ ಮಾಡಲಿದ್ದಾರೆ ಎಂಬ ಭರವಸೆ ಇದೆ ಎಂದರು.

ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವರಾಜು ಮಾತನಾಡಿ, ಬಿಡಿಸಿ ಬ್ಯಾಂಕ್ ನಿರ್ದೇಶಕ ಎಚ್.ಎನ್. ಅಶೋಕ್ ಅವರು ತಾಲೂಕಿನ ಸಹಕಾರಿ ಸಂಘಗಳ ಪ್ರಗತಿಗೆ ಹಗಲಿರಲು ದುಡಿಯುತ್ತಿದ್ದಾರೆ. ರೈತರಿಗೆ ಉಪಯೋಗವಾಗುವಂಥಹ ಕಾರ್ಯಕ್ರಮಗಳನ್ನು ಕೊಡಿಸಲು ಕಂಕಣಬದ್ಧರಾಗಿದ್ದಾರೆ ಅವರಿಗೆ ನಾವೆಲ್ಲರೂ ಕೈಜೋಡಿಸೋಣ. ಸಂಘದ ಶ್ರೇಯೋಭಿವೃದ್ದಿಗೆ ನೂತನ ಅಧ್ಯಕ್ಷೆ ಹೇಮಾವತಿ ರಾಜಣ್ಣ ಒತ್ತು ನೀಡಿ ಇತರೆ ಸಂಘಗಳಿಗೆ ಮಾದರಿಯಾಗಲಿ ಎಂದು ಶುಭಹಾರೈಸಿದರು.

ಸಂಘದ ಉಪಾಧ್ಯಕ್ಷ ಕೆಂಪಣ್ಣ, ನಿರ್ದೇಶಕರಾದ ಕೆಂಪೇಗೌಡ, ತಿಮ್ಮಪ್ಪ,ಹನುಮಂತಯ್ಯ, ಬೆಟ್ಟೇಗೌಡ, ಕಲ್ಲು ಬಸವಯ್ಯ, ಗೌರಮ್ಮ, ರಾಮಚಂದ್ರು, ಸಿಕೆ.ಮಂಜುನಾಥ್, ಟಿಎಪಿಸಿಎಂಎಸ್ ಅಧ್ಯಕ್ಷ ಶಿವಪ್ರಸಾದ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಶ್ರೀನಿವಾಸ್, ರವಿಕುಮಾರು, ತಾ.ಪಂ. ಮಾಜಿ ಸದಸ್ಯ ಟಿ.ಜಿ.ವೆಂಕಟೇಶ್, ಬಗಿನಗೆರೆ ರಂಗಸ್ವಾಮಯ್ಯ, ಕಾರ್ಯದರ್ಶಿ ಗಂಗಾಧರ್ ಇತರರು ಇದ್ದರು.

# ಪರಿಸರ ಪೂರಕ ಗಿಡ ಮರಗಳನ್ನು ಬೆಳೆಸುವ ಕಾರ್ಯವಾಗಬೇಕು

**ಮುಳಬಾಗಿಲು:** ಗ್ರಾಮಗಳಲ್ಲಿ ಉತ್ತಮವಾದ ವಾತಾವರಣ ಪರಿಶುದ್ಧಗಳಿಗೆ ಪೂರ್ವಿಕರು ಅಶ್ವತ್ಥ ಕಟ್ಟೆಗಳನ್ನು ನಿರ್ಮಿಸಿ ಅರಳಿ ಮತ್ತು ಬೇವಿನ ಮರಗಳು ಬೆಳೆಸಿ ಪೂಜನೀಯ ಭಾವನೆಯಿಂದ ಕಾಣುತ್ತಿದ್ದರು ಆದರೆ ಇಂದು ಆ ಪರಿಸ್ಥಿತಿ ಮಾಯವಾಗಿದೆ ಅಶ್ವತ ಕಟ್ಟೆಗಳು ಇಲ್ಲವಾಗಿದೆ ಈ ಬಗ್ಗೆ ಗ್ರಾಮಗಳಲ್ಲಿ ಜಾಗೃತಿ ಮೂಡಿಸಿ ಪರಿಸರ ಪೂರಕ ಗಿಡ ಮರಗಳನ್ನು ನೆಟ್ಟು ಬೆಳೆಸುವ ಕಾರ್ಯವಾಗಬೇಕಾಗಿದೆ ಎಂದು ಗ್ರಾಮ ವಿಕಾಸ ಸಂಸ್ಥೆಯ ನಿರ್ದೇಶಕ ಎಂ. ವಿ. ನರಸಿಂಹ ರಾವ್ ಕರೆ ನೀಡಿದರು.

ಭಾರತೀಯ ಕಿಸಾನ್ ಸಂಘ ವತಿಯಿಂದ ಶುಕ್ರವಾರ ತಾಲೂಕಿನ ದೊಡ್ಡಹೊನ್ನಶೆಟ್ಟಹಳ್ಳಿ ಗ್ರಾಮದ ಕೆರೆಯಲ್ಲಿ ಗಂಗಾ ಪೂಜೆ, ಗೋ ಪೂಜೆ, ಭೂಮಿ ಪೂಜೆ, ಗ್ರಾಮ ವಿಕಾಸ ಸಂಸ್ಥೆ ಆವರಣದಲ್ಲಿ ಏರ್ಪಡಿಸಿದ ಭಾರತ ಮಾತಾ ಪೂಜೆ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿ ಕಿಸಾನ್ ಸಂಘ ಪ್ರಕೃತಿ ಪೂಜೆಯನ್ನು ಸಹ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಅರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕಾರ್ಯ ನಿರ್ವಹಿಸುತ್ತಿರುವು ಶ್ಲಾಘನೀಯ ಎಂದರು.

ಮದುವೆ, ಕಾರ್ಯಕ್ರಮಗಳಲ್ಲಿ ಕುಡಿಯುವ ನೀರನ್ನು ಪೋಲು ಮಾಡಲಾಗುತ್ತಿದೆ, ಪ್ಲಾಸ್ಟಿಕ್ ಬಾಟಲ್ ಬಳಕೆ ಮಾಡುತ್ತಿರುವುದು ಅಪಾಯಕಾರಿ ಬೆಳವಣಿಗೆ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲದಿದ್ದರೂ ಬಳಕೆ ಪ್ರಮಾಣ ಕಡಿಮೆ ಮಾಡಬಹುದು, ಎಚ್ಚೆತ್ತ ಪ್ರತಿಯೊಬ್ಬರು ಪ್ಲಾಸ್ಟಿಕ್ ಬಳಕೆಯನ್ನು ಈ ಕ್ಷಣದಿಂದ ನಿಲ್ಲಿಸಿ, ಇದರಿಂದ ಕೆರೆ, ಕಾಲುವೆಗಳು ಪ್ಲಾಸ್ಟಿಕ್ ನಿಂದ ಮುಚ್ಚುವುದು ತಪ್ಪುತ್ತದೆ, ದೇಶೀಯ ನಾಟಿ ಗೋವುಗಳು ಹಸುಗಳು ಕಣ್ಮರೆಯಾಗುತ್ತಿವೆ ಇವುಗಳ ರಕ್ಷಣೆ ಆಗಬೇಕು, ಗ್ರಾಮ ಪಂಚಾಯತಿ ಒಂದಕ್ಕೆ 1000ಕ್ಕೂ ಅಧಿಕ ಸೀಮೆ ಹಸುಗಳಿದ್ದರೆ 10 ನಾಟಿ ಹಸುಗಳು ಸಿಗುವುದು ಕಷ್ಟ, ವಿಷಮುಕ್ತ ಹಾಲು, ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡುವಂತಹ ವಾತಾವರಣ ನಿರ್ಮಾಣವಾಗಬೇಕಾಗಿದೆ, ಇದರಿಂದ ಉತ್ತಮ ಪರಿಸರದ ಜೊತೆಗೆ ಆರೋಗ್ಯವು ಸಿಗುತ್ತದೆ ಎಂದರು,

ಉಚಿತ ಕುಡಿಯುವ ನೀರು ಸೇವೆ : ಕಿಸಾನ್ ಸಂಘದ ಸದಸ್ಯರು ಸೇರಿದಂತೆ ರೈತರು ಮಾಡುವ ಮದುವೆಗಳಿಗೆ ಉಚಿತ ಶುದ್ಧ ಕುಡಿಯುವ ನೀರನ್ನು 3 ಸಾವಿರ ಸ್ಟೀಲ್ ನೋಟಗಳೊಂದಿಗೆ 30 ಜನ ಸ್ವಯಂಸೇವಕ ಸಿಬ್ಬಂದಿ ಪಾಲ್ಗೊಂಡು ಮದುವೆ ಸಮಾರಂಭದಲ್ಲಿ ವಿತರಣೆಯನ್ನು ಅಚ್ಚುಕಟ್ಟಾಗಿ ಮಾದರಿಯಾಗಿ ಮಾಡುವ ಮೂಲಕ ಪ್ಲಾಸ್ಟಿಕ್



ಬಾಟಲ್ ಅವಶ್ಯಕತೆ ಬೇಕಾಗಿಲ್ಲ ಎಂಬುದನ್ನು ಸಾಧಿಸಿ ತೋರಿಸುವ ಅವಕಾಶವನ್ನು ನೀಡಿ ಎಂದು ಎಂ. ವಿ. ಎನ್. ರಾವ್ ಘೋಷಣೆ ಮಾಡಿದರು.

ಬೆಂಗಳೂರಿನ ಅರ್ಕ ಜುವೆಲ್ಲರಿ ಉದ್ಯಮಿ ನಂಗಲಿ ಕೆ. ಸತೀಶ್ ಕುಮಾರ್ ಮಾತನಾಡಿ ಗ್ರಾಮ ವಿಕಾಸ ಸಂಸ್ಥೆಯವರು ರೈತರಲ್ಲದ ಕೃಷಿಕರ ಪರವಾಗಿ ಕಾರ್ಯನಿರ್ವಹಿಸುವರನ್ನು ಒಗ್ಗೂಡಿಸುವ ಪ್ರಯತ್ನವನ್ನು ಕಿಸಾನ್ ಸಂಘದ ಮೂಲಕ ಮಾಡುತ್ತಿರುವುದು ನಿಜವಾಗಿಯೂ ರೈತರ ಪರವಾಗಿರುವ ಕಾಳಜಿ ತೋರಿಸುತ್ತದೆ, ಸೇವಾ ಮನೋಭಾವ ಇರುವವರನ್ನು ಗುರುತಿಸುವುದು ಹೆಮ್ಮೆಯ ವಿಷಯವಾಗಿದೆ, ನಮ್ಮ ಸಂಸ್ಥೆಯಿಂದ ಸಮಾಜಕ್ಕಾಗಿ ಸೇವೆ ಮಹಿಳೆರಿಗೆ ಇಂಥ ಕಾರ್ಯಕ್ರಮಗಳಲ್ಲಿ ಬಲೆ ಅರಿಶಿನ ಕುಂಕುಮ ಮೂಲಕ ಹೊಸ ಬಟ್ಟೆ ಬಾಗಿನ ಮೂಲಕ ಅವರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುವಂತಾಗಲಿ ಎಂದರು.

ಹಿರಿಯ ಮುಖಂಡ ಪಿ. ಎಂ. ರಘುನಾಥ್ ಮಾತನಾಡಿ, 1980 ಕ್ಕಿಂತ ಹಿಂದೆ ಇದ್ದ ಕೃಷಿ ಪದ್ಧತಿಗೂ ಈಗಿನ ಕೃಷಿಗೂ ಬಹಳ ವ್ಯತ್ಯಾಸವಾಗಿದೆ, ಇಂದು ಕೃಷಿಕ ನಷ್ಟಕ್ಕೆ ಒಳಗಾಗುವುದರ ಜೊತೆಗೆ ಕುಟುಂಬದ ಸದಸ್ಯರ ಆರೋಗ್ಯವನ್ನು ಕೆಡಿಸಿಕೊಳ್ಳುವ ಮೂಲಕ ಆಸ್ಪತ್ರೆಗಳಿಗೆ ಅಧಿಕವಾಗಿ ಖರ್ಚು ಮಾಡುತ್ತಿದ್ದಾರೆ, ಈ ಬಗ್ಗೆ ರೈತರು ಮತ್ತೊಮ್ಮೆ ಆತ್ಮವಿಮರ್ಶೆ ಮಾಡಿಕೊಂಡು ನೈಸರ್ಗಿಕ ಸಾವಯುವ ಕೃಷಿಯನ್ನು ಮಾಡುವ ಮೂಲಕ ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಈ ಬಗ್ಗೆ ಗ್ರಾಮ ಗ್ರಾಮಗಳಲ್ಲಿ ಕಿಸಾನ್ ಸಂಘ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಲಿ ಎಂದರು. ಬಿಕೆಎಸ್ ದಕ್ಷಿಣ ಪ್ರಾಂತ ಕಾರ್ಯಕಾರಿ ಸದಸ್ಯ ಎ. ಅಪ್ಪಾಜಿಗೌಡ, ತಾಲೂಕು ಅಧ್ಯಕ್ಷ ಉಗಣಿ ಆರ್. ನಾರಾಯಣಗೌಡ, ನಗರ ಘಟಕದ ನಿಯೋಜಿತ ಅಧ್ಯಕ್ಷ ಆರ್. ಶ್ರೀನಿವಾಸ್, ಜಿಲ್ಲಾ ಉಪಾಧ್ಯಕ್ಷ ಅರಹಳ್ಳಿ ಶ್ರೀನಿವಾಸ ಗೌಡ, ಜಿಲ್ಲಾ ಕೋಶಾಧ್ಯಕ್ಷ ವಕೀಲ ವಿ.ಜಯಪ್ಪ , ಜಿಲ್ಲಾ ಮಾಜಿ ಅಧ್ಯಕ್ಷ ಕೆ. ರೋಹನ್ ಕುಮಾರ್, ಗ್ರಾಮೀಣ ಮಹಿಳಾ ಒಕ್ಕೂಟದ ಅಧ್ಯಕ್ಷೆ ಎಂ. ಜಿ. ಪಾಪಮ್ಮ, ಗ್ರಾಮ ವಿಕಾಸ ಸಂಸ್ಥೆಯ ಗಿರಿಜಾ ಮತ್ತಿತರರು.

# ಶಿವಾನಂದಸ್ವಾಮಿ ಮಠ, ದಾಸೋಹ ಭವನ ಕರ್ತೃ ಗದ್ದಿಗೆ ನಿರ್ಮಾಣಕ್ಕೆ ಭೂಮಿ ಪೂಜೆ

**ಹನೂರು:** ತಾಲೂಕಿನ ಮಣಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಗುರುಗಳು ದೊಡ್ಡಿ ಗ್ರಾಮದಲ್ಲಿ ಶ್ರೀ ಶಿವಾನಂದ ಸ್ವಾಮಿ ಮಠ ಹಾಗೂ ದಾಸೋಹ ಭವನ ಕರ್ತೃ ಗದ್ದಿಗೆ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಂಆರ್ ಮಂಜುನಾಥ್ ಹಾಗೂ ಮೈಸೂರು ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮಿಜಿಯವರು ಭೂಮಿ ನೇರವೇರಿಸಿದರು.

ಗುರುಗಳು ದೊಡ್ಡಿ ಗ್ರಾಮದಲ್ಲಿ ಶಾಖಾ ಮಠದ ದಾಸೋಹ ಭವನ ಕರ್ತೃ ಗದ್ದಿಗೆ ನಿರ್ಮಾಣಕ್ಕೆ ಶಾಸಕರ ಅನುದಾನ 10 ಲಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರ ಅನುದಾನ 15 ಲಕ್ಷ. ಒಟ್ಟು 25 ಲಕ್ಷ ರೂ ಅನುದಾನದಲ್ಲಿ ಶ್ರೀ ಶಿವಾನಂದ ಸ್ವಾಮಿ ಮಠ ಭೂಮಿ ಪೂಜೆ ಹಾಗೂ ಶ್ರೀಗಳ ಗದ್ದಿಗೆ. ದಾಸೋಹ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಭೂಮಿ ಪೂಜೆ ಸಲ್ಲಿಸಿದ ಬಳಿಕ ಮೈಸೂರು ಉರಿಲಿಂಗ ಪೆದ್ದ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು ಮಾತನಾಡಿ ಮಣಗಳ್ಳಿ ಗ್ರಾಮದಲ್ಲಿ 1955 ರಲ್ಲಿ ಶ್ರೀ ಶ್ರೀ ಶಿವಾನಂದ ಮಹಾಸ್ವಾಮಿಗಳು ಬಂಡಳ್ಳಿ ಮಣಗಳ್ಳಿ ಹನೂರು ಸುತ್ತಮುತ್ತ ಗ್ರಾಮಗಳಲ್ಲಿ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ಮಾಡಿದರೆಂದು ಶ್ರೀಗಳನ್ನು ಸ್ಮರಿಸಿದರು.

ಶಾಸಕ ಎಂಆರ್ ಮಂಜುನಾಥ್ ಹಾಗೂ



ವಿಧಾನ ಪರಿಷತ್ ಸದಸ್ಯ ಸುಧಮದಾಸ್ ರವರು ಶ್ರೀ ಮಠದ ಶ್ರೇಯಾಭಿವೃದ್ಧಿಗಾಗಿ ಅನುದಾನ ನೀಡಿದ್ದಾರೆ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಶಾಸಕ ಮಂಜುನಾಥ್ ರವರು ಹನೂರು ಕ್ಷೇತ್ರದ ಅನೇಕ ಜನಪರ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಶ್ರೀ ಮಲೆ ಮಹದೇಶ್ವರ ಬೆಟ್ಟದ ಹೆಚ್ಚಿನ ಅಭಿವೃದ್ಧಿಗಾಗಿ ಪಣತೊಟ್ಟಿದ್ದಾರೆ ಸರಳ ಸಜ್ಜನಿಕೆ ಮತ್ತು ಜನಪ್ರಿಯ ಶಾಸಕರು ಎಲ್ಲರ ಜೊತೆ ಪ್ರೀತಿ ವಿಶ್ವಾಸದಿಂದ ಉತ್ತಮ ಜನಪ್ರಿಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಹನೂರು ಕ್ಷೇತ್ರವನ್ನು ಜಿಲ್ಲೆಯಲ್ಲಿ ನಂ.1 ಕ್ಷೇತ್ರವನ್ನಾಗಿ ಮಾಡಲಿಕ್ಕೆ ಹೊರಟಿದ್ದಾರೆ. ದಿನದ 24 ಗಂಟೆಗಳ ಕಾಲ ಜನರ ಕಷ್ಟ ಸುಖ ದುಃಖಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಶಾಸಕ ಎಂಆರ್ ಮಂಜುನಾಥ್ ಅವರು ಮಾತನಾಡಿ ಗುರುಗಳು ದೊಡ್ಡಿಯಲ್ಲಿ ಇರುವ ಶ್ರೀ ಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಶ್ರೀಗಳು ಈ ಭಾಗದಲ್ಲಿ ಸಂಚರಿಸಿ. ಭಕ್ತಿ ಭಾವನೆಗಳನ್ನು ಹಂಚಿಕೊಳ್ಳುವ ಮೂಲಕ ಈ ಭಾಗದ ಜನರ ಮಾರ್ಗದರ್ಶಕರಾಗಿ ಸೇವೆಯನ್ನು ನೀಡಿದ್ದಾರೆ ಅವರ ಮಾರ್ಗದರ್ಶನದಲ್ಲಿ ನಡೆಯಬೇಕು. ಶ್ರೀ ಮಠದ ಅಭಿವೃದ್ಧಿ ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇನೆ ಎಂದು ತಿಳಿಸಿದರು.

ಮಣಗಳ್ಳಿ ಗ್ರಾಮದಿಂದ ಗುರುಗಳ ದೊಡ್ಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿಯ ಕುರಿತು ಸ್ಥಳೀಯ ಮುಖಂಡರುಗಳು ಶಾಸಕರಿಗೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಮಂಜುನಾಥ್ ಅವರು ರಸ್ತೆಯು ತುಂಬಾ ಕಿರಿದಾಗಿದ್ದು ಅಕ್ಕಪಕ್ಕದಲ್ಲಿರುವ ಜಮೀನಿನವರು ಗ್ರಾಮದ ಮುಖಂಡರುಗಳು ಸ್ವಯಂ ಪ್ರೇರಿತರಾಗಿ ಚರ್ಚೆ ನಡೆಸಿ ಅಷ್ಟೇ ಅಗಲೀಕರಣಕ್ಕೆ ಮುಂದಾಗಬೇಕು.ರಸ್ತೆ ಅಗಲೀಕರಣಕ್ಕೆ ಅಕ್ಕ ಪಕ್ಕದ ಜಮೀನಿನವರು ಸಮ್ಮತಿ ನೀಡಿದರೆ ನೀವು ತಿಳಿಸಿದಾಗ ನಾನು ಸ್ವತಃ ಜೆಸಿಬಿ ಯಂತ್ರವನ್ನು ಕೇಳಿಸುತ್ತೇನೆ ಈ ಮೂಲಕ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು. ಮುಂದಿನ ದಿನಗಳಲ್ಲಿ ಅನುದಾನ ತಂದು ಉತ್ತಮ ರಸ್ತೆಯನ್ನಾಗಿ ಮಾಡಲು ಶ್ರಮಿಸುತ್ತೇನೆ. ಎಲ್ಲರೂ ಸಹಕಾರ ನೀಡಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಬೆಳಕವಾಡಿ ಮಲ್ಲಪ್ಪ ಸ್ವಾಮಿಗಳು. ದೊಡ್ಡಪುರ ಮಹದೇವ ಸ್ವಾಮಿಗಳು, ಸಿದ್ದ ಶಿವಯೋಗಿ ಸ್ವಾಮಿಗಳು, ಮಣಗಳ್ಳಿ ಗ್ರಾಮದ ಗ್ರಾಮ ಪಂ. ಸದಸ್ಯ ಸಿದ್ದರಾಜು, ಪ್ರಜಾ ವಿಮೋಚನಾ ಚಳುವಳಿ ಸಂಘದ ಅಧ್ಯಕ್ಷ ಮಹಾಲಿಂಗ, ಯಜಮಾನರು ಪುಟ್ಟಲಿಂಗ, ಮಹದೇವಯ್ಯ, ಚೆನ್ನಯ್ಯ, ಮಹದೇವಯ್ಯ, ಶಿವಲಿಂಗಯ್ಯ, ಗೌಡ್ರು ತಮ್ಮಯ್ಯ, ಶಿವಪ್ಪ, ನಿಂಗರಾಜು, ಅಮೃತ್ ಸ್ವಾಮಿ, ಪ್ರಕಾಶ, ಲೋಕೇಶ, ವೆಂಕಟರಾಜು, ಸಂತುಯೋಗಿ, ಮಲ್ಲಣ್ಣ, ಶಿವಣ್ಣ ಕೃಷ್ಣಕುಮಾರ್, ಕಾಳಪ್ಪ, ಮಹದೇವ ಹಾಗೂ ಇನ್ನಿತರರು ಇದ್ದರು.

# ಇಂಡಿಯಾ ಬುಕ್ ಆಫ್ ರೆಕಾರ್ಡ್ ಕಿರೀಟದ ಗರಿಮೆ

## ಮಾಜಿ ಸಚಿವ ಚೌಡರೆಡ್ಡಿರವರ ಜನ್ಮದಿನದ ಅಂಗವಾಗಿ ಬೃಹತ್ ರಕ್ತದಾನ ಶಿಬಿರ





**ವರದಿ: ಮುಬಷೀರ್ ಅಹಮದ್**

**ಚಿಕ್ಕಬಳ್ಳಾಪುರ:** ಮಾಜಿ ಗೃಹಸಚಿವ ಎ.ಚೌಡರೆಡ್ಡಿ ಅವರ 88ನೇ ವರ್ಷದ ಜನ್ಮದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರವು ಅತ್ಯಂತ ಯಶಸ್ವಿಯಾಗಿ ಮುಗಿದಿದ್ದು,ಒಂದೇ ದಿನದಲ್ಲಿ ಒಂದೇ ಸ್ಥಳದಲ್ಲಿ 3200ಕ್ಕೂ ಹೆಚ್ಚು ಯೂನಿಟ್ ರಕ್ತಸಂಗ್ರಹದ ದಾಖಲೆಯೊಂದಿಗೆ ಈವರೆಗೆ ಇದ್ದ ಇಂಡಿಯಾ ಬುಕ್ ಆಫ್ ರೆಕಾರ್ಡ್ಲಲ್ಲಿದ್ದ ದಾಖಲೆಯನ್ನು ಮುರಿದು ಚಿಂತಾಮಣಿಗೆ ಅಗ್ರಸ್ಥಾನ ದೊರೆಯುವಂತೆ ಮಾಡಿದೆ.

ಚಿಂತಾಮಣಿ ನಗರದ ಕಿಶೋರ್ ವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಬೆಳಿಗ್ಗೆ 8 ರಿಂದ ಪ್ರಾರಂಭವಾದ ರಕ್ತದಾನ ಶಿಬಿರ ಸಂಜೆ 6ರವರೆಗೆ ಮುಂದುವರೆದಿತ್ತು. 7200 ಮಂದಿ ರಕ್ತದಾನ ಮಾಡಲು ನೋಂದಣಿ ಮಾಡಿಕೊಂಡಿದ್ದು, ಆ ಪೈಕಿ 3200 ಮಂದಿ ಸ್ವಯಂ ಪ್ರೇರಣೆಯಿಂದ ಬಂದು ರಕ್ತದಾನ ಮಾಡಿರುವುದು ಕರ್ನಾಟದ ಮಟ್ಟಿಗೆ ದಾಖಲೆಯೇ ಸರಿ.

ಕರ್ನಾಟಕ ರಾಜ್ಯದಲ್ಲೇ ಇದೇ ಪ್ರಥಮ ಬಾರಿಗೆ ಇಷ್ಟು ದೊಡ್ಡ ಮಟ್ಟದಲಿ ರಕ್ತದಾನ ಶಿಬಿರ ಆಯೋಜಿಸಿ ಯಶಸ್ವಿಗೊಳಿಸಿರುವುದು, ಆ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ ನಲ್ಲಿ ಉನ್ನತ ಸ್ಥಾನ ಪಡೆದಿರುವ ಚಿಂತಾಮಣಿಯ ಚೌಡರೆಡ್ಡಿ ಅಭಿಮಾನಿ ಬಳಗ ಸಾವಿರಾರು ಜನರ ಜೀವ ಉಳಿಸುವಂತ ಸಾರ್ಥಕ ಕೆಲಸವನ್ನು ಮಾಡಿರುವುದು ಹೆಮ್ಮೆಯ ವಿಚಾರವಾಗಿದೆ.

ಮಾಜಿ ಸಚಿವ ಚೌಡರೆಡ್ಡಿ ಅಭಿಮಾನಿ ಬಳಗದ ವತಿಯಿಂದ ಚಿಂತಾಮಣಿ ನಗರದ ಕಿಶೋರ್ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಮೆಗಾ ಬ್ಲಡ್ ಡೋನೇಶನ್ ಕ್ಯಾಂಪ್‌ನಲ್ಲಿ 3200ಕ್ಕೂ ಅಧಿಕ ಯೂನಿಟ್ ರಕ್ತವನ್ನು ಸಂಗ್ರಹಿಸುವ ಮೂಲಕ ಚಿಂತಾಮಣಿಯ ಹೆಸರನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ ನಲ್ಲಿ ದಾಖಲಿಸುವಂತಹ ಮಹೋನ್ನತ ಕಾರ್ಯ ನಡೆದಿದೆ.

ಆಪಘಾತಗಳು ಆದಂತಹ ಸಮಯದಲ್ಲಿ ಸಕಾಲಕ್ಕೆ ರಕ್ತದೊರೆಯದೆ ಸಾವಾಗುವ ಸಂದರ್ಭಗಳು ಹೆಚ್ಚು ಇದನ್ನು ತಪ್ಪಿಸಲು ಇಂತಹ ರಕ್ತದಾನ ಶಿಬಿರಗಳು ಹೆಚ್ಚೆಚ್ಚು ನಡೆಯಬೇಕು.

ಚಿಂತಾಮಣಿಯಲ್ಲಿ ನಡೆದ ಕಾರ್ಯಕ್ರಮ ಎಲ್ಲರಿಗೂ ಮಾದರಿಯಾಗಲಿ ಎಂದು ಆಶಿಸಿದರು. ಮಾಜಿ ಸಚಿವ ಚೌಡರೆಡ್ಡಿರವರ ಪುತ್ರರಾದ ಡಾ.ಎಂ.ಸಿ.ಬಾಲಾಜಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ರವರ ನೇತೃತ್ವದಲ್ಲಿ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರಕ್ಕೆ ಬೆಳಗ್ಗೆ 8 ಗಂಟೆಯಿಂದಲೇ ರಕ್ತದಾನಿಗಳು ಸಾಗರೋಪಾದಿಯಲ್ಲಿ ಹರಿದು ಬಂದರು. ಎಲ್ಲರಿಗೂ ಕೂಡ ಅಚ್ಚುಕಟ್ಟಾಗಿ ನೀರು ನೆರಳು ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

ರಕ್ತದಾನ ಮಾಡಲು ಬಂದ ಮಂದಿ ಸರತಿ ಸಾಲಿನಲ್ಲಿನಿಂತು ನಾಮುಂದು, ತಾ ಮುಂದು ಎಂದು ರಕ್ತದಾನ ಮಾಡುವ ಮೂಲಕ ಈ ಹಿಂದೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಲಲ್ಲಿ ದಾಖಲಿಸಿದ್ದ ದಾಖಲೆಯನ್ನು ಮುರಿದು 3,200 ಕ್ಕೂ ಹೆಚ್ಚು ಯೂನಿಟ್ ರಕ್ತವನ್ನು ಸಂಗ್ರಹಿಸಲಾಗಿದೆ.ಸ್ವತಃ ಸಚಿವ ಡಾ.ಎಂ.ಸಿ.ಸುಧಾಕರ್, ಅವರ ಅಣ್ಣ ಡಾ.ಬಾಲಾಜಿ ಸಹ ರಕ್ತದಾನ ಮಾಡಿ ಗಮನ ಸೆಳೆದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿಲಾಗಿದ್ದ ಈ ರಕ್ತದಾನ ಶಿಬಿರದಲ್ಲಿ 8 ರಕ್ತ ನಿಧಿ ಕೇಂದ್ರಗಳ ಸಿಬ್ಬಂದಿ ಭಾಗವಹಿಸಿದ್ದರು. ಬೆಳಗ್ಗೆಯಿಂದಲೇ ಡಾ.ಎಂ.ಸಿ. ಸುಧಾಕರ್, ಡಾ.ಬಾಲಾಜಿ, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಜಿಲ್ಲಾ ರಕ್ಷಣಾಧಿಕಾರಿ ಕುಶಾಲ್ ಚೌಕ್ಸೆ,ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾಧ್ಯಕ್ಷ ಎಂ.ಜಯರಾಮ್,ಡಾ. ಕೋಡಿರಂಗಪ್ಪ, ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು.

ಹಲವಾರು ಸಂಘ–ಸಂಸ್ಥೆಗಳ ಮುಖಂಡರು ಸಾರ್ವಜನಿಕರು, ಇಂತಹ ಶಿಬಿರವನ್ನು ಆಯೋಜಿಸಿರುವ ಡಾ.ಸುಧಾಕರ್ ಮತ್ತು ಡಾ.ಬಾಲಾಜಿ ಅವರನ್ನು ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಸಚಿವ ಡಾ.ಎಂ.ಸಿ.ಸುಧಾಕ ತಂದೆ ತಾಯಿ ದೇವರಿಗೆ ಸಮ. ಅವರು ತಮ್ಮ ಮಕ್ಕಳಿಗಾಗಿ ಏನೆಲ್ಲಾ ತ್ಯಾಗ ಮಾಡಿದ್ದಾರೆ ಎಂಬುದನ್ನು ಸ್ಮರಿಸಿದರೆ ಸಾಕು ಮಕ್ಕಳ ಪಾಲಿಗೆ ದೇವರಾಗುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ರಕ್ತದ ಕೊರತೆಯಿರುವ ಬಗ್ಗೆ ಅಧ್ಯಕ್ಷ ಜಯರಾಮ್ ಅವರಿಂದ ಮಾಹಿತಿ ಪಡೆದೆ. ಅವತ್ತ ನಿರ್ಧಾರ ಮಾಡಿದಂತೆ ನಮ್ಮ ತಂದೆಯವರ 88ನೇ ಜನ್ಮದಿನಾಚರಣೆಗೆ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಕ್ಷೇತ್ರದ ಜನತೆಯ ಬೆಂಬಲ, ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಘಟಕದ ಪದಾಧಿಕಾ ರಿಗಳು ಮುಖಂಡರ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ನಡೆದಿದೆ.

# ಕುಂಭಮೇಳದಲ್ಲಿ ಕುಟುಂಬ ಸಮೇತ ಪುಣ್ಯಸ್ನಾನ

**ಶಿಡ್ಲಘಟ್ಟ:** ಬಿಜೆಪಿ ಮುಖಂಡರಾದ ಸೀಕಲ್ ರಾಮಚಂದ್ರಗೌಡ ಬುಧವಾರ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಕುಟುಂಬ ಸಮೇತ ಭಾಗವಹಿಸಿ ಪುಣ್ಯಸ್ನಾನ ಮಾಡಿದ್ದಾರೆ.

ಜಗತ್ತಿನ ಅತ್ಯಂತ ದೊಡ್ಡಧಾರ್ಮಿಕ ಉತ್ಸವವಾದ ಪ್ರಯಾಗರಾಜ್ ಮಹಾ ಕುಂಭಮೇಳದಲ್ಲಿ ಕುಟುಂಬ ಸಮೇತ ಪಾಲ್ಗೊಂಡು ಗಂಗಾ,ಯಮುನಾ, ಸರಸ್ವತಿ ನದಿಗಳ ಪವಿತ್ರ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನವನ್ನು ಮಾಡಿದ ಕ್ಷಣಗಳು ನನ್ನನ್ನು ಪುಳಕಿತನನ್ನಾಗಿ ಮಾಡಿವೆ ಎಂದರು.

ಕುಂಭ ಮೇಳವನ್ನು ಸನಾತನ ಹಿಂದೂ ಸಂಸ್ಕೃತಿ ಜಗತ್ತಿನ



ಶ್ರೇಷ್ಠ ಪರಂಪರೆ, 144 ವರ್ಷಗಳಿಗೆ ಒಮ್ಮೆ ನಡೆಯುವ ಈ ಮಹಾ ಕುಂಭಮೇಳದಲ್ಲಿ ಪಾಲ್ಗೊಳ್ಳುವುದು ಒಂದು ಅಲೌಕಿಕ ಅಧ್ಯಾತ್ಮಿಕ ಅನುಭವವಾಗಿದ್ದು, ಈವರೆಗೂ 40 ಕೋಟಿಗೂ ಅಧಿಕ ಜನ ಆಸ್ತಿಕರು ಪವಿತ್ರ ಸ್ನಾನ ಮಾಡಿರುತ್ತಾರೆ.

ಈ ಮಹತ್ವದ ಕಾರ್ಯಕ್ರಮವನ್ನು, ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿರುವ ಉತ್ತರ ಪ್ರದೇಶ ಮುಖ್ಯಮಂತ್ರಿಗಳಾದ ಎಂ.ಯೋಗಿ ಆದಿತ್ಯನಾಥ್ ಹಾಗೂ ಅವರ ನೇತೃತ್ವದ ರಾಜ್ಯ ಸರ್ಕಾರದ ಆಡಳಿತದ ಕಾರ್ಯ ವೈಖರಿ ನಿಜಕ್ಕೂ ಪ್ರಶಂಸನೀಯ ಎಂದಿದ್ದಾರೆ.

# ಹೊಸ ಕಿಮೋಥೆರಪಿ ಡೇ ಕೇರ್ ಸೆಂಟರ್ ಉದ್ಘಾಟನೆ

**ಕೆ.ಆರ್.ಪುರ:** ಹೊಸ ಕಿಮೋಥೆರಪಿ ಡೇ ಕೇರ್ ಸೆಂಟರ್ ಮೂಲಕ ರೋಗಿಗಳಿಗೆ ಅತ್ಯುತ್ತಮ ಕ್ಯಾನ್ಸರ್ ಚಿಕಿತ್ಸೆ ಒದಗಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ಆಸ್ಪತ್ರೆಯ ಮುಖ್ಯಸ್ಥ ಮತ್ತು ಅಸೋಸಿಯೇಟ್ ಉಪಾಧ್ಯಕ್ಷ ಕೃಷ್ಣಮೂರ್ತಿ ಜಿ ತಿಳಿಸಿದರು.

ಮಹದೇವಪುರ ಕ್ಷೇತ್ರದ ವೈಟ್‌ಫೀಲ್ಡ್‌ನ ಮೆಡಿಕವರ್ ಆಸ್ಪತ್ರೆಯಲ್ಲಿ ಇಂದು ಕಿಮೋಥೆರಪಿ ಡೇ ಕೇರ್ ಸೆಂಟರ್ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯಕೀಯ ತಂತ್ರಜ್ಞಾನದಲ್ಲಿ ಆದ ಹೊಸ ಪ್ರಗತಿಗಳಿಂದ ಕ್ಯಾನ್ಸರ್ ಚಿಕಿತ್ಸೆಯ ಪರಿಣಾಮಕಾರಿಯಾಗಿದೆ. ಆರಂಭಿಕ ಹಂತದಲ್ಲಿ ಪತ್ತೆಯಾಗುವ ಬಹುತೇಕ ಕ್ಯಾನ್ಸರ್‌ಗಳನ್ನು ಪೂರ್ಣವಾಗಿ ಗುಣಪಡಿಸುವ ಸಾಧ್ಯತೆ ಇದೆ ಎಂದರು. ಹಿರಿಯ ಆನ್ಕೊಲೊಜಿಸ್ಟ್ ಡಾ. ಕಾಕೋಲಿ ಲಕ್ಕರ್ ಮಾತಾನಾಡಿ, ಇಂದು ಟಾರ್ಗೆಟೆಡ್ ಥೆರಪಿ ಮತ್ತು ಇಮ್ಯುನೋಥೆರಪಿ ತಂತ್ರಜ್ಞಾನದಿಂದ ಟರ್ಮಿನಲ್ ಕ್ಯಾನ್ಸರ್ ಪೀಡಿತರೂ ಹೆಚ್ಚು ವರ್ಷಗಳ ಕಾಲ ಬದುಕುವ ಸಾಧ್ಯತೆ ಹೆಚ್ಚಾಗಿದೆ ಎಂದು ನುಡಿದರು. ಈ ಸಂದರ್ಭದಲ್ಲಿ ಮೆಡಿಕವರ್ ಗ್ರೂಪ್‌ನ ಮುಖ್ಯ ಹಣಕಾಸು ಅಧಿಕಾರಿ ನೀರಾಜ್ ಜೈಸುವಾಲ್, ವೈದ್ಯಕೀಯ ಅಧೀಕ್ಷಕಿ ಡಾ. ಶೃತಿ ಕೊಯ್ಲಿ, ಮೆಡಿಕವರ್ ಆಸ್ಪತ್ರೆಯ ಸಿಬ್ಬಂದಿಗಳು ಕೇಕ್ ಕತ್ತರಿಸಿ ಹೊಸ ಪ್ರಯತ್ನವನ್ನು ಸಂಭ್ರಮಿಸಿದರು.

# ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ

**ದೇವನಹಳ್ಳಿ:** ತಾಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷರಾಗಿ ಆರ್.ಮುನೇಗೌಡ ಮತ್ತು ಉಪಾಧ್ಯಕ್ಷರಾಗಿ ಪಿ.ವೆಂಕಟೇಶ್ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಚೇತನ.ಆರ್ ಘೋಷಿಸಿದರು.

ಈ ವೇಳೆಯಲ್ಲಿ ನೂತನ ಅಧ್ಯಕ್ಷ ಆರ್ .ಮುನೇಗೌಡ ಮಾತನಾಡಿ ಪಕ್ಷದ ಹಿರಿಯ ಮುಖಂಡರು , ಕಾರ್ಯಕರ್ತರಿಗೂ, ಸಂಘದ ಎಲ್ಲಾ ಸದಸ್ಯರು ಮತ್ತು ನಿರ್ದೇಶಕರುಗಳಿಗೆ ಧನ್ಯವಾದಗಳನ್ನು ತಿಳಿಸಿ, ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಸಹಕಾರ ಸಂಸ್ಥೆಯ ಅಭಿವೃದ್ಧಿ ವಾಣಿಜ್ಯ ಉದ್ದೇಶಕ್ಕೆ ಮಾತ್ರ ಸೀಮಿತವಾಗದೇ ತಾಲೂಕಿನ ಸಾಮಾನ್ಯ ಜನರಿಗೂ ಅನುಕೂಲವಾಗುವಂತೆ ಅಭಿವೃದ್ಧಿ ಮಾಡಲಾಗುವುದು ಎಂದು ಹೇಳಿದರು.

ನೂತನ ಉಪಾಧ್ಯಕ್ಷ ಪಿ .ವೆಂಕಟೇಶ್ ಮಾತನಾಡಿ ಮೊದಲನೇ ಬಾರಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ತಾಲೂಕಿನ ಹಿರಿಯ ಮುಖಂಡರುಗಳಿಗೆ ಧನ್ಯವಾದಗಳು ತಿಳಿಸಿದರು ಹಾಗೂ ನೂತನವಾಗಿ ಆಯ್ಕೆಯಾದ ಎಲ್ಲಾ ನಿರ್ದೇಶಕರೊಂದಿಗೆ ಒಗ್ಗೂಡಿ ಸಹಕಾರ ಬ್ಯಾಂಕಿನ ಅಭಿವೃದ್ಧಿಗೆ ಒಮ್ಮತದಿಂದ



ಶ್ರಮಿಸಲಾಗುವುದು ಎಂದರು.

ನೂತನ ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷರಾದ ಆರ್.ಮುನೇಗೌಡ ಮತ್ತು ಉಪಾಧ್ಯಕ್ಷ ಪಿ. ವೆಂಕಟೇಶ್ ಅವರನ್ನು ದೇವನಹಳ್ಳಿ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರಾದ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ ಅಭಿನಂದಿಸಿ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ ,ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಿ .ಮುನೇಗೌಡ, ನಿರ್ದೇಶಕರುಗಳಾದ ಹನುಮಪ್ಪ.ಬಿ.ಕೆ , ಮುನಿರಾಜು , ಮುನೇಗೌಡ .ಎಸ್ , ಮುನಿರಾಜು. ಸಿ , ರಾಜಣ್ಣ .ಸಿ. ಎಸ್ ,ಮುನೇಗೌಡ .ಆರ್ , ಮುನಿರಾಜು.ವಿ , ಆರ್. ಆಶಾ ಮತ್ತು ಅನ್ನಪೂರ್ಣ ಎಸ್. ಬಿ ಬಸವರಾಜು.ಎಂ ಭೀಮರಾಜು.ಜಿ.ಎಸ್ , ಎಚ್ .ಎಮ್ ಮುನಿನಾರಾಯಣಪ್ಪ , ಹನುಮಾನ್ ಬಿ .ಆರ್ ,ಜೆಡಿಎಸ್ ಪಕ್ಷದ ಮುಖಂಡರಾದ ದೇವರಾಜ .ಎ, ಆರ್.ಮಂಜುನಾಥ್,ದೊಡ್ಡಸಣ್ಣೇ ಮುನಿರಾಜು,ಮೀನಾಕ್ಷಿ , ಚಿನ್ನಕೆಂಪನಹಳ್ಳಿ ಆನಂದ್ ಸಿ.ಎ, ಬಿ.ಕೆ ರಾಧಾ ,ಹನುಮಪ್ಪ , ಹೊಸಳ್ಳಿ ಟಿ .ರವಿ, ಸೇರಿದಂತೆ ತಾಲೂಕಿನ ಮುಖಂಡರು ,ಸದಸ್ಯರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

# ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಕಲಿಕಾ ಹಬ್ಬ ಉತ್ತಮ

**ಮುಳಬಾಗಿಲು:** ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಕಲಿಕಾ ಹಬ್ಬ ಉತ್ತಮ ಕಾರ್ಯಕ್ರಮವಾಗಿದೆ ಎಂದು ಬಲ್ಲ ಗ್ರಾಮ ಅಧ್ಯಕ್ಷ ಆನಂದ್ ತಿಳಿಸಿದರು

ತಾಲ್ಲೂಕಿನ ಬಲ್ಲಾ ಪಂಚಾಯಿತಿಯ ಶೆಟ್ಟಿಬನಕನಹಳ್ಳಿ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ, ಈ ಪಂಚಾಯಿತಿಯಲ್ಲಿ 5 ಲಕ್ಷದಲ್ಲಿ ಶಾಲೆಗಳ ಮೂಲಭೂತ ಅಭಿವೃದ್ಧಿಗಾಗಿ ಮತ್ತು ದುರಸ್ತಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಕಲಿಕೆಯ ಜೊತೆಗೆ ಮೌಲ್ಯ ದಾರಿತ ಶಿಕ್ಷಣ ನೀಡುವುದು ಎಲ್ಲಾ ಎಲ್ಲಾ ಶಿಕ್ಷಕರ ಹೊಣೆಯಾಗಿದೆ ಹಾಗೂ ಸರ್ಕಾರಿ ಶಾಲೆಗಳಲ್ಲಿ ಇತ್ತೀಚಿಗೆ ದಾಖಲಾತಿ ಕಡಿಮೆಯಾಗುತ್ತಿದೆ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಆಯೋಜನೆ ಮಾಡಿರುವುದು ಸಂತೋಷವಾಗಿದೆ ಎಂದರು.

ಎಸ್ ಜದುಮನಹಳ್ಳಿ ಮುಖ್ಯ ಶಿಕ್ಷಕ ವಿ ಎಸ್ ಕೋದಂಡರಾಮಯ್ಯ ಮಾತನಾಡಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು



ಉತ್ತಮಪಡಿಸಲು ಮತ್ತು ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಮುಖ್ಯ ವಾಹಿನಿಗೆ ತರುವಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಎಂದರು.

ಮುಖ್ಯ ಶಿಕ್ಷಕ ಎನ್.ಜಿ. ರಾಮಚಂದ್ರ ಮಾತನಾಡಿ ಈ ಕಲಿಕಾ ಹಬ್ಬವು ಕಲಿಕೆಗೆ ಪೂರಕವಾಗಿದೆ ಇಲ್ಲಿ ವಿದ್ಯಾರ್ಥಿಗಳಿಗೆ ಗಟ್ಟಿ ಓದಿ, ಮೋಜಿನ ಗಣಿತ, ಕಥೆ ಹೇಳುವುದು ಕಥೆ ಕಟ್ಟುವುದು ರಸಪ್ರಶ್ನೆ ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ವಿದ್ಯಾರ್ಥಿಗಳ ಸಕ್ರಿಯವಾಗಿ ಭಾಗವಹಿಸಿ ಬಹುಮಾನಗಳನ್ನು ಪಡೆಯುವಂತೆ ತಿಳಿಸಿದರು.

ಸ್ಪರ್ಧೆಗಳಲ್ಲಿ ಭಾಗವಹಿಸಿ, ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ನೀಡಲಾಯಿತು. ಗ್ರಾ ಪಂ ಸದಸ್ಯ ವಿಶ್ವನಾಥ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿ ರಾಮಮೂರ್ತಿ ,ಸಿಆರ್‌ಪಿ ಲಕ್ಷ್ಮಣ್ ಸಿಂಗ್, ಮುಖ್ಯ ಶಿಕ್ಷಕ ವಿ.ಎಸ್.ರಾಜಣ್ಣ, ಶಿಕ್ಷಕರಾದ ಪ್ರಭಾವತಿ ಬಾಲನಾರಾಯಣಸ್ವಾಮಿ, ಎಸ್ ಡಿ ಎಮ್ ಸಿ ಅಧ್ಯಕ್ಷರು ಸದಸ್ಯರುಗಳು ಪೋಷಕರು ಮತ್ತು ಮಕ್ಕಳು ಇದ್ದರು



# ವಾಚ್ ಕೊಡುವುದಾಗಿ ಕರೆದು ಬಾಗಿಲು ಹಾಕಿದ...

ಗೊಂಬೆ ಎಂದು ಖ್ಯಾತಿ ಪಡೆದ ಲಕ್ಷ್ಮೀ ಬಾರಮ್ಮ ಖ್ಯಾತಿಯ ನಟಿ ನೇಹಾ ಗೌಡ ಅವರು ಇದೀಗ ಮಗಳ ಆರೈಕೆಯಲ್ಲಿ ನಿರತರಾಗಿದ್ದಾರೆ. 2018ರಲ್ಲಿ ಚಂದನ್ ಗೌಡ ಅವರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದ ನಟಿ, ಮದುವೆಯಾದ 6 ವರ್ಷಗಳ ಬಳಿಕ ಹೆಣ್ಣುಮಗುವಿನ ಅಮ್ಮ ಆಗಿದ್ದಾರೆ.

ಕಳೆದ ಅಕ್ಟೋಬರ್ 29ರಂದು ಮಗುವಿಗೆ ಜನ್ಮ ನೀಡಿರುವ ನಟಿ, ನಟನೆಯಿಂದ ದೂರ ಉಳಿದು ತಮ್ಮ ಸಮಯವನ್ನು ಮಗುವಿಗಾಗಿ, ಫ್ಯಾಮಿಲಿಗಾಗಿ ಮೀಸಲಿಟ್ಟಿದ್ದಾರೆ. ಇದೀಗ ನಟಿ ತಮ್ಮ ಜೀವನದ ಹಲವಾರು ವಿಷಯಗಳ ಬಗ್ಗೆ ರಾಜೇಶ್ ಗೌಡ ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ಮಾತನಾಡಿದ್ದಾರೆ.

ಹಲವು ಹೆಣ್ಣುಮಕ್ಕಳು ಬಾಲ್ಯದಲ್ಲಿ ಎದುರಿಸುವ ಲೈಂಗಿಕ ದೌರ್ಜನ್ಯಗಳ ಬಗ್ಗೆ ಮಾತನಾಡುತ್ತಲೇ ನಟಿ ನೇಹಾ ತಮ್ಮ ಬದುಕಿನ ಆ ಕರಾಳ ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ಇಂದಿಗೂ ಕೂಡ ಕಾಮುಕ ರಾಕ್ಷಸರಿಂದ ಎಷ್ಟೋ ಪುಟಾಣಿಗಳಿಗೆ ಇದೇ ರೀತಿ ಆಗಿದ್ದರೂ, ಹಲವು ಬಾರಿ ಆ ಕಂದಮ್ಮಗಳಿಗೆ ತಮ್ಮ ಮೇಲೆ ಏನು ಆಗಿದೆ ಎನ್ನುವುದೇ ತಿಳಿಯುತ್ತಿಲ್ಲ. ಮತ್ತೆ ಕೆಲವು ಮಕ್ಕಳು ಹೆದರಿ ಮನೆಯಲ್ಲಿ ಬಾಯಿ ಬಿಡುವುದೇ ಇಲ್ಲ, ಇನ್ನು ಕೆಲವೊಮ್ಮೆ ತಿಳಿದರೂ ಆಕೆಯ ಭವಿಷ್ಯದ ದೃಷ್ಟಿಯಿಂದ ಅದನ್ನು ಗುಟ್ಟು ಮಾಡಲಾಗುತ್ತದೆ, ಅಪ್ಪ-ಅಮ್ಮಂದಿರೇ ಅದನ್ನು ಹೊರಕ್ಕೆ ಹೇಳದೇ ಅಲ್ಲಿಗೇ ವಿಷಯ ಮುಚ್ಚಿಹಾಕಲು ನೋಡುತ್ತಾರೆ. ಇದೇ ಕಾರಣಕ್ಕೆ ಇಂಥ ರಾಕ್ಷಸರು ನಿರಾತಂಕವಾಗಿ ಮತ್ತಷ್ಟು ಮಕ್ಕಳ ಜೀವಕ್ಕೆ ಅಪಾಯ ತಂದೊಡ್ಡುತ್ತಿದ್ದಾರೆ. ನಮ್ಮ ಕಾನೂನು ವ್ಯವಸ್ಥೆಯಲ್ಲಿಯೂ ಕೂಡ ಇಂಥ ದುರುಳರಿಗೆ ಸರಿಯಾದ ಶಿಕ್ಷೆ ಆಗದೇ ಇರುವುದು ಕೂಡ ವಿಷಾದದ ಸಂಗತಿ.

ತಮ್ಮ ಜೀವನದಲ್ಲಿ ಆದ ಇಂಥ ಘಟನೆಯ ಬಗ್ಗೆ ನಟಿ ನೇಹಾ ಅವರು ಮಾತನಾಡಿದ್ದಾರೆ. ಈ ಬಗ್ಗೆ ಹಿಂದೆ ಎಂದಿಗೂ ಮಾತನಾಡಿಲ್ಲ ಎಂದಿರುವ ನೇಹಾ ಗೌಡ, ಹೆಣ್ಣು ಮಕ್ಕಳ ಮೇಲೆ ನಡೆಯುವ ಈ ಭಯಾನಕ ಘಟನೆಗಳ ಬಗ್ಗೆ ನೊಂದು ನುಡಿದಿದ್ದಾರೆ. ನಾನಾಗ ನಾಲ್ಕನೆಯ ಕ್ಲಾಸ್‌ನಲ್ಲಿದೆ. ಅಂದು ನನ್ನ ಅಮ್ಮ ಮನೆಯಲ್ಲಿ ಇರಲಿಲ್ಲ. ನನ್ನನ್ನು ಮಲಗಿಸಿ ಹೋಗಿದ್ದರು. ಅಜ್ಜಿ ಇದ್ದರು. ನನಗೆ ಎಚ್ಚರವಾದಾಗ ಅಮ್ಮ ಇರಲಿಲ್ಲ. ಅವಳನ್ನು ಹುಡುಕುತ್ತಾ ಹೊರಗೆ ಹೋಗಿಬಿಟ್ಟೆ. ಪಕ್ಕದ ಬೀದಿಯಲ್ಲಿ ಒಬ್ಬ ನಿನ್ನಪ್ಪ ನನಗೆ ಗೊತ್ತು, ವಾಚ್ ಕೊಡುತ್ತೇನೆ ಎಂದ. ನಾನು ಮೊದಲಿಗೆ ನಂಬಲಿಲ್ಲ, ನನ್ನ ಅಪ್ಪನ ಹೆಸರೇನು ಕೇಳಿದೆ. ಆತ ಏನೋ ತಡಬಡಿಸಿದ, ಆದರೆ ಆ ಸಮಯದಲ್ಲಿ ರಾಮಕೃಷ್ಣ ಗೊತ್ತಾ ಎಂದುಬಿಟ್ಟೆ. ಆತ ಹೌದೌದು ಅಂದ. ಹಾಗಿದ್ರೆ ಆತನಿಗೆ ನನ್ನ ಅಪ್ಪ ಗೊತ್ತು ಎಂದುಕೊಂಡುಬಿಟ್ಟು ಅವನ ಹಿಂದೆ ಹೋದೆ.

ಎಲ್ಲೆಲ್ಲಿಯೋ ಕರೆದುಕೊಂಡು ಹೋದ ಆತ ವಾಚ್ ಅಂಗಡಿಯೊಂದಕ್ಕೆ ಹೋಗಿ ಅಲ್ಲಿ ಬಾಗಿಲು ಹಾಕಿದ. ತೀರಾ ಕೆಟ್ಟದಾಗಿ ನಡೆದುಕೊಳ್ಳಲು ಶುರು ಮಾಡಿದ. ಆ ಸಮಯದಲ್ಲಿ ನನಗೆ ಏನಾಗುತ್ತಿದೆ ಎನ್ನುವುದೇ ತಿಳಿಯದೇ ಜೋರಾಗಿ ಅಳಲು ಶುರು ಮಾಡಿದೆ. ಚಾಕು ತೋರಿಸಿ ಅಳದಂತೆ ಹೇಳಿದ. ಚೆನ್ನಾಗಿ ಹೊಡೆದ. ಆಮೇಲೆ ಆತನಿಂದ ಹೇಗೋ ತಪ್ಪಿಸಿಕೊಂಡು ಬಂದೆ. ಎಲ್ಲಿಗೆ ಓಡಿ ಬಂದೆನೋ ಗೊತ್ತಿಲ್ಲ. ಅಷ್ಟರಲ್ಲಿಯೇ ನಮ್ಮ ಮನೆಯಲ್ಲಿ ಎಲ್ಲರೂ ನನ್ನನ್ನು ಹುಡುಕುತ್ತಿದ್ದರು. ನಾನು ಅಳುವುದನ್ನು ನೋಡಿ ಅಲ್ಲಿದ್ದವರು ಅಪ್ಪನ ಹೆಸರು ಕೇಳಿದರು. ಆದರೆ ಶಾಕ್‌ನಲ್ಲಿದ್ದ ನನಗೆ ಯಾರ ಹೆಸರೂ ನೆನಪಿಗೆ ಬರುತ್ತಿರಲಿಲ್ಲ. ಅಂತೂ ಕೊನೆಗೆ ನನ್ನ ಸಂಬಂಧಿಕರೊಬ್ಬರು ನನ್ನನ್ನು ನೋಡಿ ಮನೆಗೆ ಕರೆದುಕೊಂಡು ಹೋದರು ಎಂದು ಆ ಘಟನೆ ಹೇಳಿದ್ದಾರೆ. ಮನೆಯಲ್ಲಿ ಆತ ಹೊಡೆದದ್ದು ಹೇಳಿದೆ ಬಿಟ್ಟರೆ ಬೇರೇನೂ ಹೇಳಿರಲಿಲ್ಲ. ಏಕೆಂದರೆ ನನಗೆ ಏನಾಗಿದೆ ಎಂದೇ ಗೊತ್ತಿರಲಿಲ್ಲ. ಕೆಲವು ವರ್ಷ ಬಳಿಕ ಟೀಚರ್ ಒಬ್ಬರು ಗುಡ್‌ಟಚ್, ಬ್ಯಾಡ್‌ಟಚ್ ಬಗ್ಗೆ ಹೇಳುವಾಗಲೇ ನನಗೆ ಗೊತ್ತಾಗಿದ್ದು, ನನಗೂ ಇದೇ ರೀತಿ ಆಗಿತ್ತು ಎಂದು. ಅಲ್ಲಿಯೇ ಜೋರಾಗಿ ಅತ್ತುಬಿಟ್ಟೆ. ಆಗ ಆ ಟೀಚರ್‌ಗೆ ಅನುಮಾನ ಬಂದು ನನ್ನನ್ನು ಸಮಾಧಾನಪಡಿಸಿ, ಏನೂ ನಡೆದಿಲ್ಲ ಎಂದು, ನನ್ನ ತಲೆಯಲ್ಲಿದ್ದ ಭಯವನ್ನು ಹೊರಕ್ಕೆ ಹಾಕಿದರು. ಆ ಬಳಿಕ ನನ್ನ ಅಪ್ಪ-ಅಮ್ಮನಿಗೂ ವಿಷಯ ಗೊತ್ತಾಯಿತು. ನನ್ನಪ್ಪ ತುಂಬಾ ಚೆನ್ನಾಗಿ ಸಿಚುವೇಷನ್ ಹ್ಯಾಂಡಲ್ ಮಾಡಿ ನನಗೆ ಧೈರ್ಯ ತುಂಬಿದರು. ಆ ಕರಾಳ ದಿನ ನೆನಪಿಸಿಕೊಂಡರೆ ಇಂದಿಗೂ ಭಯವಾಗುತ್ತದೆ ಎಂದಿದ್ದಾರೆ.



# ಸನ್ನಿ ಪಾಠ ಯಾಕೆ ಕಲೀಲಿಲ್ಲ..?

ವಯಸ್ಕರ ಸಿನಿಮಾದ ಖ್ಯಾತ ನಟಿ ಸನ್ನಿ ಲಿಯೋನ್ ಹೆಸರು ಈಗ ಯೂಟ್ಯೂಬರ್ ರಣವೀರ್ ಅಲಹಾಬಾದಿಯಾ ಜೊತೆ ತಳುಕು ಹಾಕಿಕೊಂಡಿದೆ. ಕೆಲವರು ರಣವೀರ್ ಅವರನ್ನು ಟ್ರೋಲ್ ಮಾಡುತ್ತಿದ್ದರೆ ಕೆಲವರು 'ಸನ್ನಿ ಲಿಯೋನ್ ಅವರಿಂದ ನೀನು ಕಲಿ..' ಎಂದು ಕಾಮೆಂಟ್ ಹಾಕಿದ್ದಾರೆ. ರಣವೀರ್ ಮಾಡಿಕೊಂಡ ಯಡವಟ್ಟು ಈಗ ಇಡೀ ವಿಶ್ವಕ್ಕೇ ಗೊತ್ತಾಗಿದೆ. ಕಾಮಿಡಿ ಮಾಡಲು ಹೋಗಿ ಬಾಯಿಗೆ ಬಂದಿದ್ದು ಹೇಳಿ ಎಲ್ಲರಿಂದ ಛೀ ಮಾರಿ ಹಾಕಿಸಿಕೊಂಡು, ಈಗ ಮುಖಮರೆಸಿಕೊಳ್ಳುವ ಸ್ಥಿತಿ ತಲುಪಿದ್ದಾರೆ. 'ಬೇಕಿತ್ತಾ ಇದೆಲ್ಲಾ?' ಅಂತ ಹಲವರು ಹೇಳುವಂತಾಗಿದೆ. ಖ್ಯಾತ ಯೂಟ್ಯೂಬರ್ ಆಗಿದ್ದ ರಣವೀರ್ ಅಲಹಾಬಾದಿಯಾ, ದೇಶದ ಗಣ್ಯಾತಿಗಣ್ಯರನ್ನು ಸಂದರ್ಶನ ಮಾಡಿದ್ದಾರೆ. ಅವರಿಂದ ಭೇಷ್ ಎನ್ನಿಸಿಕೊಂಡಿದ್ದರು. ಆದರೆ, ಯಡವಟ್ಟು ಹೇಳಿಕೆ ನೀಡಿ ಈಗ ಕುಖ್ಯಾತಿ ಪಡೆದಿದ್ದಾರೆ. ರಣವೀರ್ ಸಿಂಗ್, ವಿರಾಟ್ ಕೊಹ್ಲಿ ಸೇರಿದಂತೆ ಹಲವರು ಅವರನ್ನೀಗ ಅನ್‌ಫಾಲೋ ಮಾಡಿದ್ದಾರೆ. ದಿನದಿನಕ್ಕೂ ಅನ್‌ಫಾಲೋ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಪ್ರತಿಭೆ ಹಾಗೂ ಒಮ್ಮೆಗೇ ಕಟ್ಟಿಕೊಂಡಿದ್ದ ಕೋಟೆ ಕುಸಿದಿದೆ. ಈಗ ಅಲಹಾಬಾದಿಯಾ ಅಂದ್ರೆ ಜನರು ನಗುವಂತಾಗಿದೆ. ಅದಿರಲಿ, ಕೆನಡಾದಲ್ಲಿ ಅಡಲ್ಟ್ ಫಿಲಂ ಇಂಡಸ್ಟ್ರಿಯಲ್ಲಿ ಕೆಲಸ ಮಾಡುತ್ತಿದ್ದ ಸನ್ನಿ ಲಿಯೋನ್ ಭಾರತಕ್ಕೆ ಬಂದು 'ಬಿಗ್ ಬಾಸ್' ಮೂಲಕ ಸಿನಿಮಾಗೂ ಕಾಲಿಟ್ಟರು. ಮಾಡೆಲಿಂಗ್ ಹಾಗೂ ಸಿನಿಮಾರಂಗದಲ್ಲಿ ಮಿಂಚುತ್ತಿರುವ ನಟಿ ಸನ್ನಿ ಲಿಯೋನ್ ಅವರನ್ನು ಒಮ್ಮೆ ಸಂದರ್ಶನ ಮಾಡಿದ್ದರು ಈ ರಣವೀರ್ ಸಿಂಗ್ ಅಲಹಾಬಾದಿಯಾ. ಆಗ ಸನ್ನಿ ಲಿಯೋನ್ ಆ ಒಂದು ಮಾತನ್ನು ಈ ರಣವೀರ್ ಭವಿಷ್ಯ ತಿಳಿದವರಂತೆ ಹೇಳಿಬಿಟ್ಟಿದ್ದರು. ಅದೀಗ ವೈರಲ್ ಆಗ್ತಿದೆ. ರಣವೀರ್ 'ನಿಮ್ಮ ಜೀವನದ ಬೆಸ್ಟ್ ಪಾರ್ಟ್ ಮತ್ತು ಬ್ಯಾಡ್ ಪಾರ್ಟ್ ಯಾವುದು ಎಂದು ಕೇಳಿದ್ದಕ್ಕೆ ಸನ್ನಿ 'ಬೆಸ್ಟ್ ಪಾರ್ಟ್ ಅಂದ್ರೆ ಅಲ್ಲಿನ ದೊಡ್ಡ ದೊಡ್ಡ ಬ್ರಾಂಡ್‌ಗಳ ಜೊತೆ, ಬೆಸ್ಟ್ ಜನಗಳ ಜೊತೆ ಕೆಲಸ ಮಾಡಿದ್ದು. ಅಲ್ಲಿನ ಉದ್ಯಮ ಮತ್ತು ಸ್ಟ್ರೀಟ್ ಸ್ಮಾರ್ಟ್‌ನೆಸ್ ನನಗೆ ನೆರವಾಯಿತು. ಯಾರ ಜೊತೆ ಕೆಲಸ ಮಾಡಬೇಕು, ಯಾರ ಜೊತೆ ಮಾಡಬಾರದು ಅಂತ ನಿರ್ಧರಿಸೋಕೆ ಕೆಲವು ಸಲ ನನ್ನ ಒಳನೋಟ, ಕೆಲವು ಸಲ ಹೊರಗಿನ ವಾಸ್ತವಾಂಶಗಳು ನೆರವಾಗುತ್ತಿದ್ದವು. ಇನ್ನು ಬ್ಯಾಡ್ ಪಾರ್ಟ್ ಅಂದರೆ ನಾವು ಎಷ್ಟೇ ಕಷ್ಟಪಟ್ಟು ಕೆಲಸ ಮಾಡಿದರೂ ನಮ್ಮನ್ನು ಇನ್ಯಾರೋ ಬೈಪಾಸ್ ಮಾಡಿಕೊಂಡು ಹೋಗಿಬಿಡುವುದು. ಇತರರಿಗಿಂತ ಎರಡು ಪಟ್ಟು ಮೂರು ಪಟ್ಟು ಶ್ರಮ ಹಾಕಬೇಕಾಗಿ ಬರುತ್ತಿತ್ತು ಎಂದು ಸನ್ನಿ ಹೇಳಿದ್ದಾಳೆ. ಆದರೆ, ಇದೇ ಸಮಯದಲ್ಲಿ ಈ ರಣವೀರ್‌ಗೆ ಅಪ್ಲೈ ಆಗುವ ಒಂದು ಮಾತನ್ನೂ ಸನ್ನಿ ಅಂದೇ ಹೇಳಿದ್ದಾರೆ. ಹೇಳಿದ್ದಾರೆ. ನನ್ನ ಲೈಫಲ್ಲಿ ಯಾವುದೂ ಕೂಡ ಸಡನ್ನಾಗಿ ಸಿಗಲಿಲ್ಲ. ಎಲ್ಲವೂ ನನಗೆ ಹಂತ ಹಂತವಾಗಿ, ಸ್ಟೆಪ್ ಬೈ ಸ್ಟೆಪ್ ಬೆಳವಣಿಗೆ ದೊರೆಯಿತು. ಹೀಗಾಗಿ ನನ್ನ ಯಶಸ್ಸು ದೃಢವಾಗಿತ್ತು. ಆದರೆ ಕೆಲವರು ಫಾಸ್ಟ್ ಆಗಿ ಮೇಲೆ ಹೋಗ್ತಾರೆ. ಆದ್ರೆ ಟೈಮ್ ಬದಲಾಗಿ ಬಿದ್ದಾಗ ಅವರಿಗೆ ಬೀಳುವ ಏಟು ತುಂಬಾ ಬಲವಾಗಿರುತ್ತೆ. ಯೂಟ್ಯೂಬರ್‌ಗಳು, ಇನ್‌ಫ್ಲುಯೆನ್ಸರ್‌ಗಳು ಎಲ್ಲರಲ್ಲೂ ಇದನ್ನು ಕಾಣ್ತೀವಿ. ಬೇರೆಯವರ ವಿಡಿಯೋಗಳಿಗೆ ಮಿಲಿಯಗಟ್ಟಲೆ ವ್ಯೂಸ್ ಸಿಗ್ತಿವೆ, ಆದ್ರೆ ನಂಗೆ ಯಾಕೆ ಸಿಗ್ತಿಲ್ಲ ಅಂತ ಕೊರಗೋದ್ರಲ್ಲಿ ಅರ್ಥವಿಲ್ಲ. ಕೆಲಸದಲ್ಲಿ ಬದ್ಧತೆ ಹಾಗೂ ನಿರಂತರತೆ ಇದ್ದರೆ ನಿಧಾನವಾಗಿಯಾದರೂ ಯಶಸ್ಸು ಬರುತ್ತೆ, ಬಂದಮೇಲೆ ಇದು ಶಾಶ್ವತವಾಗಿ ಇರುತ್ತೆ' ಎಂದಿದ್ದಾರೆ ಸನ್ನಿ ಲಿಯೋನ್. ಈಗೇನಾಗಿದೆ ಎಂಬುದನ್ನು ನೀವೇ ಅರ್ಥ ಮಾಡಿಕೊಳ್ಳಿ...!

# ಹೀರೋಗಾಗಿ ಅಮ್ಮನ ಕೇಳಿ ಬಿಕಿನಿ ಹಾಕೊಂಡ ನಟಿ!

ಈಗಿನ ನಟಿಯರು ಗ್ಲಾಮರ್ ತೋರಿಸಲು ಹಿಂದೆ ಸರಿಯುವುದಿಲ್ಲ. ಸಾಯಿ ಪಲ್ಲವಿ, ನಿತ್ಯಾ ಮೆನನ್ ರೀತಿಯ ಕೆಲವೇ ನಟಿಯರು ಗ್ಲಾಮರ್ ಶೋಗೆ ದೂರ ಉಳಿಯುತ್ತಾರೆ. ಮಾಸ್ ಆಡಿಯನ್ಸ್‌ಗೆ ಅಟ್ರಾಕ್ಟ್ ಮಾಡಲು ಡೈರೆಕ್ಟರ್ಸ್ ಫಾಲೋ ಮಾಡುವ ಒಂದು ಟೆಕ್ನಿಕ್ ಗ್ಲಾಮರ್ ಅಂತ ಹೇಳಬಹುದು.

ಕೆಲವು ನಟಿಯರು ಬೇಕೆಂದ್ರೆ ಬಿಕಿನಿ ಶೋ, ರೊಮ್ಯಾಂಟಿಕ್ ಸೀನ್‌ಗಳಿಗೂ ರೆಡಿಯಾಗ್ತಾರೆ. ಹಿಂದೆ ಒಂದು ಕ್ರೇಜಿ ನಟಿ ಬಿಕಿನಿ ಹಾಕೊಂಡಿದ್ದು ದೊಡ್ಡ ವಿವಾದವಾಗಿತ್ತು. ಆ ವಿಷಯ ಏನು ಅಂತ ನೋಡೋಣ. ಕ್ರೇಜಿ ನಟಿ ಪ್ರಿಯಾಮಣಿ 2003ರಲ್ಲಿ ಸಿನಿಮಾ ರಂಗಕ್ಕೆ ಎಂಟ್ರಿ ಕೊಟ್ಟರು. ತೆಲುಗಿನಲ್ಲಿ ಅವರಿಗೆ ಗುರುತು ಸಿಕ್ಕಿದ್ದು 2006ರಲ್ಲಿ ಜಗಪತಿ ಬಾಬು ಜೊತೆ ನಟಿಸಿದ ಪೆಳ್ಳೈನಾ ಕೊತ್ತಾಲೋ ಚಿತ್ರದಿಂದ. ಈ ರೊಮ್ಯಾಂಟಿಕ್ ಮೂವಿ ಇಂದ ಪ್ರಿಯಾಮಣಿ ಟಾಲಿವುಡ್ ಫಿಲಂ ಮೇಕರ್ಸ್‌ನ ಆಕರ್ಷಿಸಿದರು.



ಆ ನಂತರ ಪ್ರಿಯಾಮಣಿಗೆ ರಾಜಮೌಳಿ, ಎನ್‌ಟಿಆರ್ ಯಮದೊಂಗ ಚಿತ್ರದಲ್ಲಿ ನಟಿಸುವ ಗೋಲ್ಡನ್ ಚಾನ್ಸ್ ಸಿಕ್ಕಿತು. ಈ ಮೂವಿ ಸೂಪರ್ ಹಿಟ್ ಆಗಿದ್ದರಿಂದ ಟಾಲಿವುಡ್‌ನಲ್ಲಿ ಪ್ರಿಯಾಮಣಿ ಸ್ಟಾರ್ ಬ್ಯೂಟಿ ಆಗಿ ಬದಲಾದರು. ತರುಣ್ ಜೊತೆ ನಟಿಸಿದ ನವ ವಸಂತಂ, ಕಲ್ಯಾಣ್ ರಾಮ್ ಜೊತೆ ನಟಿಸಿದ ಹರೇ ರಾಮ್, ರವಿತೇಜ ಜೊತೆ ಶಂಭೋ ಶಿವ ಶಂಭೋ ರೀತಿಯ ಹಿಟ್ಸ್ ಅನ್ನು ಪ್ರಿಯಾಮಣಿ ತಮ್ಮ ಖಾತೆಗೆ ಹಾಕಿಕೊಂಡರು. ನಾಗಾರ್ಜುನ, ಬಾಲಯ್ಯ ರೀತಿಯ ಸೀನಿಯರ್ ಸ್ಟಾರ್ ಹೀರೋಗಳ ಜೊತೆ ಕೂಡ ಪ್ರಿಯಾಮಣಿ ನಟಿಸಿದ್ದಾರೆ.

ಸ್ಟಾರ್ ಹೀರೋಗಳ ಸಿನಿಮಾಗಳಲ್ಲಿ ನಟಿಸಿದ್ರೂ ಕೂಡ ಪ್ರಿಯಾಮಣಿ ಬಿಕಿನಿ ಹಾಕಿರಲಿಲ್ಲ. ಗ್ಲಾಮರ್ ತೋರಿಸಿದ್ರು, ಆದರೆ ಬಿಕಿನಿ ಹತ್ತಿರ ಹೋಗಲಿಲ್ಲ. ಆದರೆ ಒಂದು ಹೀರೋ ಸಿನಿಮಾದಲ್ಲಿ ಬಿಕಿನಿ ಹಾಕಿಕೊಳ್ಳಲು ಪ್ರಿಯಾಮಣಿ ಒಪ್ಪಿಕೊಂಡಿದ್ದರಿಂದ ಆಗ ದೊಡ್ಡ ಚರ್ಚೆಯಾಗಿತ್ತು. ನಿತಿನ್ ನಟಿಸಿದ ದ್ರೋಣ ಚಿತ್ರದಲ್ಲಿ ಪ್ರಿಯಾಮಣಿ ಬಿಕಿನಿ ಧರಿಸಿ ಬೋಲ್ಡ್ ಆಗಿ ಗ್ಲಾಮರ್ ತೋರಿಸಿದರು. ರಿಲೀಸ್‌ಗೆ ಮುಂಚೆ ಅವರ ಬಿಕಿನಿ ಸ್ಟಿಲ್ಸ್ ಲೀಕ್ ಆಗಿದ್ದರಿಂದ ದೊಡ್ಡ ಗಲಾಟೆ ಆಯಿತು. ನಿರ್ಮಾಪಕರು, ಪ್ರಿಯಾಮಣಿ ಮಧ್ಯೆ ಜಗಳ ಆಯಿತು, ಅಲ್ಲದೇ ಅವರು ಎಕ್ಸ್ಟ್ರಾ ಸಂಭಾವನೆ ಕೇಳಿದ್ರು ಅಂತ ಸುದ್ದಿಗಳು ಬಂದವು.

ಆದರೆ ಈ ವಿವಾದದ ಬಗ್ಗೆ ನಿರ್ಮಾಪಕ ಡಿ.ಎಸ್. ರಾವ್ ಕ್ಲಾರಿಟಿ ಕೊಟ್ಟಿದ್ದಾರೆ. ಬಿಕಿನಿ ವಿಚಾರದಲ್ಲಿ ಪ್ರಿಯಾಮಣಿ ಜಗಳ ಮಾಡಿದ್ದು, ಸಂಭಾವನೆ ಜಾಸ್ತಿ ಕೇಳಿದ್ದು ಸುಳ್ಳು ಅಂತ ಹೇಳಿದ್ದಾರೆ. ಅವರು ತುಂಬಾ ಒಳ್ಳೆಯ ನಟಿ, ಬಿಕಿನಿ ಸೀನ್‌ಗಳನ್ನು ಪ್ರೊಫೆಷನಲ್ ಆಗಿ ತೆಗೆದುಕೊಂಡಿದ್ದಾರೆ. ಆದರೆ ಈ ಚಿತ್ರದಲ್ಲಿ ಬಿಕಿನಿ ಹಾಕಿಕೊಳ್ಳಬೇಕು ಅಂತ ನಾವು ಅವರಿಗೆ ಲೇಟಾಗಿ ಹೇಳಿದ್ವಿ. ಸುಮಾರು 80 ಪರ್ಸೆಂಟ್ ಶೂಟಿಂಗ್ ಮುಗಿದ ಮೇಲೆ ಡೈರೆಕ್ಟರ್ ಅವರಿಗೆ ಬಿಕಿನಿ ಸಾಂಗ್ ಪ್ಲಾನ್ ಮಾಡ್ತಾ ಇದೀವಿ ಅಂತ ಹೇಳಿದ್ರು. ಕಮರ್ಷಿಯಲ್ ಆಗಿ ವರ್ಕೌಟ್ ಆಗುತ್ತೆ, ಸೋಲೋ ಸಾಂಗ್ ಅಂತ ಹೇಳಿದ್ರು.

ಇದರಿಂದ ಪ್ರಿಯಾಮಣಿ 10 ನಿಮಿಷ ಟೈಮ್ ಕೇಳಿ ಕ್ಯಾರವ್ಯಾನ್ ಒಳಗೆ ಹೋದರು. ಅವರ ಅಮ್ಮನ ಜೊತೆ ಚರ್ಚಿಸಿ ಹೊರಗೆ ಬಂದು ಓಕೆ ಅಂದರು ಅಂತ ನಿರ್ಮಾಪಕ ಡಿ.ಎಸ್. ರಾವ್ ತಿಳಿಸಿದ್ದಾರೆ. ರಿಲೀಸ್‌ಗೆ ಮುಂಚೆ ಆ ಫೋಟೋಗಳನ್ನು ಹೈಪ್‌ಗೋಸ್ಕರ ನಾವೇ ರಿಲೀಸ್ ಮಾಡಿದ್ವಿ. ಪ್ರಿಯಾಮಣಿ ಬಿಕಿನಿಯಿಂದ ಆ ಚಿತ್ರಕ್ಕೆ ಒಳ್ಳೆ ಓಪನಿಂಗ್ಸ್ ಸಿಕ್ಕಿತು ಅಂತ ನಿರ್ಮಾಪಕ ಡಿ.ಎಸ್. ರಾವ್ ಒಪ್ಪಿಕೊಂಡಿದ್ದಾರೆ. ಆ ಚಿತ್ರಕ್ಕೆ ಮಿಕ್ಸೆಡ್ ಟಾಕ್ ಬಂದರೂ ಓಪನಿಂಗ್ಸ್‌ನಿಂದ ಸೇಫ್ ಆದೆ ಅಂತ ಹೇಳಿದ್ದಾರೆ.

# 50 ದಾಟಿದ್ರೂ ಬ್ಯಾಚುಲರ್ ಆಗಿರೋ ನಟಿ

ಆಕೆ ಒಬ್ಬ ಸ್ಟಾರ್ ಹೀರೋಯಿನ್, ಸುಮಾರು 90 ಸಿನಿಮಾಗಳವರೆಗೂ ಮಾಡಿದ್ದಾರೆ. ಇಂಡಿಯಾದಲ್ಲಿ ಸುಮಾರು 10 ಭಾಷೆಗಳಲ್ಲಿ ಸಿನಿಮಾ ಮಾಡಿದ್ದಾರೆ. ಎಲ್ಲಾ ಭಾಷೆಗಳಲ್ಲೂ ಸ್ಟಾರ್ ಹೀರೋಯಿನ್‌ಗಳ ಸಾಲಿನಲ್ಲಿ ಮಿಂಚಿದ್ದಾರೆ.

ಸೌತ್ ನಾರ್ತ್ ಎಲ್ಲಾ ಕಡೆನೂ ಸ್ಟಾರ್ ಡಮ್ ಸಾಧಿಸಿದ್ದಾರೆ. ಅಷ್ಟೇ ಅಲ್ಲ, ಆಕೆ ಮಾಡಿದ ಸಿನಿಮಾಗಳಲ್ಲಿ ಸುಮಾರು ಎಲ್ಲವೂ ಸೂಪರ್ ಹಿಟ್. ತನ್ನ ಕೆರಿಯರ್‌ನಲ್ಲಿ ಫ್ಲಾಪ್ ಸಿನಿಮಾಗಳನ್ನು ತುಂಬಾ ಕಡಿಮೆ ನೋಡಿದ್ದಾರೆ. ಮದುವೆ ಗಿದ್ವೆ ಇಲ್ಲದೆ ಒಂಟಿ ಜೀವನ ನಡೆಸುತ್ತಿರುವ ಈ ಸ್ಟಾರ್ ಹೀರೋಯಿನ್ ಯಾರು ಗೊತ್ತಾ..?

ಇಷ್ಟಕ್ಕೂ ಆಕೆ ಯಾರೂ ಅಲ್ಲ, ಒಂದು ಕಾಲದ ಸ್ಟಾರ್ ಬ್ಯೂಟಿ ನಗ್ಮಾ. ಹೌದು, ನಗ್ಮಾ ಎಲ್ಲರಿಗೂ ನೆನಪಿರುತ್ತಾರೆ. ತೆಲುಗಿನಲ್ಲಿ ಚಿರಂಜೀವಿ, ನಾಗಾರ್ಜುನ, ಬಾಲಯ್ಯ, ವೆಂಕಟೇಶ್, ಸುಮನ್, ಹೀಗೆ ಸ್ಟಾರ್ ಹೀರೋಗಳ ಜೊತೆ ನಟಿಸಿ ಮೆಚ್ಚುಗೆ ಪಡೆದಿದ್ದಾರೆ. ತಮಿಳು, ಮಲಯಾಳಂ, ಕನ್ನಡ ಸಿನಿಮಾಗಳಲ್ಲೂ ಮಿಂಚಿದ ನಗ್ಮಾ.. ಬಾಲಿವುಡ್‌ನಲ್ಲೂ ಸ್ಟಾರ್ ಇಮೇಜ್ ತಂದುಕೊಂಡಿದ್ದಾರೆ. ಹೀರೋಯಿನ್ ಆಗಿ ಆಫರ್‌ಗಳು ಕಡಿಮೆಯಾದ ತಕ್ಷಣ ಸಿನಿಮಾಗಳನ್ನು ಬಿಟ್ಟರು ನಗ್ಮಾ. ಅವರ ತಂಗಿಯಂದಿರು ಇಬ್ಬರು ಇಂಡಸ್ಟ್ರಿಯಲ್ಲಿ ಹೀರೋಯಿನ್ಸ್‌ಗಳಾಗಿ ಮಿಂಚಿದ್ದು ನಿಮಗೆಲ್ಲಾ ಗೊತ್ತೇ ಇದೆ. ಇನ್ನು ಈ ಬ್ಯೂಟಿ ಫ್ಯಾಮಿಲಿ ಬ್ಯಾಕ್ಗ್ರೌಂಡ್ ಏನು ಅಂದ್ರೆ.. ? ನಗ್ಮಾ ಫ್ಯಾಮಿಲಿಯಲ್ಲಿ ಬೇರೆ ಬೇರೆ ಮತಗಳು ಸೇರಿವೆ. ಅವರ ತಂದೆ ಅರವಿಂದ್ ಮೊರಾರ್ಜಿ ಹಿಂದೂ, ತಾಯಿ ಶಾಮಾ ಮಾತ್ರ ಕಾಜಿ ಮುಸ್ಲಿಂ. ತಂದೆ ವ್ಯಾಪಾರಸ್ಥ. ಅವರ ಪೂರ್ವಜರು ಜೈಸಲ್ಮೇರ್‌ಗೆ ಸೇರಿದವರು. ಮುಂಬೈಗೆ ಬಂದು ಸೆಟಲ್ ಆದರು. ಇನ್ನು ತಾಯಿ ಮುಸ್ಲಿಂ ಆದರೂ.. ಅವರ ಫ್ಯಾಮಿಲಿ ಮಾತ್ರ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬ ಆಗಿದ್ದು ವಿಶೇಷ. ಶಾಮಾ, ಅರವಿಂದ್ 1969ರಲ್ಲಿ ಮದುವೆ ಮಾಡಿಕೊಂಡರು. ನಗ್ಮಾ ಹೊಟ್ಟೆಯಲ್ಲಿ ಇರುವಾಗಲೇ 1974ರಲ್ಲಿ ಬೇರೆಯಾದರು. ಆ ನಂತರ ಶಾಮಾ, ಸಿನೀ ನಿರ್ಮಾಪಕ ಚಂದರ್ ಸದಾನಾನಿ ಮದುವೆ ಮಾಡಿಕೊಂಡರು. ಇವರಿಗೆ ಜ್ಯೋತಿಕಾ, ರೋಶಿಣಿ (ರಾಧಿಕಾ) ಎಂಬ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ ಇದ್ದಾರೆ.

ನಗ್ಮಾ ಇಬ್ಬರು ತಂಗಿಯಂದಿರನ್ನು ಹೀರೋಯಿನ್ಸ್‌ಗಳಾಗಿ ಮಾಡಿದ್ದಾರೆ. ಅದರಲ್ಲಿ ನಗ್ಮಾ ದೊಡ್ಡ ತಂಗಿ ಜ್ಯೋತಿಕಾ ಸ್ಟಾರ್ ಹೀರೋಯಿನ್ ಆಗಿ ಸೌತ್‌ನಲ್ಲಿ ಮಿಂಚಿದ್ದಾರೆ. ತಮಿಳು ಸ್ಟಾರ್ ಹೀರೋ ಸೂರ್ಯನ ಮದುವೆಯಾಗಿದ್ದಾರೆ. ಇನ್ನು ನಗ್ಮಾಗೆ ತನ್ನ ತಂದೆ ಅಂದ್ರೆ ತುಂಬಾ ಇಷ್ಟ. ತಂದೆ 2005ರಲ್ಲಿ ಮರಣ ಹೊಂದಿದರು.. ಅವರು ಸಾಯೋವರೆಗೂ ತುಂಬಾ ಹತ್ತಿರವಾಗಿದ್ದರು. ತಾಯಿ ಹತ್ತಿರಕ್ಕಿಂತ ತಂದೆ ಹತ್ತಿರವೇ ನಗ್ಮಾ ಹೆಚ್ಚಾಗಿ ಇರುತ್ತಿದ್ದರು. ಇನ್ನು ಸಿನಿಮಾ ಮಾಡಲು ಮಾತ್ರ ನಗ್ಮಾರನ್ನು ಪ್ರೋತ್ಸಾಹಿಸಿದ್ದು ತಾಯಿ ಶಾಮಾ.

1990ರಲ್ಲಿ ಸಲ್ಮಾನ್ ಖಾನ್ ಸಿನಿಮಾ ಜೊತೆ ಬಾಲಿವುಡ್ ಎಂಟ್ರಿ ಕೊಟ್ಟ ನಗ್ಮಾ.. ಅಲ್ಲಿಂದ ಕೆರಿಯರ್‌ನಲ್ಲಿ ಹಿಂದಿರುಗಿ ನೋಡಲೇ ಇಲ್ಲ. ಆ ನಂತರ ಅವರು ಮಾಡಿದ ಸಿನಿಮಾಗಳೆಲ್ಲಾ ಸೂಪರ್ ಹಿಟ್, ಇನ್ನು ಸೌತ್‌ನಲ್ಲಿ ಆದರೆ.. ಭಾಷಾ, ರೌಡಿ ಅಲ್ಲುಡು, ರಿಕ್ಷಾವೋಡು ರೀತಿಯ ಬ್ಲಾಕ್ ಬಸ್ಟರ್ ಹಿಟ್ಗಳನ್ನು ಪಡೆದರು ನಗ್ಮಾ. ಸೌತ್ ಆಡಿಯನ್ಸ್‌ನಲ್ಲಿ ಅವರ ಕ್ರೇಜ್ ಹೇಗಿತ್ತು ಅಂದ್ರೆ ನಗ್ಮಾಗೆ ಗುಡಿ ಕಟ್ಟಿಸಿದ್ದರು, ಅಷ್ಟು ಇಷ್ಟಪಟ್ಟರು ಇಲ್ಲಿನ ಆಡಿಯನ್ಸ್.

ಇನ್ನು ನಗ್ಮಾ ಸುಮಾರು 80ಕ್ಕಿಂತ ಹೆಚ್ಚು ಸಿನಿವಾಗಳಲ್ಲಿ ನಟಿಸಿದ್ದಾರೆ. 10 ಭಾಷೆಗಳಲ್ಲಿ ನಟಿಸಿದ್ದಾರೆ. ಆ ಭಾಷೆಗಳನ್ನು ಮಾತನಾಡಬಲ್ಲರು ಕೂಡ. ಇನ್ನು ಫೇಡ್ ಔಟ್ ಆದ ನಂತರ ಸಿನಿಮಾಗಳನ್ನು ಬಿಟ್ಟ ನಗ್ಮಾ.. ಆ ನಂತರ ರಾಜಕೀಯಕ್ಕೆ ಸೇರಿದರು. ಸದ್ಯ ಕಾಂಗ್ರೆಸ್ ಪಾರ್ಟಿಯಲ್ಲಿ ಅವರು ಮುಂದುವರೆಯುತ್ತಿದ್ದಾರೆ. ಹೀರೋಯಿನ್ ಆಗಿದ್ದ ಕಾಲದಲ್ಲಿ ಸ್ಟಾರ್ ಕ್ರಿಕೆಟರ್ ಗಂಗೂಲಿ ಜೊತೆ ಅವರಿಗೆ ಅಫೇರ್ ಇದೆ ಅಂತ ರೂಮರ್‌ಗಳು ಜೋರಾಗಿ ಕೇಳಿಬಂದವು.

ಮತ್ತಿಬ್ಬರು ಸ್ಟಾರ್‌ಗಳ ಜೊತೆ ಅವರು ಡೇಟಿಂಗ್ ಮಾಡಿದ್ದಾರೆ ಅಂತ ಸುದ್ದಿಗಳು ವೈರಲ್ ಆದವು. ಇನ್ನು ಪ್ರಸ್ತುತ 50 ವರ್ಷ ದಾಟಿದ ನಗ್ಮಾ.. ಮದುವೆ ಆಗದೆ ಬ್ಯಾಚುಲರ್ ಲೈಫ್ ಎಂಜಾಯ್ ಮಾಡುತ್ತಿದ್ದಾರೆ. ಪಾಲಿಟಿಕ್ಸ್‌ನಲ್ಲಿ ಬ್ಯುಸಿ ಆಗಿಬಿಟ್ಟಿದ್ದಾರೆ.



ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: **944807487**